ನಮ್ಮ ಮಾನಸ

ಸಂಪುಟ : 3 ನವೆಂಬರ್ 2009 ಸಂಚಿಕೆ : 7



ಎಲ್ಲರಿಗೂ ಉಣಿಸುವಳು
ಅದಕ್ಕೇ ಉಣ್ಣುವಳು
ಎಲ್ಲರದೂ ಉಂಡು ಆದಮೇಲೆ

ಕುಡಿಸುತ್ತಾಳೆ
ಅದಕ್ಕೇ ತಾನೆಂದು
ಸ್ವತಃ ಕುಡಿಯಲಾರಳು

ಜನನಿ ಆಕೆ
ಧರಣಿ ಆಕೆ
ಅದಕ್ಕೇ ಈ ಪೃಥ್ವಿಯ ಮೇಲೆ
ಮೈಚಾಚಲಿಕ್ಕೇ ಇಲ್ಲ ಪೂರ್ತಿ ಜಾಗ...

ಕನ್ನಡಕ್ಕೆ "ಶಾಸ್ತ್ರೀಯ ಭಾಷೆ" ಸ್ಥಾನಮಾನ

ಇದಕ್ಕಾಗಿ ಹೋರಾಡಿದ ಸಮಸ್ತ ಕನ್ನಡಿಗರಿಗೆ ವಂದನೆ, ಅಭಿನಂದನೆ

ಕರ್ನಾಟಕ–ಸುಂದರ ನದಿವನಗಳ ನಾಡು. ಕಲೆ ಸಂಸ್ಕೃತಿಗಳ ಬೀಡು. ಕವಿಗಳು, ವಚನಕಾರರು, ದಾಸಶ್ರೇಷ್ಠರುಗಳ ನೆಲೆವೀಡು. ವೀರ ವನಿತೆಯರ ಪುಣ್ಯಭೂಮಿ. ಮಾದರಿ ಆಡಳಿತದ ಮಾರ್ಗದರ್ಶಿ ರಾಜ್ಯ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದ ತವರೂರು. ಕರ್ನಾಟಕದ ರಾಜಧಾನಿ ಬೆಂಗಳೂರು ವಿಶ್ವವಿಖ್ಯಾತಿಯ ನಗರ. ಇಂತಹ ಭವ್ಯ ಪರಂಪರೆ, ಹಿನ್ನೆಲೆಯ ಭದ್ರ ಬುನಾದಿಯ ಮೇಲೆ

ಸಮೃದ್ಧ ಕರ್ನಾಟಕವನ್ನು ಕಟ್ಟುವ ಸಂಕಲ್ಪ ನಮ್ಮದು

ನಾಡು ನುಡಿಗೆ ವಿಶೇಷ ಕಾರ್ಯಕ್ರಮಗಳು

* ಬೆಂಗಳೂರಿನಲ್ಲಿ ವರನಟ ಡಾ. ರಾಜ್‌ಕುಮಾರ್ ಸ್ಮಾರಕ ನಿರ್ಮಾಣಕ್ಕೆ 8 ಕೋಟಿ ರೂ.
* ಬೆಳಗಾವಿಯಲ್ಲಿ ವಿಶ್ವ ಕನ್ನಡ ಸಮ್ಮೇಳನಕ್ಕಾಗಿ 25 ಕೋಟಿ ರೂ.
* ರಾಜ್ಯದ ಗಡಿಜಿಲ್ಲೆಗಳಲ್ಲಿ 4 ಸುವರ್ಣ ಕರ್ನಾಟಕ ಭವನಗಳ ನಿರ್ಮಾಣಕ್ಕೆ 5 ಕೋಟಿ ರೂ.
* ರಾಜ್ಯ ಮಟ್ಟದಲ್ಲಿ ಪ್ರಪ್ರಥಮ ಬಾರಿಗೆ ಸಂತಕವಿ ಕನಕದಾಸರ ಜಯಂತಿ ಆಚರಣೆ. ಕನಕ ಜಯಂತಿಗೆ ಸಾರ್ವತ್ರಿಕ ರಜೆ, ಕನಕದಾಸರ ಜನ್ಮಸ್ಥಳ "ಬಾಡ" ಅಭಿವೃದ್ಧಿಗೆ 1 ಕೋಟಿ ರೂ.
* ಕನ್ನಡದ ಮೇರು ಕೃತಿಗಳು ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಕೃತಿಗಳ ಪುನರ್ ಮುದ್ರಣ
* ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಸಂಶೋಧನಾ ಕೇಂದ್ರ, ಶಿವಯೋಗಿ ಶಿಶುನಾಳ ಶರೀಫರ ಸಮಾಧಿ ಮತ್ತು ಸಂಗೊಳ್ಳಿ ರಾಯಣ್ಣ ಜನ್ಮಸ್ಥಳ ಅಭಿವೃದ್ಧಿಗೆ ತಲಾ 1 ಕೋಟಿ ರೂ.
* ಅಲ್ಲಮಪ್ರಭು ಸಾಹಿತ್ಯ ಸಂಶೋಧನಾ ಕೇಂದ್ರ ಸ್ಥಾಪನೆ
* ಮೈಸೂರಿನಲ್ಲಿ ಸ್ವಾಮಿ ವಿವೇಕಾನಂದರ ಭೇಟಿ ನೆನಪಿಗೆ ಸಾಂಸ್ಕೃತಿಕ ಯುವ ಕೇಂದ್ರ ಸ್ಥಾಪನೆಗೆ 5 ಕೋಟಿ ರೂ.
* ಹಂಪಿ ಉತ್ಸವ, ಕಿತ್ತೂರು ಉತ್ಸವ, ಕದಂಬ ಉತ್ಸವ, ಕರಾವಳಿ ಉತ್ಸವ ಇತ್ಯಾದಿ ಸಾಂಸ್ಕೃತಿಕ ಉತ್ಸವಗಳ ಮೂಲಕ ನಾಡಿನಾದ್ಯಂತ ಕಲೆ ಸಂಸ್ಕೃತಿಗಳ ಪುನರುಜ್ಜೀವನಕ್ಕೆ ಪ್ರೋತ್ಸಾಹ
* ರಾಜ್ಯೋತ್ಸವ ಪ್ರಶಸ್ತಿ ವಿಜೇತರಿಗೆ ಪ್ರಪ್ರಥಮಬಾರಿಗೆ 1 ಲಕ್ಷ ರೂ. ನಗದು ಬಹುಮಾನ
* ಅನಿವಾಸಿ ಕನ್ನಡಿಗರಿಗಾಗಿ "ಆದಿವಾಸಿ ಕನ್ನಡಿಗರ ಕೋಶ" ಸ್ಥಾಪನೆ

ಅಭಿವೃದ್ಧಿಯೇ ಆಡಳಿತ ಮಂತ್ರ

ಕಟ್ಟುವೆವು ನಾವು ಹೊಸ ನಾಡೊಂದನು

ಕರ್ನಾಟಕ ವಾರ್ತೆ

ನಮ್ಮ ಮಾನಸ

ನವಂಬರ್ 2009

ಸಂಪುಟ : 3 ಸಂಚಿಕೆ : 7

Editor, Printer and Publisher
Rajeshwari H.S.,
No. 114/5, 9th Cross, 2nd Main
Chamarajpet, Bangalore - 560 018.
Mobile : 9449345698

Printed at
ILA Mudrana
No. 36, 40 Ft. Road, Raghavanagara,
New Timberyard Layout
Bangalore-26.
✆ : 26757159

ಚಂದಾ ವಿವರ

ಬಿಡಿಪ್ರತಿ	**8–00 ರೂ.**
ವಾರ್ಷಿಕ ಚಂದಾ	**100–00 ರೂ.**
(ವಿಶೇಷ ಸಂಚಿಕೆಯೊಂದಿಗೆ)	
ಸಂಸ್ಥೆಗಳಿಗೆ	**150–00 ರೂ.**

ನಮ್ಮ ಮಾನಸ

114/5, 9ನೇ ತಿರುವು, 2ನೇ ಮುಖ್ಯರಸ್ತೆ,
ಚಾಮರಾಜಪೇಟೆ, ಬೆಂಗಳೂರು – 560 018

ಚಂದಾಹಣವನ್ನು ಈ ವಿಳಾಸಕ್ಕೆ ಚೆಕ್ ಅಥವಾ ಡಿ.ಡಿ. ಮೂಲಕ ಕಳಿಸಬಹುದು

– – –

ಮೈಸೂರಿನಲ್ಲಿ ಓದುಗರು ಪ್ರತಿಗಳಿಗೆ ಹಾಗೂ ಚಂದಾ ನವೀಕರಣಕ್ಕೆ ಸಂಪರ್ಕಿಸಿ

ವೆಂ. ವನಜ

2329, 12ನೇ ಮೈನ್, 2ನೇ ಹಂತ,
ವಿಜಯನಗರ, ಮೈಸೂರು – 570 017

ಪ್ರಾರಂಭ : 'ಮಾನುಷಿ' (1985ರಲ್ಲಿ),
ಅನಂತರ 'ಮಾನಸ',
ಈಗ 'ನಮ್ಮ ಮಾನಸ'

ಸಂಪಾದಕೀಯ

ಅನೈತಿಕ ಸರ್ಕಾರದ ವಿರುದ್ಧ ನೈತಿಕ ಹೋರಾಟ

ಭಾರತ ತನ್ನ 62ನೇ ವರ್ಷದ ಸ್ವಾತಂತ್ರ್ಯವನ್ನು ಸಂಭ್ರಮದಿಂದ ಆಚರಿಸುತ್ತಿದ್ದಾಗ ಮಣಿಪುರದ ಮಹಿಳೆಯರು ರಾಜ್ಯಪ್ರಭುತ್ವದ ಇತ್ತೀಚಿನ ದೌರ್ಜನ್ಯಗಳನ್ನು ವಿರೋಧಿಸಿ ಬೀದಿಯಲ್ಲಿ ನಿಂತು ಪ್ರತಿಭಟಿಸುತ್ತಿದ್ದರು. ಅವರ ಹತಾಶೆ, ಕೋಪ, ರೋಷ ಅವರನ್ನು ಬೀದಿಗೆ ಇಳಿಯುವಂತೆ ಮಾಡಿತ್ತು. ಕೊಲೆ, ಅತ್ಯಾಚಾರ, ಸುಲಿಗೆ ಇವು ದಿನನಿತ್ಯ ಬದುಕಿನ ಭಾಗವಾಗಿ ಹೋಗಿರುವ ಮಣಿಪುರದಲ್ಲಿ ಮಹಿಳೆಯರ ಬದುಕು ಅಸಹನೀಯವಾಗಿದೆ.

ಮಣಿಪುರದಲ್ಲಿ ಇರುವ ಜನಸಂಖ್ಯೆ 25 ಲಕ್ಷದಷ್ಟು, ತಾವು ಮಣಿಪುರದವರು ಎಂದು ಸಾಬೀತುಪಡಿಸಲು ಅಧಿಕಾರಿಗಳು ಹಾಗೂ ಇತರ ಮಿಲಿಟೆಂಟ್ಸ್ ಪ್ರಶ್ನಿಸಿದಾಗ ಜನರು ಅವರಿಗೆ ಗುರುತಿನ ಚೀಟಿ ತೋರಿಸಬೇಕಾಗಿದೆ! ಇಲ್ಲಿನ ನಾಗರಿಕರನ್ನು ಇನ್ನಷ್ಟು ರೋಷಕ್ಕೆ ತಳ್ಳುವ ಸಂಗತಿ ಇದಾಗಿದೆ. ಎಲ್ಲೆಲ್ಲೂ ಹಿಂಸೆ ಹೆಚ್ಚಾಗಿದ್ದು ಮಣಿಪುರ ಹೊತ್ತಿಕೊಂಡು ಉರಿಯುತ್ತಿದೆ. ಮಣಿಪುರದಲ್ಲಿ ಸುಮಾರು 40 ಮಿಲಿಟೆಂಟ್ ಗುಂಪುಗಳು ತಲೆ ಮರೆಸಿಕೊಂಡು ಕೆಲಸ ಮಾಡುತ್ತಿವೆ. ಜೊತೆಗೆ ಸಶಸ್ತ್ರ ಸೈನಿಕಪಡೆ ಇತ್ಯಾದಿಗಳು. ಇವೆರಡರ ನಡುವಿನ ತಿಕ್ಕಾಟದಲ್ಲಿ ನಡೆಯುತ್ತಿರುವ ಹಿಂಸೆಯಿಂದಾಗಿ ಮಣಿಪುರದ ಮಹಿಳೆಯರಿಗೆ 'ಸಾಮಾನ್ಯ ನಿತ್ಯದ ಬದುಕಿನ' ಪರಿಕಲ್ಪನೆಯೇ ಇಲ್ಲದಂತಾಗಿದೆ. ಬೆಳಗಿನ ಜಾವದಿಂದ ಕತ್ತಲಿನವರೆಗೆ ಯಾವಾಗಲೂ ಕರ್ಫ್ಯೂ ಜಾರಿಯಲ್ಲಿ ಇರುವುದರಿಂದ ಮಕ್ಕಳಿಗೆ ಆಹಾರ, ನೀರು, ಆರೋಗ್ಯ, ಶಿಕ್ಷಣ ಒದಗಿಸುವಂತಹ ಜವಾಬ್ದಾರಿಯ ಹೊರೆಯನ್ನು ಮಹಿಳೆಯರೇ ಹೊರಬೇಕಾಗಿದೆ.

ತಲೆ ಮರೆಸಿಕೊಂಡು ಕೆಲಸ ಮಾಡುತ್ತಿರುವ ಮಿಲಿಟೆಂಟ್ ಗುಂಪುಗಳು ಹೆಂಗಸರನ್ನು ಕೊರಿಯರ್ ತಲುಪಿಸುವ ಕೆಲಸಕ್ಕಾಗಿ ಬಳಸಿಕೊಳ್ಳುತ್ತಾರೆ. ಮಿಲಿಟೆಂಟ್ ಗುಂಪುಗಳು ನಡೆಸುವ ಅಮಾನವೀಯ ದೌರ್ಜನ್ಯಗಳ ಬಗ್ಗೆ, ಕೊಲೆಗಳ ಬಗ್ಗೆ ಕೂಡಾ ಮಹಿಳೆಯರು ಪ್ರತಿಭಟನೆ ಮಾಡಿದ್ದಾರೆ. ಶಸ್ತ್ರಾಸ್ತ್ರ ಪಡೆಯ ಸೈನಿಕ ಅಧಿಕಾರಿಗಳು ಬಸಿರಿ ಹೆಂಗಸೊರ್ವಳನ್ನು ಗುಂಡಿಟ್ಟು ಕೊಂದಾಗ ಸಾವಿರಾರು ಮಹಿಳೆಯರು ಬೀದಿಗಿಳಿದು ಪ್ರತಿಭಟನೆ ಮಾಡಿದ್ದಾರೆ. ಇನ್ನು ಸಹಿಸಲು ಸಾಧ್ಯವೇ ಇಲ್ಲ ಎನ್ನುವ ಸ್ಥಿತಿಯಲ್ಲಿ ಮಹಿಳೆಯರು ತಮ್ಮ ಕೊಲೆ ಅಥವಾ ಬಂಧನಕ್ಕೂ ಸಿದ್ಧರಾಗಿಯೇ ಬೀದಿಗೆ ಇಳಿದು ಪ್ರತಿಭಟನೆ ಮಾಡುತ್ತಿದ್ದಾರೆ.

ಮಣಿಪುರದ ಮಹಿಳಾ ಹೋರಾಟಕ್ಕೆ 1904ರಿಂದಲೂ ಒಂದು ಇತಿಹಾಸವಿದೆ. 1904ರಲ್ಲಿ ನ್ಯುಪಿಲ್ಯಾನ್ (ಮಹಿಳಾ ಯುದ್ಧ) ವಸಾಹತುಶಾಹಿ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿತ್ತು. ಎರಡನೆಯ ಬಾರಿ ನ್ಯುಪಿಲ್ಯಾನ್ 1939ರಲ್ಲಿ ಮಣಿಪುರದಿಂದ ಅಕ್ಕಿಯನ್ನು ರಫ್ತು ಮಾಡಬಾರದೆಂದು ಹೋರಾಟ ನಡೆಸಿತ್ತು. 1970ರಿಂದ ಸಾರಾಯಿ ವಿರುದ್ಧ ಹೋರಾಟ ಪ್ರಾರಂಭಿಸಿ, ಈಗ ಶಸ್ತ್ರಾಸ್ತ್ರ ಪಡೆಯ ವಿಶೇಷ ಅಧಿಕಾರದ ಕಾಯ್ದೆ ವಿರುದ್ಧ, ಕೊಲೆ, ಸುಲಿಗೆ, ಅನ್ಯಾಯ, ಅತ್ಯಾಚಾರ, ಹಿಂಸೆಯ ವಿರುದ್ಧವೂ ಕೂಡಾ ಹೋರಾಟ ನಡೆಸುತ್ತಿದೆ.

ಈ ಮಧ್ಯೆ ಇರೋಮ್ ಶರ್ಮಿಳ ಚಾನು ನಡೆಸುತ್ತಿರುವ ಹೋರಾಟ ಪ್ರಪಂಚದ ಗಮನ ಸೆಳೆದಿದೆ. ಆ್ಯಂಗ್ ಸಾನ್ ಸೂಕಿಯಂತೆ ಈಕೆ ಕೂಡಾ ನ್ಯಾಯ, ಶಾಂತಿ, ಅಹಿಂಸೆಯ ಪ್ರತೀಕವಾಗಿದ್ದಾರೆ. ಆಕೆಯ ಕುಟುಂಬದವರು ಬತ್ತದ ಗದ್ದೆಯಲ್ಲಿ ಕೆಲಸ ಮಾಡುತ್ತಾರೆ, ಅವರೇ ನೇಯ್ಗೆ ಮಾಡುತ್ತಾರೆ. ಮಣಿಪುರದಲ್ಲಿ ನಡೆಯುತ್ತಿರುವ ವಿನಾಶಕಾರಿ ಅಭಿವೃದ್ಧಿಯ ಬಗ್ಗೆ ಈಗ ಹತ್ತು ವರುಷಗಳಿಂದಲೂ ಪ್ರತಿರೋಧ ಒಡ್ಡುತ್ತಿರುವ ಶರ್ಮಿಳಾ ಚಾನು ಒಬ್ಬ ಸಾಮಾನ್ಯ ಹೆಂಗಸು. ಆದರೆ ಈಕೆ ಒಡ್ಡುತ್ತಿರುವ ಪ್ರತಿರೋಧ ಅಸಾಮಾನ್ಯವಾದುದು. ಶರ್ಮಿಳಾ

ಚಾನುರವರ ತಾಯಿ, ಅಜ್ಜಿ ಎಲ್ಲರೂ ಸಾಮಾನ್ಯ ಮಹಿಳೆಯರೇ. ಆದರೆ ಅವರೆಲ್ಲ ರಾಜಕೀಯ ಹಾಗೂ ಭಾವನಾತ್ಮಕವಾಗಿ ಗಟ್ಟಿ ನಿಲುವುಳ್ಳವರು ಮತ್ತು ಸಾಮಾಜಿಕ ಕಾರ್ಯದಲ್ಲಿ ಆಸಕ್ತಿ ಇರುವವರು.

ಶರ್ಮಿಳಾ ಅನೈತಿಕ ಸರ್ಕಾರದ ವಿರುದ್ಧ ನೈತಿಕ ಹೋರಾಟವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಗಾಂಧಿಯು ಬ್ರಿಟಿಷ್ ಸರ್ಕಾರದ ವಿರುದ್ಧ ಉಪವಾಸ ಸತ್ಯಾಗ್ರಹವನ್ನು ಅಹಿಂಸಾತ್ಮಕವಾಗಿ ಮಾಡಿದಂತೆ ಶರ್ಮಿಳಾ ಚಾನು ಕೂಡಾ ಮಣಿಪುರದ ಜನರ ಒಳಿತಿಗೆ, ಶಾಂತಿಗೆ, ನ್ಯಾಯಕ್ಕೆ ಕಳೆದ ಹತ್ತು ವರ್ಷಗಳಿಂದ ಭಾರತ ಸರ್ಕಾರದ ವಿರುದ್ಧ ಉಪವಾಸ ಸತ್ಯಾಗ್ರಹದಂಥ ಅಹಿಂಸಾತ್ಮಕ ಹೋರಾಟ ನಡೆಸಿದ್ದಾರೆ. 'ಪ್ರಗತಿ'ಯನ್ನು ಮರುವ್ಯಾಖ್ಯಾನ ಮಾಡುವುದಕ್ಕಾಗಿ, ಪ್ರಜಾಪ್ರಭುತ್ವಕ್ಕಾಗಿ ಹಾಗೂ ಶಸ್ತ್ರಾಸ್ತ್ರ ಪಡೆಯ ವಿಶೇಷ ಅಧಿಕಾರಿಗಳ ಕಾಯ್ದೆಯನ್ನು ವಾಪಸ್ಸು ಪಡೆಯುವುದಕ್ಕಾಗಿ. ಈ ಹಂತ ಮೊದಲ ಹೆಜ್ಜೆಯಾಗಬಹುದೆಂದು ಈಕೆ ಆಶಿಸುತ್ತಾರೆ. ಅದು ಅತ್ಯಂತ ಪ್ರಯಾಸದ ಕೆಲಸವಾಗಿದೆ.

ಶರ್ಮಿಳ "ನನಗೆ ಆರ್ಥಿಕ ಅಥವಾ ರಾಜಕೀಯ ಶಕ್ತಿ ಇಲ್ಲ" ಎಂದಿದ್ದಾರೆ. ಆದರೆ ವಿಶ್ವಾದ್ಯಂತ ಮಾನವೀಯತೆಗೆ ಬೆಲೆ ಕೊಡುವ ಅಸಂಖ್ಯಾತ ಸಮುದಾಯ ಅವರನ್ನು ಬೆಂಬಲಿಸುತ್ತಿದೆ. ಆಕೆಯ ಗೆಲುವು ಪ್ರಜಾಪ್ರಭುತ್ವಕ್ಕೊಂದು ನಿಜವಾದ ವ್ಯಾಖ್ಯಾನ. ಪ್ರಭುತ್ವವನ್ನು ಮಣಿಸಿ ಬಿಡುಗಡೆ ಪಡೆಯುವ ಆಶಯದ ಜಯ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತೆ ಮಹಾಶ್ವೇತಾದೇವಿಯವರು ಪ್ರಶಸ್ತಿಯೊಂದನ್ನು ಶರ್ಮಿಳಾಗೆ ನೀಡುವ ಸಂದರ್ಭದಲ್ಲಿ 'ಸಾಟಿ ಇಲ್ಲದ ಹೋರಾಟಗಾರ್ತಿ' ಎಂದರು ಮತ್ತು ಇದು 'ಶರ್ಮಿಳಾ ಶತಮಾನ' ಎಂದು ಗುರುತಿಸಬೇಕೆಂದರು. ಶರ್ಮಿಳಾ ಆರೋಗ್ಯವಂತರಾಗಿ ಹೋರಾಟ ಮುನ್ನಡೆಸಲೆಂದು ಲೋಕದ ಜನತೆ ಹಾರೈಸುತ್ತದೆ.

* * *

ಸುಮಾರು 20 ದಶಕಗಳ ಕಾಲದಿಂದಲೂ ಅಸ್ತಿತ್ವದಲ್ಲಿರುವ ಮೈಸೂರಿನ 'ರಂಗಾಯಣ' ಕಾರಂತರ ಕನಸಿನ ಕೂಸು. ಅವರ ಹಾಗೇ ಕನಸಿದ ಕಲಾವಿದರೂ ಈ ಕಿಂದರಿಜೋಗಿಯ ಹಿಂದೆ ಸಾಲುಗಟ್ಟಿ ಬಂದರು; ಬದುಕನ್ನೇ ಕಲೆಗೆ ತೆತ್ತುಕೊಂಡರು. ನಿರಾಶೆ, ಅನಿಶ್ಚಿತತೆ ಅವರನ್ನು ಕಾಡಿದೆ. ಈವರೆಗೆ ನಾಲ್ವರು ನಿರ್ದೇಶಕರು ಕೆಲಸ ಮಾಡಿರುವ 'ರಂಗಾಯಣ'ಕ್ಕೆ ಒಬ್ಬ ನಿರ್ದೇಶಕಿ ಬರಲಿ ಎನ್ನುವ ಶ್ರೀಮತಿ ಶೋಭಾ ಕರಂದ್ಲಾಜೆಯವರ ಸಲಹೆಗೆ ಅನುಗುಣವಾಗಿ ಆಯ್ಕೆಯಾದವರು ಬಿ. ಜಯಶ್ರೀ. ಆದರೆ ಈಗ ಅವರು ತಮ್ಮ ನಿರ್ದೇಶಕಿ ಸ್ಥಾನಕ್ಕೆ ರಾಜೀನಾಮೆ ಇತ್ತಿದ್ದಾರೆ. 'ರಂಗಾಯಣ'ದ ಇತಿಹಾಸದಲ್ಲಿ ನಾಲ್ಕು ತಿಂಗಳೊಳಗೆ ಯಾರೂ ನಿರ್ದೇಶಕರ ಸ್ಥಾನಕ್ಕೆ ರಾಜೀನಾಮೆ ಇತ್ತದ್ದಿಲ್ಲ. ಆದರೆ ಯಾರೂ ಸಮಾಧಾನ, ತೃಪ್ತಿಯಿಂದ ಅವಧಿ ಪೂರೈಸಿಲ್ಲ. 'ರಂಗಾಯಣ'ದ ಒಳಗಡೆ ಎಲ್ಲವೂ ಸರಿಯಾಗಿಲ್ಲ ಎನ್ನುವುದರ ಸೂಚನೆ ಇದಾಗಿರಬಹುದು. ಬಿ. ಜಯಶ್ರೀ ಅವರು ಕಲಾವಿದರ ಕುರಿತು, ಅಥವಾ ಕಲಾವಿದರು ಬಿ. ಜಯಶ್ರೀ ಅವರ ಕುರಿತು ಯಾವುದೇ ಆಪಾದನೆಯನ್ನು ಮಾಡಿದ್ದರೂ ಸದ್ಯದ ಗೊಂದಲಮಯ ವಾತಾವರಣ 'ರಂಗಾಯಣ' ಮರುರಚನೆಗೆ ಒಳಗಾಗಬೇಕಾದ ಅಗತ್ಯವನ್ನು ಒತ್ತಿ ಹೇಳುತ್ತದೆ. ಸರ್ಕಾರ, ರಂಗಸಮಾಜ, ಕಲಾವಿದರು, ನಿರ್ದೇಶಕರು ಹಾಗೂ ರಂಗಾಯಣದ ಇತರ ಹಿತಚಿಂತಕರು ಇಲ್ಲಿಯವರೆಗೆ ಬಗೆಹರಿಸಲಾಗದ ಕಲಾವಿದರ ಹಾಗೂ ಆಡಳಿತಾತ್ಮಕ ಸಮಸ್ಯೆಗಳನ್ನು ತೇಪೆ ಹಾಕಿಕೊಂಡು ಹೋಗುವುದರಲ್ಲಿ ಅರ್ಥವಿಲ್ಲ. ಹಾಗೆ ತೇಪೆ ಹಾಕಿಕೊಳ್ಳುತ್ತಾ ಹೋಗುತ್ತಿರುವುದರಿಂದಲೇ ರಂಗಾಯಣದ ನಿರ್ದೇಶಕರು ಹಾಗೂ ಕಲಾವಿದರ ನಡುವಿನ ಮುನಿಸು ವಿವಾದದ ರೀತಿಯಲ್ಲಿ ಕಾಣಿಸಿಕೊಳ್ಳುತ್ತಲೇ ಇದೆ. ಬಿ.ಜಯಶ್ರೀಯವರಿಗೆ ಅಪಮಾನವಾಗಿದೆ. ಇದು ಯಾರಿಗೂ ಶೋಭೆ ತರುವುದಿಲ್ಲ. ಇದು ಸ್ತ್ರೀ ಪ್ರಾತಿನಿಧ್ಯದ ನಿರಾಕರಣೆಯೂ ಆಗಿರಬಹುದು! ಸಂಸ್ಥೆಯನ್ನು ಗೌರವಿಸುತ್ತಲೇ ಈ ವರ್ತನೆಯನ್ನು ಖಂಡಿಸಬೇಕಾಗಿದೆ.

ಸರ್ಕಾರಿ ಸಂಸ್ಥೆಗಳಂತೆ, ಸರ್ಕಾರಿ ರೀತಿ-ರಿವಾಜುಗಳಿಂದ ಸೃಜನಶೀಲತೆ, ಕಲೆ, ಕಲೆಗಾರರನ್ನು ಒಂದು 'ಚೌಕಟ್ಟಿ'ನೊಳಗೆ ತೂರಿಸುವುದು ಕಷ್ಟ ಸಾಧ್ಯ. ಮರುರಚನೆಗೆ ಒಳಗಾಗುವ ಹಂತದಲ್ಲಿ ಸರ್ಕಾರ 'ರಂಗಾಯಣ'ವನ್ನು ಒಂದು ಸ್ವಾಯತ್ತ ಸಂಸ್ಥೆಯಾಗಿ ರೂಪುಗೊಳ್ಳಲು ಅನುವು ಮಾಡಿಕೊಡಬೇಕಾಗುತ್ತದೆ. ನಿರ್ದೇಶಕರ ಅಧಿಕಾರದ ಸೀಮಾರೇಖೆಯನ್ನು ಗುರುತಿಸುವುದರ ಜೊತೆಗೆ ಕಲಾವಿದರ ಜವಾಬ್ದಾರಿ ಕರ್ತವ್ಯಗಳ ಬಗ್ಗೆ ಒಂದು ಮರುಚಿಂತನೆ, ಆಡಳಿತಾತ್ಮಕ ಸುಧಾರಣೆಯ ಅಗತ್ಯವಿದೆ. ಕಲೆ-ಪ್ರಭುತ್ವಗಳು ತಳುಕು ಹಾಕಿಕೊಂಡ ಕಡೆಗಳಲ್ಲಿ ಒಂದು ಸ್ಪಷ್ಟ ನೀತಿ, ನಿಯಮಾವಳಿಯ ಅಗತ್ಯವಿರುತ್ತದೆ. ಜಾಗತೀಕರಣದ ಹಿನ್ನೆಲೆಯಲ್ಲಿ 'ರಂಗಾಯಣ'ದಂಥ ಕಲಾಸಾಂಸ್ಕೃತಿಕ ಸಂಸ್ಥೆಗಳ ಉಳಿವಿನ ಅಗತ್ಯ ಬಹಳವಿದೆ. ಹಾಗೆಯೇ ಇದನ್ನು ಒಪ್ಪಿ ಬಂದ ಕಲಾವಿದರ ಬದುಕೂ ಭದ್ರವಾಗಬೇಕು. ಅಧಿಕಾರಶಾಹಿಯ ಜವಾಬ್ದಾರಿ ರಹಿತ ವರ್ತನೆಯಿಂದಾಗಿ ಸೃಜನಶೀಲ ಮನಸ್ಸುಗಳು ಒಡೆದು ಹೋಗುವುದು ಬಹು ದೊಡ್ಡ ದುರಂತವೇ ಸರಿ. 'ರಂಗಾಯಣ'ದ ಮರುರಚನೆಯ ಬಗ್ಗೆ ತಾತ್ವಿಕ ಚಿಂತನೆ ಈ ಕ್ಷಣದ ತುರ್ತು. ❑

ಒಳಗಿನ ಪುಟಗಳಲ್ಲಿ....

ಪ್ರಖರ, ಶುದ್ಧ ಹಾಗೂ ಸತ್ಯದ ಪ್ರತೀಕ: ಇರೋಮ್ ಶರ್ಮಿಳಾ ಚಾನು

■ *ನೀಲಾಂಜನ ಬಿಸ್ವಾಸ್*



ಯಾವುದೂ ಅಸಾಧ್ಯವಲ್ಲ ಅಥವಾ ಕೈಗೆಟುಕಲಾರದ್ದೂ ಅಲ್ಲ
ಸತ್ಯ ಪ್ರಖರ ಹಾಗೂ ಶುದ್ಧವಾಗಿದ್ದರೆ
ಸುಳ್ಳಿಗೆ ಯಾವ ನೆಪವೂ ಇರುವುದಿಲ್ಲ
ಮನುಷ್ಯನ ತಪ್ಪುಗಳಿಗೆ ಶಿಕ್ಷೆಯಾಗಿದೆ
ಅವುಗಳನ್ನು ಕ್ಷಮಿಸಲಾಗಿಲ್ಲ
ಅಥವಾ ಕಡೆಗಣಿಸಲಾಗಿಲ್ಲ
–ಇರೋಮ್ ಶರ್ಮಿಳಾ ಚಾನು

ಈ ವರ್ಷದ ನವೆಂಬರ್ 2ರಂದು ಮಣಿಪುರದ ಯುವ ಕವಯಿತ್ರಿ ಇರೋಮ್ ಶರ್ಮಿಳಾ ಚಾನುರವರ ಅವಿರತವಾದ ಉಪವಾಸ ಸತ್ಯಾಗ್ರಹ ಹತ್ತನೆಯ ವರ್ಷಕ್ಕೆ ಕಾಲಿಡುತ್ತಿದೆ. ಒಂದು ಹನಿ ನೀರು ಆಕಸ್ಮಿಕವಾಗಿ ಕೂಡಾ ಹತ್ತು ವರ್ಷಗಳ ಹಿಂದೆ ತಾನು ತೆಗೆದುಕೊಂಡ ಘನತೆಯುಳ್ಳ ಪ್ರಮಾಣ ವಚನಕ್ಕೆ ಭಂಗತರಬಾರದೆಂಬ ಕಾರಣದಿಂದ ಆಕೆ ತನ್ನ ಹಲ್ಲುಗಳನ್ನು ಸ್ವಚ್ಛಗೊಳಿಸಲು ಒಣಗಿದ ಹತ್ತಿಯನ್ನು ಬಳಸುತ್ತಾರೆ. 'ಈ ಉಪವಾಸ, ಶಿಕ್ಷೆಯಲ್ಲ' ಎಂದು ಆಕೆ ಸಾಕ್ಷ್ಯಚಿತ್ರದ ಸಂದರ್ಶನದಲ್ಲಿ ನುಡಿಯುತ್ತಾರೆ, "ಇದು ನನ್ನ ಕೈಯಲ್ಲಿ ಅತ್ಯುತ್ತಮ ರೀತಿಯಲ್ಲಿ ಸಾಧ್ಯವಾಗಬಹುದಾದ ಹಾಗೂ ನಾನು ಮಾಡಲೇಬೇಕಾದ ಕರ್ತವ್ಯವೆಂದು ಭಾವಿಸುತ್ತೇನೆ." ಆಕೆಯ ಕಣ್ಣುಗಳು ಮುಚ್ಚಿದವು. ನೋವಿನಿಂದ ಬಳಲಿ ಉಳಿದ ಆಕೆಯ ದೇಹದ ಪಾತ್ರೆಯ ಬೆಂಕಿಯಲ್ಲಿ ಕಾದ ಬಂಗಾರದಂತೆ ಆಕೆ ಪ್ರತಿ ಶಬ್ದವನ್ನು ನಿಧಾನವಾಗಿ ಹಾಗೂ ಜಾಗರೂಕತೆಯಿಂದ ನುಡಿದಿದ್ದರು.

1958ರ ಅಮಾನವೀಯ ಸಶಸ್ತ್ರ ಪಡೆಯ ವಿಶೇಷ ಅಧಿಕಾರದ ಕಾಯ್ದೆಯನ್ನು ರಾಜ್ಯದಿಂದ ಹಿಂತೆಗೆಯುವವರೆಗೆ ಏನನ್ನೂ ತಿನ್ನದ, ಕುಡಿಯದ, ಚಪ್ಪಲಿ ಧರಿಸದ, ಕೂದಲಿಗೆ ಎಣ್ಣೆ ಇಡದ, ತಲೆ ಬಾಚದಿರುವ ಪ್ರಮಾಣವಚನ ತೆಗೆದುಕೊಂಡಿರುವ ಇರೋಮ್ ಶರ್ಮಿಳಾ ಚಾನುರವರ ಪ್ರತಿಭಟನೆ ಸರಳವಾದ ಹಾಗೂ ಗಟ್ಟಿಯಾದ ನಿಲುವಿನ ಕ್ರಿಯೆಯಾಗಿದೆ. ನವೆಂಬರ್ 1, 2000ದಲ್ಲಿ ನಡೆದ ಕಗ್ಗೊಲೆಯಲ್ಲಿ 10 ಜನ ಮುಗ್ಧ ವ್ಯಕ್ತಿಗಳನ್ನು ಭದ್ರತಾ ಪಡೆಯವರು ಮಣಿಪುರದ ಮಾಲೋಮ್‌ಹಳ್ಳಿಯಲ್ಲಿ ಬಂದೂಕಿನಿಂದ ಹೊಡೆದು ಸಾಯಿಸಿದ್ದರು. ಈ ದುರಂತ ಈ ಯುವ ಕವಯಿತ್ರಿಯ ಮನಸ್ಸಿನಲ್ಲಿ ತಾನು ಪ್ರತಿರೋಧದ ಕ್ರಿಯೆಗೆ ಇಳಿಯಲೇಬೇಕೆಂಬುದನ್ನು ದೃಢಪಡಿಸಿತ್ತು. ಮರುದಿನವೇ ಇರೋಮ್ ಶರ್ಮಿಳಾ ಚಾನು ತನ್ನ ಉಪವಾಸ ಸತ್ಯಾಗ್ರಹವನ್ನು ಪ್ರಕಟಿಸಿದ್ದರು. ಆಕೆ ತಮ್ಮ ನಿರ್ಧಾರಕ್ಕೆ ದೃಢವಾಗಿರುವಂತಹ ಸಮಯದಲ್ಲಿಯೇ, ಆಕೆಯ ಉಪವಾಸ ಸತ್ಯಾಗ್ರಹಕ್ಕೆ ಪ್ರಭುತ್ವ ನೀಡಿದ ಪ್ರತಿಕ್ರಿಯೆ ನೀರಸವಾಗಿದ್ದುದನ್ನು ನಂಬಲಸಾಧ್ಯವಾಗುತ್ತಿದೆ. ಸಶಸ್ತ್ರ ಪಡೆಯ ವಿಶೇಷ ಅಧಿಕಾರ ಕಾಯ್ದೆಯನ್ನು ರದ್ದುಗೊಳಿಸಬೇಕೆಂಬ ಆಕೆಯ ಬೇಡಿಕೆಗೆ ಕಿಂಚಿತ್ತೂ ಗೌರವ ತೋರದ ಪ್ರಭುತ್ವ ಮೂಗಿನನಾಳದಿಂದ ಒತ್ತಾಯಪೂರ್ವಕವಾಗಿ ಆಕೆಗೆ ಆಹಾರ ತಿನ್ನಿಸುವುದರ ಜೊತೆಗೆ

ಆತ್ಮಹತ್ಯೆಯ ಪ್ರಯತ್ನ ಎಂಬ ನೆಪದಲ್ಲಿ ಆಗಾಗ್ಗೆ ಆಕೆಯನ್ನು ಬಂಧಿಸುತ್ತಿತ್ತು.

ಈ ಎಲ್ಲಾ ವರ್ಷಗಳಲ್ಲಿ ಈಶಾನ್ಯ ಪ್ರದೇಶಗಳ ಸಮಸ್ಯೆಗಳನ್ನು ಬಗೆಹರಿಸಿದ ರೀತಿಯಲ್ಲಿಯೇ ಇರೋಮ್ ಶರ್ಮಿಳಾ ಚಾನುರವರ ಸಮಸ್ಯೆಯನ್ನು ಬಗೆಹರಿಸಲು ಭಾರತ ಸರ್ಕಾರ ಪ್ರಯತ್ನಿಸಿದ್ದು ಸ್ಪಷ್ಟವಾಗಿದೆ. ಈ ಪ್ರದೇಶದ ಜನರ ಒಳಿತು ಹಾಗೂ ಅಭಿವೃದ್ಧಿ ಅವಕಾಶ ಕುರಿತಂತೆ ರಾಜ್ಯವು ಕೈಗೊಂಡಿರುವ ಕ್ರಮ ಜನರು ಬದುಕುಳಿಯಲು ಬೇಕಾಗಿರುವ ಕನಿಷ್ಠಮಟ್ಟದ ಬೆಂಬಲವಾಗಿದೆ ಮಾತ್ರ. ಹೀಗಾಗಿ ಅನಾಥರಾಗಿರುವ ಜನರು ರೋಷಭರಿತರಾಗಿದ್ದಾರೆ. ಸ್ವಯಂ ನಿರ್ಧಾರದ ಹಕ್ಕಿಗಾಗಿ ಬೇಡಿಕೆಗಳನ್ನು ಇಟ್ಟರೆ, ರಾಜ್ಯಪ್ರಭುತ್ವವು ತನ್ನ ಭಯಾನಕ ಹಾಗೂ ಅಮಾನವೀಯ ಕಾನೂನುಗಳಿಂದ ಅವರ ಕಗ್ಗೊಲೆ ನಡೆಸುತ್ತಿದೆ. ಶಾಂತಿ ಹಾಗೂ ನ್ಯಾಯದ ಬೇಡಿಕೆಗೆ ಇರೋಮ್ ಶರ್ಮಿಳಾ ಚಾನುರವರಿಗೆ ನೀಡಿದ ಪ್ರತಿಕ್ರಿಯೆಯಲ್ಲಿ ರಾಜ್ಯಪ್ರಭುತ್ವದ ನಿಲುವು ಇದೇ ರೀತಿಯದು. ಆಕೆಯನ್ನು ಹಲವಾರು ಬಾರಿ ಬಂಧಿಸಲಾಗಿದೆ. ವಿಪರ್ಯಾಸವೆಂದರೆ ಒಬ್ಬ ವ್ಯಕ್ತಿಗೆ ಸಾಯುವ ಹಕ್ಕನ್ನು ನಿರಾಕರಿಸಲಾಗಿದೆ; ಹಾಗೆಯೇ ಜನರಿಗೆ ಬದುಕಿನ ಹಕ್ಕನ್ನು ನಿರಾಕರಿಸಲಾಗಿದೆ.

ಪ್ರಜಾಪ್ರಭುತ್ವ ಎಂಬ ಪದವೇ ಈಶಾನ್ಯ ಪ್ರದೇಶಗಳ ಭಾಗದಲ್ಲಿ ಒಂದು ವಿರೋಧಾಭಾಸವಾಗಿದೆ. ಪ್ರಪಂಚದಲ್ಲಿ ಅತ್ಯಂತ ಹೆಚ್ಚಿನ ಸಶಸ್ತ್ರ ಪಡೆ ಹೊಂದಿರುವ ಪ್ರದೇಶಗಳಲ್ಲಿ ಈಶಾನ್ಯ ಪ್ರದೇಶವೂ ಒಂದಾಗಿದೆ. ಹತ್ತುಜನ ನಾಗರಿಕರಿಗೆ ಶಸ್ತ್ರಾಸ್ತ್ರ ಹೊಂದಿದ ಒಬ್ಬ ಅಧಿಕಾರಿಯಿದ್ದಾನೆ. ಸಂವಿಧಾನದ ಇತ್ತೀಚಿನ ಎಂಟನೆಯ ಶೆಡ್ಯೂಲ್ ಆಗುವವರೆಗೆ ಟಿಬೇಟ್ – ಚೈನಾ ಕುಟುಂಬಕ್ಕೆ ಸೇರಿದ ಮಣಿಪುರದ ಮುಖ್ಯ ಭಾಷೆಗಳು ಭಾರತೀಯ ಭಾಷೆಗಳೆಂದು ಗುರುತಿಸಲ್ಪಟ್ಟಿರಲಿಲ್ಲ.

ಈಶಾನ್ಯ ಪ್ರದೇಶವು ನೆರೆಯ ರಾಷ್ಟ್ರಗಳೊಂದಿಗೆ 4500 ಕಿ.ಮೀ. ಸಾಮಾನ್ಯ ಗಡಿಯನ್ನು ಹಂಚಿಕೊಂಡಿದೆ. ಭಾರತದ ಜೊತೆ ಹಂಚಿಕೊಂಡಿರುವುದು ಕೇವಲ 37 ಕಿ.ಮೀ. ಮಾತ್ರ. ಇದನ್ನು ಸಿಲಿಗುರಿಯಲ್ಲಿ **'ಕೋಳಿಯ ಕತ್ತು'** ಎಂದು ಕರೆಯಲಾಗುತ್ತದೆ. ವಿಪರ್ಯಾಸದ ಸಂಗತಿಯೆಂದರೆ ಭಾರತವು ನೆರೆಯ ರಾಷ್ಟ್ರಗಳ ಜೊತೆಗಿನ ವಾಣಿಜ್ಯೋದ್ಯಮಕ್ಕೋಸ್ಕರ ಬಳಸುವುದು ಈಶಾನ್ಯ ಭಾಗದಲ್ಲಿ ಸಹಜವಾಗಿರುವ ಭೂಮಿಯ ಮೇಲಿನ ರಸ್ತೆಗಳನ್ನು ಅಲ್ಲ. ಬದಲಾಗಿ ಕೊಲ್‌ಕತ್ತಾ, ವೈಜಾಗ್, ಚೆನ್ನೈನ ಬಂದರುಗಳನ್ನು ವ್ಯಾಪಾರ ಉದ್ದಿಮೆಗಳಿಗೆ ಬಳಸಲಾಗುತ್ತದೆ. ವರ್ಷಾನುವರ್ಷಗಳಲ್ಲಿ ವ್ಯವಸ್ಥಿತ **'ಅನಭಿವೃದ್ಧಿಯ ಅಭಿವೃದ್ಧಿ'** ಪಥ ಸೃಷ್ಟಿಸಿರುವ ಸಂದರ್ಭವೇನೆಂದರೆ ಈಶಾನ್ಯ ಪ್ರದೇಶ ಅದರ ಎಲ್ಲಾ ಆಮದನ್ನು ಭಾರತದ ಮುಖ್ಯ ಪ್ರದೇಶಗಳಿಂದಲೇ ಮಾಡಿಕೊಳ್ಳುವುದು ಅನಿವಾರ್ಯವೆಂಬಂತೆ ಆಗಿದೆ.

ಇರೋಮ್ ಶರ್ಮಿಳ ಚಾನುರವರ ಹೋರಾಟ ಕುರಿತ ಇತ್ತೀಚಿನ ಪುಸ್ತಕವೊಂದರಲ್ಲಿ ಅವರು ಹೀಗೆ ಹೇಳುತ್ತಾರೆ: "ಇಲ್ಲಿ ಯಾವ ಪ್ರಗತಿಯೂ ಇಲ್ಲ. ಇಲ್ಲಿ ಯಾವ ಕೈಗಾರಿಕೆಯೂ ಇಲ್ಲ, ಎಲ್ಲದನ್ನೂ ಆಮದು ಮಾಡಿಕೊಳ್ಳಲಾಗುತ್ತಿದೆ. ಈ ಮುಂಚೆ ನಾವು ಅಕ್ಕಿಯನ್ನು ಧಾರಾಳವಾಗಿ ಹೊಂದಿದ್ದೆವು. ಆದರೆ ಈಗ ನಮ್ಮ ಅಗತ್ಯಗಳಿಗೆ ಬೇಕಾಗುವಷ್ಟನ್ನೂ ಕೂಡಾ ಬೆಳೆಯುತ್ತಿಲ್ಲ. ಇಲ್ಲಿ ಉದ್ಯೋಗವಿಲ್ಲ, ಯಾವುದೇ ಉದ್ಯೋಗಕ್ಕೆ ದೊಡ್ಡ ಮೊತ್ತದ ಲಂಚವನ್ನು ನೀಡಬೇಕಾಗುತ್ತದೆ. ನಾನು ಕ್ಯಾಂಪೇನ್ ಮಾಡುತ್ತಿರುವುದು ಸರಿಯಾದ ರೀತಿಯ ಪ್ರಗತಿಗೋಸ್ಕರ. ರಾಜಕಾರಣಿಗಳು ಪ್ರಗತಿಯ ಕುರಿತು ಚಿಂತನೆ ನಡೆಸುತ್ತಿಲ್ಲ." ಆಕೆ ಹೇಳುತ್ತಿರುವುದು ಮಣಿಪುರದ ಬಗ್ಗೆ ಮಾತ್ರವಲ್ಲ, ಈಶಾನ್ಯದ ಎಲ್ಲಾ ಪ್ರದೇಶಗಳಿಗೂ ಈ ಮಾತು ಅನ್ವಯಿಸುತ್ತದೆ.

ಅಗತ್ಯವಿರುವುದೆಲ್ಲವನ್ನೂ ಆಮದು ಮಾಡಿಕೊಳ್ಳುವುದರಿಂದ ಈಶಾನ್ಯ ಪ್ರದೇಶದಲ್ಲಿ ಏನಾಗುತ್ತಿದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಮೊದಲನೆಯದಾಗಿ ಗಗನಕ್ಕೇರಿರುವ ಬೆಲೆಗಳು. ಒಂದು ಚೀಲ ಸಿಮೆಂಟನ್ನು ಕೊಲ್‌ಕೊತ್ತಾದಿಂದ ಈಶಾನ್ಯ ಪ್ರದೇಶಕ್ಕೆ ಸಾಗಿಸುವಲ್ಲಿ 60%ನಷ್ಟು ಬೆಲೆ ಹೆಚ್ಚಾಗಿರುತ್ತದೆ. ಈ ಪ್ರಾಂತ್ಯದ ಉತ್ಪಾದನೆ ಅತ್ಯಂತ ಕಡಿಮೆ ಬೆಲೆಗೆ ಬೇರೆ ಕಡೆ ಹೋಗುತ್ತದೆ. ಉದಾಹರಣೆಗೆ ಅಸ್ಸಾಂ ಇಂಡಿಯಾದ ಪೆಟ್ರೋಲಿನ ¼ ಭಾಗದಷ್ಟು ಉತ್ಪಾದಿಸಿದರೂ ಯಾವುದೇ ರೀತಿಯ ರೆವಿನ್ಯೂ ಕೂಡಾ ಪಡೆಯುವುದಿಲ್ಲ. ಏಕೆಂದರೆ ಈ ರಾಜ್ಯದ ಹೊರಗೇ ಉತ್ಪಾದನೆಯ ಇತರ ಪ್ರಕ್ರಿಯೆಗಳು ನಡೆಯುತ್ತವೆ.

ಬಂದೂಕಿನ ನೆರಳಿನಲ್ಲಿಯೇ ಸದಾಕಾಲ ಬದುಕುತ್ತಿರುವ ಈಶಾನ್ಯ ಪ್ರದೇಶದ ಜನರು ಕೋಪ, ರೋಷದಿಂದ ಕುದಿಯುತ್ತಾರೆ. ಹಾಗಾಗಿ ಇಲ್ಲಿನ ಹಲವಾರು ಆದಿವಾಸಿ ಪಂಗಡಗಳು ಸ್ವಾವಲಂಬಿಗಳಾಗಲು, ಸ್ವಯಂ ಅಧಿಕಾರ ಹೊಂದಲು ಇಚ್ಛಿಸುವುದು ಆಶ್ಚರ್ಯಕರವೇನೂ ಅಲ್ಲ. ವಸಾಹತುಶಾಹಿ ದಿನಗಳಿಂದ ಹಿಡಿದು ಇಲ್ಲಿಯವರೆಗೂ ಈ ಭಾಗದ ಜನರು ಉಪವಾಸ, ವನವಾಸದಿಂದಿದ್ದಾರೆ, ರಕ್ತ ಸುರಿಸಿದ್ದಾರೆ, ಅತ್ಯಾಚಾರಕ್ಕೆ ಒಳಗಾಗಿದ್ದಾರೆ.

ವಸಾಹತುಶಾಹಿಯ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳುವುದಕ್ಕೋಸ್ಕರವೇ 19ನೆಯ ಶತಮಾನದಲ್ಲಿ ಬ್ರಿಟಿಷರು ಉದ್ದೇಶಪೂರ್ವಕವಾಗಿಯೇ ಈಶಾನ್ಯ ಪ್ರದೇಶದ ನೆರೆಯ ರಾಷ್ಟ್ರಗಳಲ್ಲಿ ಭೂತಾನ್, ಬರ್ಮ, ಟಿಬೆಟ್ ಹಾಗೂ ಇಂಡೋ–ಚೈನಾಗಳ ಜೊತೆ ವಾಣಿಜ್ಯೋದ್ಯಮದ ಕೊಂಡಿಗಳನ್ನು ಮುರಿದುಹಾಕಿದ್ದರು. ಈ ಪ್ರದೇಶವನ್ನು ತಾಂತ್ರಿಕವಾಗಿ ಗಡಿ ಪ್ರಾಂತ್ಯವೆಂದು ಕಟ್ಟಿ ಬೆಳೆಸಿದರು. ಟೀ, ಮರ, ಎಣ್ಣೆ ಹಾಗೂ ಕಲ್ಲಿದ್ದಲಿನ ಸಂಪನ್ಮೂಲಗಳನ್ನು ದೋಚಲು ಈ ಭಾಗದಲ್ಲಿ ರಸ್ತೆ, ರೈಲು ಮಾರ್ಗಗಳನ್ನು ಪ್ರಾರಂಭಿಸಿದರು. ಅದರ ಸಹಜವಾದ ವಾಣಿಜ್ಯೋದ್ಯಮ ಕೇಂದ್ರದ ಸಂಪರ್ಕಗಳ ಕೊಂಡಿಗಳಿಂದ ಕತ್ತರಿಸಲ್ಪಟ್ಟ ಈಶಾನ್ಯ ಪ್ರದೇಶವು ಹಸಿವಿನ ಹಾಹಾಕಾರದಿಂದ ನರಳಲು ಪ್ರಾರಂಭಿಸಿತು.

ಸ್ವಾತಂತ್ರ್ಯದ ನಂತರ ಸ್ವಲ್ಪ ಬದಲಾವಣೆ ಕಂಡುಬಂದಿತು. ವಸಾಹತುಶಾಹಿ ಕಾಲದ ಯೋಜನೆಗಳನ್ನು ಏನೂ ಬದಲಾವಣೆ ಮಾಡದೇ ಹಾಗೆಯೇ ಇಡಲಾಗಿತ್ತು. ಬಿಳಿಯರು ಈಶಾನ್ಯ ಪ್ರದೇಶದ ಆದಿವಾಸಿಗಳನ್ನು ನೋಡುತ್ತಿದ್ದ ಹಾಗೆಯೇ ಭಾರತೀಯ ರಾಷ್ಟ್ರೀಯತೆಯೂ ನೋಡಲು ಪ್ರಾರಂಭಿಸಿತ್ತು. ಹಿಂದೂಗಳಿಂದಲೇ ಆವೃತವಾದ ಅಸ್ಸಾಂನ ಭಾಗಗಳ ಹೊರತಾಗಿ ಉಳಿದ ಪ್ರದೇಶಗಳ ಜನರನ್ನು **'ಅನಾಗರಿಕರು', 'ತಲೆ ಬೇಟೆಯಾಡುವವರು', 'ನಾಯಿ ತಿನ್ನುವವರು'** ಎಂದೇ ಭಾವಿಸಿ ನೋಡಲಾಗಿದೆ. ಅಜ್ಞಾನ ಹಾಗೂ ಅಸಹನೆಯಿಂದಾಗಿ ಇರುವ ಈ ಚರ್ವಿತಚರ್ವಣ ದೃಷ್ಟಿಯನ್ನೇ ಭಾರತದ ಬಹುಭಾಗದ ಜನರು ಈಗಲೂ ಕೂಡಾ ಈ ಆದಿವಾಸಿಗಳ ಬಗ್ಗೆ ಹೊಂದಿದ್ದಾರೆ.

1929ರಷ್ಟು ಮುಂಚೆಯೇ ನಾಗಾ ಆದಿವಾಸಿಗಳು ಸೈಮನ್ ಕಮಿಶನ್‌ಗೆ ಒಂದು ಅರ್ಜಿ ಸಲ್ಲಿಸಿ ಉಳಿದ ಬ್ರಿಟಿಷ್ ಭಾರತಕ್ಕಿಂತ ತಮ್ಮನ್ನು ಭಿನ್ನವಾಗಿ ಪರಿಗಣಿಸಬೇಕೆಂದು ಕೇಳಿಕೊಂಡಿದ್ದರು. ಸ್ವಾತಂತ್ರ್ಯಕ್ಕೋಸ್ಕರ ಕೇಳಿದ್ದವರು ಅವರೊಬ್ಬರು ಮಾತ್ರವಲ್ಲ, ಜರ್ಮನ್ನರ ವಿರುದ್ಧ, ಬ್ರಿಟಿಷರ ವಿರುದ್ಧ ವರ್ಷಗಟ್ಟಲೆ ನಡೆಸಿದ ಹೋರಾಟಗಳಲ್ಲಿ ತಮ್ಮ ರಾಜಕೀಯ ಅಸ್ತಿತ್ವವನ್ನು ಬಲಪಡಿಸಿಕೊಂಡ ಮಣಿಪುರದವರೂ ಇದೇ ರೀತಿಯ ಸ್ವಾತಂತ್ರ್ಯದ ಆಶಯವನ್ನು ವ್ಯಕ್ತಪಡಿಸಿದ್ದರು. ಹಾಗೆಯೇ ಮಿಜೋದವರೂ ಕೂಡಾ.

ಸ್ವಯಂ ನಿರ್ಧಾರದ ಬಗ್ಗೆ ವಿಭಜನೆಯ ವರ್ಷಗಳಲ್ಲಿ ಮೊದಲು ಬ್ರಿಟಿಷರಿಂದ ಹಾಗೂ ನಂತರದಲ್ಲಿ ಸ್ವತಂತ್ರ ಭಾರತದಿಂದ ಭರವಸೆಯನ್ನು ನೀಡಲಾಗಿತ್ತು. ಆದರೆ ಭರವಸೆಯ ಬದಲಾಗಿ ಮಿಲಿಟರಿ ಕಾನೂನುಗಳನ್ನು ಜಾರಿಗೊಳಿಸಿ ಪ್ರತ್ಯೇಕತಾವಾದದ ಬೆದರಿಕೆಗೆ ಪ್ರತಿರೋಧವನ್ನು ಒಡ್ಡಲಾಯಿತು. ಬ್ರಿಟಿಷರು ಕ್ವಿಟ್ ಇಂಡಿಯಾ ಚಳವಳಿಯನ್ನು ಹತ್ತಿಕ್ಕಲು ಬಳಸಿದ ಕ್ರೂರ, ಅಮಾನುಷವಾದ ವಿಧಾನಗಳನ್ನೇ ನಾಗಾ ಆದಿವಾಸಿಗಳನ್ನು ಸದೆ ಬಡಿಯಲು ಬಳಸಲಾಗಿತ್ತು. 1951ರ ಅನಂತರ ನಾಗಾ ಆದಿವಾಸಿಗಳ ನಡುವೆ ನಡೆಸಲಾದ ಜನಮತಗಣನೆಯಿಂದ ಬಹಿರಂಗವಾದ ವಿಚಾರವೆಂದರೆ ಶೇಕಡಾ 100ಕ್ಕೆ 100ರಷ್ಟು ಜನ ಆದಿವಾಸಿಗಳು ತಮಗೆ ನಾಗಾ ರಾಜ್ಯ ಬೇಕೆಂದು ಆಶಿಸಿದ್ದರು. ಪಂಡಿತ್ ಜವಹರಲಾಲ್ ನೆಹರು ಈಶಾನ್ಯ ಪ್ರದೇಶದಲ್ಲಿ ದೊಡ್ಡ ಮಟ್ಟದಲ್ಲಿ ಶಸ್ತ್ರಾಸ್ತ್ರ ಪಡೆಯ ಚಳವಳಿಗೆ ಆಜ್ಞೆ ಇತ್ತರು.

ಶಸ್ತ್ರಾಸ್ತ್ರ ಪಡೆಗೆ ಹೆಚ್ಚಿನ ಅಧಿಕಾರವನ್ನು ನೀಡಲು ಕಾನೂನುಗಳನ್ನು ತ್ವರಿತವಾಗಿ ಜಾರಿಗೊಳಿಸಲಾಯಿತು. ನಾಗಾ ಪ್ರದೇಶಗಳಲ್ಲಿ ರಕ್ತದೋಕುಳಿ ಹರಿಯಿತು. ದೊಡ್ಡ ಪ್ರಮಾಣದಲ್ಲಿ ಕೊಲೆಗಳು, ಅತ್ಯಾಚಾರ, ದೊಂಬಿ, ದೋಚುವಿಕೆ ನಡೆದು ಹಳ್ಳಿಗಳನ್ನು ಪೂರ್ಣವಾಗಿ ನಾಶಪಡಿಸಲಾಯಿತು. 1958ರಲ್ಲಿ ಅನುಷ್ಠಾನಕ್ಕೆ ತರಲಾದ ಅಮಾನವೀಯ, ದಮನಿತ ಸಶಸ್ತ್ರ ಪಡೆಯ ವಿಶೇಷ ಅಧಿಕಾರ ಕಾಯ್ದೆಯನ್ನು ರಾಜ್ಯದಿಂದ ಹಿಂತೆಗೆಯಬೇಕೆಂಬ ಶರ್ಮಿಳಾರವರ ಒಂದೇ ಒಂದು ಬೇಡಿಕೆ – ರಕ್ತ ಸಿಕ್ತವಾದ ಹೋರಾಟದ ಇತಿಹಾಸದಲ್ಲಿ ತನ್ನ ಬೇರುಗಳನ್ನು ಹೊಂದಿದೆ.



ಕೇಂದ್ರ ಸರ್ಕಾರ ರಾಜ್ಯಪಾಲರ ಜೊತೆಗೆ ಚರ್ಚಿಸಿ ಈಶಾನ್ಯ ಪ್ರದೇಶದ ಭಾಗಗಳನ್ನು 'ಗಲಭೆ ಪೀಡಿತ' ಪ್ರದೇಶಗಳೆಂದು ಘೋಷಿಸಿ ಕೆಟ್ಟ ಹಾಗೂ ಕಾನೂನು ಬದ್ಧವಲ್ಲದ ಕಾನೂನೆಂದು ಹೆಸರಿಸಲ್ಪಡುವ ಶಸ್ತ್ರಾಸ್ತ್ರ ಪಡೆಯ ವಿಶೇಷ ಅಧಿಕಾರದ ಕಾಯ್ದೆಯನ್ನು ಇಲ್ಲಿ ಹೇರಲಾಗಿದೆ. 'ಗಲಭೆ ಪೀಡಿತ' ಪ್ರದೇಶವನ್ನು ಯಾವುದು ಹುಟ್ಟುಹಾಕುತ್ತದೆ ಎಂಬುದರ ಬಗ್ಗೆ ಸ್ಪಷ್ಟೀಕರಣವಿಲ್ಲ. ಒಮ್ಮೆ ಒಂದು ಪ್ರದೇಶ 'ಗಲಭೆ ಪೀಡಿತ' ಎಂದು ಘೋಷಿಸಲ್ಪಟ್ಟ ಮೇಲೆ ಯಾವುದೇ ಸೈನಿಕ ಪಡೆಯ ಅಧಿಕಾರಿ 'ಸಾರ್ವಜನಿಕ ಶಾಂತಿಯನ್ನು ಕಾಪಾಡಲಿಕ್ಕಾಗಿ' ಯಾರನ್ನಾದರೂ ಬಂದೂಕಿನಿಂದ ಸಾಯಿಸಬಹುದಾಗಿದೆ. 'ಸಂದೇಹಾಸ್ಪದ' ಎಂಬ ಕಾರಣಕ್ಕಾಗಿ ಅವನ ಬಗ್ಗೆ ಅಧಿಕಾರಿಗೆ 'ಅವನು ಅಪರಾಧ ಎಸಗಿದ್ದಾನೆ' ಅಥವಾ 'ಎಸಗಲಿದ್ದಾನೆ' ಎನ್ನಿಸಿದರೆ ಅವನನ್ನು ವಾರೆಂಟ್ ಇಲ್ಲದೇ ಬಂಧಿಸಬಹುದಾಗಿದೆ. ಬಂಧಿಸುವುದಕ್ಕೋಸ್ಕರ ಅಧಿಕಾರಿ ಯಾವುದೇ ಜಾಗಕ್ಕೆ ಪ್ರವೇಶಿಸಿ ಹುಡುಕಬಹುದಾಗಿದೆ. ಅತ್ಯಂತ ಹೆಚ್ಚಿನ ಅಪಾಯದ ಸಂಗತಿಯೆಂದರೆ ಈ ಕಾನೂನು ಸಶಸ್ತ್ರ ಪಡೆಯ ಅಧಿಕಾರಿಗಳು ಯಾರನ್ನೇ ಶಿಕ್ಷಿಸಿದರೂ ಅವರಿಗೆ ಕಾನೂನುಬದ್ಧ ರಕ್ಷಣೆ ಕೊಡುವಂತಹ ವಿಶೇಷ ಸವಲತ್ತನ್ನು ನೀಡುತ್ತದೆ.

ಇತರ ದಮನೀಯ ಕಾನೂನುಗಳಂತೆ ಸಶಸ್ತ್ರ ಪಡೆಯ ವಿಶೇಷ ಅಧಿಕಾರದ ಕಾಯ್ದೆ ಕೂಡಾ ಈಶಾನ್ಯ ಪ್ರದೇಶವನ್ನು ಹಿಡಿತಕ್ಕೆ ತೆಗೆದುಕೊಳ್ಳುವುದನ್ನು ಬೆಂಬಲಿಸುತ್ತದೆ. ಪಿಸ್ತೂಲನ್ನು ಆಳುವ ವರ್ಗದ ಮುಖ್ಯ ಸಂಕೇತವಾಗಿ ಭಾವಿಸುತ್ತದೆ. ಭಾರತದ ಪ್ರಜಾಪ್ರಭುತ್ವವನ್ನು ಬಂದೂಕಿನ ಗುಂಡುಗಳಿಂದ ಜನರ ತಲೆಗೆ ತೂರಿಸಲಾಗಿದೆ, ಅವರ ಹಿಂಬದಿಗೆ ಬೂಟುಗಳಿಂದ ಒದೆಯಲಾಗಿದೆ, ಅವರ ಪಾದಗಳಿಗೆ ಸುತ್ತಿಗೆಯಿಂದ ಹೊಡೆಯಲಾಗಿದೆ. ಅವರ ಗುಪ್ತಾಂಗಗಳಿಗೆ ಎಲೆಕ್ಟ್ರಿಕ್ ಶಾಖ್ ನೀಡಲಾಗಿದೆ. ಮಲಗಿರುವ ಮನುಷ್ಯನನ್ನು ಅವನ ಹಾಸಿಗೆಯಿಂದ ಈಚೆ ಎಳೆದು ಅವನ ಹಣೆಗೆ ಬಂದೂಕಿನ ಗುರಿಯಿಟ್ಟು ಪ್ರಶ್ನಿಸಬಹುದಾಗಿದೆ. ಹೊಲಗಳಿಂದ ಮರಳುವ ಮಹಿಳೆಯನ್ನು ಎತ್ತಿಕೊಂಡು ಹೋಗಿ ಅತ್ಯಾಚಾರ ಮಾಡಿ ನಂತರ ಕೊಂದು ಚರಂಡಿಯಲ್ಲಿ ಎಸೆಯಬಹುದಾಗಿದೆ. ಸಶಸ್ತ್ರ ಪಡೆಯ ವಿಶೇಷ ಅಧಿಕಾರದ ಕಾಯ್ದೆಯ ಮೂಲಕ ನ್ಯಾಯಬದ್ಧವಲ್ಲದ ಕೊಲೆಗಳು ಸಂಸತ್ತಿನ ಅನುಮತಿಯನ್ನು ಪಡೆಯುತ್ತವೆ. ಹೇಳಬೇಕೆಂದರೆ ಅಮಾನವೀಯ ಕೊಲೆಗಳು ಒಂದು ರೀತಿ ಮಾನದಂಡದಂತಹ ಕಾರ್ಯವೈಖರಿಗಳಾಗಿವೆ. ಕಾನೂನಿನ ಮೂಲಕ ಇವುಗಳನ್ನೆಲ್ಲ ಇಲ್ಲಿ ಅನುಷ್ಠಾನಕ್ಕೆ ತರಲಾಗಿದೆ. 27 ವರುಷದ ಚೋಂಗ್ ಕಾಮ್ ಸಂಜಿತ್‌ನನ್ನು ಮಣಿಪುರದ 'ರ್‍ಯಾಪಿಡ್ ಆ್ಯಕ್ಷನ್ ಪೊಲೀಸ್ ಫೋರ್ಸ್' ಜುಲೈ 23, 2009ರಲ್ಲಿ 'ಎನ್‌ಕೌಂಟರ್ ಕಿಲ್ಲಿಂಗ್' ಎಂದು ಇಂಫಾಲಾದ ಜನಾವೃತ ಪೇಟೆಯಲ್ಲಿ ಕೊಂದುಹಾಕಿದರು. ಒಬ್ಬ ಛಾಯಾಗ್ರಾಹಕ ಈ ಕೊಲೆಯ ಚಿತ್ರವನ್ನು ಸೆರೆಹಿಡಿದು ರಾಷ್ಟ್ರೀಯ ಪತ್ರಿಕೆಯೊಂದರಲ್ಲಿ ಪ್ರಕಟಿಸಿರದಿದ್ದರೆ ಅಧಿಕಾರಿಗಳು ಈ ಕೊಲೆಯನ್ನು ಬಂಡುಕೋರರನ್ನು ಸದೆ ಬಡಿಯುವ ಪ್ರತಿರೋಧದಲ್ಲಿ ನಡೆದ ಕೊಲೆಯೆಂದು ಸರ್ಕಾರಿ ದಾಖಲೆಗಳಲ್ಲಿ ದಾಖಲಿಸಿಬಿಡುತ್ತಿದ್ದರು.

ಸಶಸ್ತ್ರ ಪಡೆಯ ವಿಶೇಷ ಅಧಿಕಾರಗಳ ಕಾಯ್ದೆಯಂತಹ ಅಮಾನವೀಯ ಕಾನೂನುಗಳು ಯಾಂತ್ರಿಕವಾಗಿ ದೌರ್ಜನ್ಯ ರೀತಿಯ ಹಿಂಸೆಗಳನ್ನು 'ಹೆಚ್ಚಿನವುಗಳು' ಎಂದು ಸಾಧಾರಣವಾಗಿ ನುಡಿಯುತ್ತವೆ. ಇವುಗಳನ್ನು ಕಾನೂನುಗಳೇ ನಡೆಸಿಕೊಂಡು ಹೋಗುತ್ತವೆ. 'ಹೆಚ್ಚಿನವುಗಳು' – ಅಂದರೆ ಒಪ್ಪಿಗೆಯಾಗದೇ ಇರುವ ಪ್ರತಿರೋಧಗಳನ್ನು ತಮಗಿರುವ ವಿಶೇಷ ಅಧಿಕಾರದಿಂದ ಮುಚ್ಚಿ ಹಾಕುವುದು ಎಂದರ್ಥ.

ರಾಜ್ಯ, ಪ್ರಭುತ್ವದ ಹತ್ತಿಕ್ಕುವಿಕೆಯಿಂದಾಗಿ ವಿರೋಧ ಹುಟ್ಟುತ್ತದೆ. ಪ್ರತಿರೋಧದ ಬಂಡುಕೋರ ಪ್ರವೃತ್ತಿ ಈ ವಿರೋಧವನ್ನು ಬಲಪಡಿಸುತ್ತದೆ. ಯಾವುದೇ ಸ್ವಯಂ ನಿರ್ಧಾರದ ಚಳವಳಿ ಸಶಸ್ತ್ರ ಪಡೆಯಿಂದ ಹತ್ತಿಕ್ಕಲ್ಪಡುತ್ತದೆ. ರಾಜಕೀಯವಾಗಿ ಈ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸುವುದಿಲ್ಲ. ಹಾಗಾಗಿ ವಿರೋಧದ ಧ್ವನಿ ಹೆಚ್ಚಾಗುತ್ತದೆ. ಇದು ಬರಿಯ ಈಶಾನ್ಯ ಪ್ರದೇಶದ ಸಮಸ್ಯೆ ಮಾತ್ರವಲ್ಲ. ಜಮ್ಮು, ಕಾಶ್ಮೀರ – ಹೀಗೆ ಎಲ್ಲೆಲ್ಲಿ ಸ್ವಯಂ ನಿರ್ಧಾರ ಬಲವಾದ ಸಾಂಸ್ಕೃತಿಕ, ರಾಜಕೀಯ ಹಾಗೂ ಆರ್ಥಿಕ ಬೇರುಗಳನ್ನು ಹೊಂದಿದೆಯೋ ಅಂಥ ಎಲ್ಲಾ ಕಡೆ ಹೀಗೆಯೇ ನಡೆಯುತ್ತಿರುವುದು.

ಮಣಿಪುರದ ರಾಜ್ಯದಲ್ಲಿ ಎಲ್ಲೆಲ್ಲಿ 'ಎನ್‌ಕೌಂಟರ್ ಕೊಲೆ'ಗಳು ಹೆಚ್ಚಾಗಿ ನಡೆಯುತ್ತಿವೆಯೋ ಅಲ್ಲೆಲ್ಲಾ ಜನ ರೋಷದಿಂದ ಹಾಗೂ ಅಸಹನೆಯಿಂದ ಕುದಿಯುತ್ತಿದ್ದಾರೆ. ಭಾರತದ ಬಗ್ಗೆ ಮಣಿಪುರದ

ಭಾವನಾತ್ಮಕ ಪ್ರತಿಕ್ರಿಯೆಯನ್ನು ಅರ್ಥಮಾಡಿಕೊಳ್ಳಬೇಕೆಂದರೆ ಯೂತುಬಿ ಪ್ರದೇಶವನ್ನು ಗಮನಿಸಬಹುದಾಗಿದೆ. ಅಲ್ಲಿ ಕಾಣಿಸುವ ಉರಿಯುವ ಸಂಕೇತಗಳು ಹಾಗೂ ಹೋರಾಟಗಾರರ ಮುಖಗಳೇ ಭಾರತದ ಬಗ್ಗೆ ಅವರೇನು ಯೋಚಿಸುತ್ತಾರೆಂದು ತಿಳಿಸುತ್ತವೆ. ಭಾರತದ ಪ್ರಜೆಯಾಗಿ ನೀವು ಆ ಸಮಸ್ಯೆಯ ಭಾಗವಾಗುತ್ತೀರಿ ಎಂಬುದು ತಕ್ಷಣವೇ ನಿಮಗೆ ಅರಿವಾಗುತ್ತದೆ.

ರಾಜ್ಯದ ಪ್ರಭುತ್ವ ಈಶಾನ್ಯ ಪ್ರದೇಶದ ಸಮಸ್ಯೆಗಳನ್ನು ಬರಿಯ ಶಸ್ತ್ರಾಸ್ತ್ರಗಳಿಂದ ಮಾತ್ರವಲ್ಲ ಇನ್ನೂ ಹೆಚ್ಚು ಸಮಸ್ಯಾತ್ಮಕವಾಗಿ ಬಗೆಹರಿಸಲು ಪ್ರಯತ್ನಿಸಿದೆ. ಅದರಲ್ಲಿ ಒಂದು ವಿಧಾನವೆಂದರೆ ಹಣ ಸುರಿಯುವುದು. ಒಬ್ಬ ಲೇಖಕರ ಪ್ರಕಾರ 'ದೆಹಲಿಯಲ್ಲಿ ಅಧಿಕಾರವಿರುವ ಪಕ್ಷಗಳು ಮಣಿಪುರಕ್ಕೆ ಹಣದ ಹೊಳೆ ಹರಿಸಿವೆ. ಹಾಗೆ ಮಾಡುವುದರ ಮೂಲಕ ಉದ್ದೇಶಪೂರ್ವಕವಾಗಿ ಗುತ್ತಿಗೆದಾರರನ್ನು ಸೃಷ್ಟಿಸಿದ್ದಾರೆ. ಇವರು ಶೇ. 95 ಭಾಗದಷ್ಟು ಹಣವನ್ನು ವಾಪಸ್ಸು ದೆಹಲಿಗೆ ತೆಗೆದುಕೊಂಡು ಹೋಗುತ್ತಾರೆ.'

ಜಯರಾಮ್ ರಮೇಶರವರ ಅಂದಾಜಿನ ಪ್ರಕಾರ ಮಣಿಪುರದ ಈಶಾನ್ಯ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಆಗುವ ಖರ್ಚು ವರ್ಷಕ್ಕೆ 30,000 ಕೋಟಿ. ಇಲ್ಲಿರುವ ಜನಸಂಖ್ಯೆ ಹೆಚ್ಚು – ಕಡಿಮೆ 32 ಮಿಲಿಯನ್. ಇದು 10,000 ರೂಪಾಯಿಯನ್ನು ಒಬ್ಬ ವ್ಯಕ್ತಿಗೆ ಒಂದು ವರ್ಷಕ್ಕೆ ಖರ್ಚು ಮಾಡಿದಷ್ಟಾಗುತ್ತದೆ. ಹರಿಸುತ್ತಿರುವ ಹಣದ ಹೊಳೆಯ ಬಗ್ಗೆ ರಮೇಶ ಹೇಳುವ ಹಾಗೆ, ಇದು ತಲುಪುವುದು ರಾಜಕಾರಣಿಗಳನ್ನು, ವಲಸೆ ಬಂದ ಗುತ್ತಿಗೆದಾರರನ್ನು, ಹಣ ದೋಚುವವರನ್ನು, ನಿಜವಾದ ಹಣ ಯಾರಿಗೆ ಸೇರಬೇಕೋ ಅಂತಹವರಿಗಾಗಲಿ ಅಥವಾ ಜನರಿಗೆ ಸವಲತ್ತುಗಳನ್ನು ದೊರಕಿಸಬೇಕೆಂದು ದುಡಿಯುವವರಿಗಾಗಲಿ ಈ ಹಣ ತಲುಪುವುದಿಲ್ಲ."

ಈ ಹಣ ಕಾಳಸಂತೆಯನ್ನು ಸೃಷ್ಟಿಸಿದೆ. ಸರಹದ್ದಿನ ಗಡಿಯಲ್ಲಿ ಮಾದಕವಸ್ತು ಹಾಗೂ ಸಣ್ಣ ಪ್ರಮಾಣದ ಶಸ್ತ್ರಾಸ್ತ್ರಗಳ ಟ್ರ್ಯಾಫಿಕಿಂಗ್‌ಗೆ ದಾರಿ ಮಾಡಿಕೊಟ್ಟಿದೆ. ಹೀಗಾಗಿ ಈ ಪ್ರದೇಶದ ಯುವ ಜನಾಂಗ ಎಚ್.ಐ.ವಿ., ಏಡ್ಸ್‌ಗೆ ಹಾಗೂ ಕುಡಿತ ಹಾಗೂ ಮಾದಕವಸ್ತುಗಳ ಚಟಕ್ಕೆ ಬಲಿಯಾಗಿದ್ದಾರೆ. ಇದರ ಜೊತೆಗೆ ಬಾಂಗ್ಲಾ, ಬರ್ಮಾದಿಂದ ವಲಸೆ ಬರುವವರು ಅಸ್ಸಾಂ, ತ್ರಿಪುರ ಹಾಗೂ ಇತರ ಪ್ರದೇಶಗಳ ಜನಸಂಖ್ಯಾಪ್ರಮಾಣದ ಮೇಲೆ ಒಂದು ಪರಿಣಾಮ ಉಂಟಾಗುವಂತೆ ಮಾಡಿದ್ದಾರೆ. ಈಶಾನ್ಯ ಪ್ರದೇಶದ ರಾಜ್ಯಗಳ ಯೋಜನೆಗಳು ಆದಿವಾಸಿಗಳ ಮಧ್ಯೆ ಬಿರುಕನ್ನು ಹುಟ್ಟುಹಾಕುವುದನ್ನು ಪ್ರೋತ್ಸಾಹಿಸು ತ್ತಿರುವುದರಿಂದ ಎಲ್ಲೆಲ್ಲಿಯೂ ಬಂಡುಕೋರರು ಕ್ರಿಯಾಶೀಲರಾಗಿದ್ದಾರೆ. ವಿದ್ಯಾರ್ಥಿಯೋರ್ವನ ಪ್ರಕಾರ ರಾಜ್ಯವು ನಿರಂತರವಾಗಿ ಜನರನ್ನು ಒಡೆಯುವ ಕೆಲಸ ಮಾಡುತ್ತದೆ. ಒಂದು ಆದಿವಾಸಿ ಪಂಗಡವನ್ನು ಇನ್ನೊಂದು ಆದಿವಾಸಿ ಪಂಗಡದ ವಿರುದ್ಧ ಎತ್ತಿ ಕಟ್ಟುತ್ತದೆ. ಅನಂತರ ಕಚ್ಚಾಡುವ ನಾಯಿಗಳಿಗೆ ಮೂಳೆಯ ತುಂಡನ್ನು ಎಸೆಯುತ್ತದೆ. ಹಾಗಾಗಿ ನಾನಾ ರೀತಿಯ ಸಮಸ್ಯೆಗಳು ಈ ಪ್ರದೇಶಗಳನ್ನು ಹಿಡಿದು ಅಲ್ಲಾಡಿಸುತ್ತಿವೆ.

ಈಶಾನ್ಯ ಪ್ರದೇಶದ ಎಲ್ಲೆಡೆಗೆ ಮಹಿಳಾ ನೆಟ್‌ವರ್ಕ್‌ಗಳು ನಾನಾ ರೀತಿಯ ಸಮಸ್ಯೆಗಳಿಗೆ ಕೊಂಡಿಯನ್ನು ಬಿಗಿದು ಪ್ರಜಾಪ್ರಭುತ್ವದ ಹೋರಾಟವನ್ನು ಬೀದಿಗೆ ತೆಗೆದುಕೊಂಡು ಹೋಗುತ್ತಿವೆ. ಜುಲೈ 2004ರಲ್ಲಿ 32 ವರ್ಷದ ತಾಂಗ್‌ಜಮ್ ಮನೋರಮಾರವರ ಗುಂಡು ತುಂಬಿದ, ಅತ್ಯಾಚಾರವೆಸಗಿ ವಿಕೃತಗೊಳಿಸಿದ್ದ ದೇಹ ಚರಂಡಿಯಲ್ಲಿ ಬಿದ್ದಿತ್ತು. ಅಸ್ಸಾಂ ರೈಫಲ್ಸ್ ಗುಂಪು ಆಕೆಯನ್ನು ಮನೆಯಿಂದ ಕರೆದೊಯ್ದು ಮರುದಿನ ಹೀಗೆ ಚರಂಡಿಯಲ್ಲಿ ಎಸೆದಿದ್ದವು. ಆ ದಿನ ಮಣಿಪುರಿಯ ಇಮಾಸ್ (ತಾಯಂದಿರು) ಬೆತ್ತಲೆಯಾಗಿ ಇಂಫಾಲದ ಅಸ್ಸಾಂ ರೈಫಲ್ಸ್ ಬೇಸ್ ಮುಂದೆ ನಿಂತು ಕೂಗಿದ್ದರು. "ಭಾರತೀಯ ಸೈನಿಕರೇ ನಮ್ಮನ್ನು ಅತ್ಯಾಚಾರ ಮಾಡಿ", ಮತ್ತು "ನಾವೆಲ್ಲರೂ ಮನೋರಮಾಳ ತಾಯಂದಿರು". ಉರಿಯುತ್ತಿರುವಂತಿದ್ದ ಈ ಪ್ರತಿಭಟನೆ ಅವರಲ್ಲಿದ್ದ ಕೋಪದ ಅಭಿವ್ಯಕ್ತಿಯಾಗಿತ್ತು. ಅಮಾನುಷ ರೀತಿಯಲ್ಲಿ ಕೊಂದ ಗಂಡು ಹಾಗೂ ಹೆಣ್ಣುಮಕ್ಕಳ ದೇಹವನ್ನು ನ್ಯಾಯದ ಯಾವ ಆಸೆಯೂ ಇಲ್ಲದೇ ಎತ್ತಿಕೊಳ್ಳಬೇಕಾದ ಸಂದರ್ಭ ವರ್ಷಾನುವರ್ಷಗಳಿಂದ ಅವರಲ್ಲಿ ಈ ಕೋಪವನ್ನು ಹುಟ್ಟುಹಾಕಿತ್ತು.

ಅತ್ಯಾಚಾರ ಹಾಗೂ ಲೈಂಗಿಕ ದೌರ್ಜನ್ಯಗಳು ರಾಜಕೀಯ ಅಸ್ತ್ರಗಳಾಗಿ ರಾಜ್ಯದ ಪ್ರಭುತ್ವದಿಂದ ಬಳಸಲ್ಪಡುತ್ತಿವೆ. ಇದರಿಂದ ಸಮುದಾಯಕ್ಕೆ ನಾಚಿಕೆಯಾಗುವಂತೆ ಮಾಡುವುದು ಹಾಗೂ ಜನರ ಇಚ್ಛಾಶಕ್ತಿಯನ್ನು ಮುರಿಯುವುದು ಪ್ರಭುತ್ವದ ಉದ್ದೇಶವಾಗಿರುತ್ತದೆ. ಈಶಾನ್ಯದ ಭಾಗಗಳಲ್ಲಿ ಭದ್ರತಾ ಪಡೆಯಿಂದ ನಡೆದ ಅತ್ಯಾಚಾರದ ಕತ್ತಲ ಕ್ಷಣಗಳು ಹಾಗೂ ಕೊಲೆಗಳು ಆ ಭಾಗದಲ್ಲಿ ಮಹಿಳಾ ಗುಂಪುಗಳ ಅಸ್ತಿತ್ವಕ್ಕೆ ಕಾರಣವಾಗಿದೆ. ಪ್ರತಿಭಟನೆ ಮಾಡುತ್ತಲೇ ಇವರು ಸಮುದಾಯ ವನ್ನು ರಕ್ಷಿಸುವ, ಪೋಷಿಸುವ ಕೆಲಸ ಮಾಡುತ್ತಿದ್ದಾರೆ. ಮಣಿಪುರದ



ದಿ ಮೈಕಾ ಪೈಬಿಸ್, ದಿ ನಾಗಾ ಮದರ್ಸ್ ಅಸೋಸಿಯೇಷನ್, ಬೋಡೋ ವಿಮೆನ್ಸ್ ಜಸ್ಟೀಸ್ ಫೋರಂ, ದಿ ಕಾರ್ಬಿ ನಿಮ್‌ಸೋ ಬೆಂಗ್‌ತರ್ ಎಸಾಂಗ್ ಹಾಗೂ ಅಸ್ಸಾಂ ಮಹಿಳಾ ಸಚೇತನ ಮಂಚ ಇವುಗಳು ಶಾಂತಿಗಾಗಿ ತಮ್ಮ ಧ್ವನಿಯನ್ನು ಎತ್ತಿವೆ. ಇದು ನ್ಯಾಯಕ್ಕಾಗಿ ಇರುವಂತಹ ಧ್ವನಿ ಆಗಿದೆ.

ಶಾಂತಿ ಹಾಗೂ ನ್ಯಾಯವನ್ನು ಬೇರ್ಪಡಿಸಲಾಗುವುದಿಲ್ಲ. ನ್ಯಾಯದ ಮೊದಲ ಹೆಜ್ಜೆ ಎಂದರೆ ಜನರ ಬದುಕು ಸಹಜವಾಗಿ ನಡೆಯುವಂತೆ ಮಾಡುವುದು. ಮೊದಲನೆಯದಾಗಿ ಯುದ್ಧದ ರೀತಿಯ ವಾತಾವರಣ ಸೃಷ್ಟಿಸಿರುವ ಶಸ್ತ್ರಾಸ್ತ್ರ ಪಡೆಯ ವಿಶೇಷ ಅಧಿಕಾರಿಗಳ ಕಾಯ್ದೆಯನ್ನು ತೆಗೆದುಹಾಕುವುದು. ಮಾನವ ಹಕ್ಕುಗಳ ಎಚ್ಚರಿಕೆಯ ಸಂಸ್ಥೆಯ ನಿರಂತರ ಕೆಲಸದಿಂದಾಗಿ ಮಣಿಪುರದಲ್ಲಿ ನಡೆಯುತ್ತಿರುವ ಮಾನವ ಹಕ್ಕುಗಳ ದೌರ್ಜನ್ಯಗಳು ಬೆಳಕಿಗೆ ಬರುತ್ತಿವೆ. ಈ ಸಂಸ್ಥೆಯಲ್ಲಿರುವ ಬಾಬ್ಲೂ ಲಾಯ್‌ಟಂಗ್ ಬಾರ್ವ ಅವರ ಪ್ರಕಾರ "ಮೊಟ್ಟ ಮೊದಲನೆಯದಾಗಿ ಸಶಸ್ತ್ರ ಪಡೆಯ ವಿಶೇಷ ಅಧಿಕಾರಗಳ ಕಾಯ್ದೆಯನ್ನು ತೆಗೆದುಹಾಕಬೇಕು. ಸ್ವಯಂ ಅಧಿಕಾರದ ಬಗ್ಗೆ ಸಾರ್ವಜನಿಕವಾಗಿ ಚರ್ಚೆಯಾಗಲಿ. ಜನರಿಗೆ ಬೇಕೆನಿಸುವಂತೆ ರಚನಾತ್ಮಕ ವ್ಯವಸ್ಥೆಗಳನ್ನು ಹುಟ್ಟುಹಾಕಲಿ".

ಬಂಡುಕೋರತನದ ಭಯದಿಂದಾಗಿ ಸಶಸ್ತ್ರ ಪಡೆಯ ವಿಶೇಷ ಅಧಿಕಾರಗಳ ಕಾಯ್ದೆಯನ್ನು ಮುಂದುವರಿಸಿಕೊಂಡು ಹೋಗುತ್ತಿರುವುದಾಗಿ ರಾಜ್ಯಸರ್ಕಾರ ನೆಪಗಳನ್ನು ಹೇಳುತ್ತದೆ. ಮಹಿಳೆಯರ ನಾಯಕತ್ವದಲ್ಲಿ ಕೇಳಿಸುತ್ತಿರುವ ಮಿಲಿಯಾಂತರ ಜನರ ಧ್ವನಿಗಳಿಗೆ, ತಮ್ಮ ಸಮಸ್ಯೆಗಳಿಗೆ ಒಂದು ರಾಜಕೀಯ ಪರಿಹಾರವನ್ನು ನೀಡಬೇಕೆನ್ನುವ ಅವರ ಬೇಡಿಕೆಗಳಿಗೆ ರಾಜ್ಯಪ್ರಭುತ್ವ ಕಿವುಡಾಗಿದೆ. ಮಿಲಿಯಾಂತರ ಜನರಿಗೆ ಹಿಂಸೆ ನಿಂತರೆ ಸಾಕಾಗಿದೆ. ಅವರಿಗೆ ಶಾಂತಿ ಬೇಕು. ಸಶಸ್ತ್ರ ಪಡೆಯ ವಿಶೇಷ ಅಧಿಕಾರಗಳ ಕಾಯ್ದೆಯನ್ನು ತೆಗೆದುಹಾಕುವುದರಿಂದ ಪರಿಹಾರದ ಕಾರ್ಯ ಪ್ರಾರಂಭವಾಗಬೇಕಾಗಿದೆ. ಮಹಿಳಾ ಸಂಘಟನೆಯಿಂದ ನಡೆಯುತ್ತಿರುವ ಪ್ರಜಾಪ್ರಭುತ್ವದ ರೀತಿಯ ಪ್ರತಿಭಟನೆಯ ಪರಂಪರೆ ಇರೋಮ್ ಶರ್ಮಿಳಾ ಚಾನುರವರ ಪರಂಪರೆಯಾಗಿದೆ. ಪ್ರಜಾಪ್ರಭುತ್ವದ ಮಾದರಿಯ ಪ್ರತಿಭಟನೆಯಾಗಿರದಿದ್ದರೆ ಅವರನ್ನು ಇನ್ನೂ ಹೆಚ್ಚಿನ ಹಿಂಸೆಗೆ ಒಳಪಡಿಸಲಾಗುತ್ತಿತ್ತು.

ಈಶಾನ್ಯ ಪ್ರಾಂತ್ಯದ ಮಹಿಳೆಯರ ಹೋರಾಟ ಅತ್ಯಂತ ದೂರದ ಪ್ರದೇಶಗಳಲ್ಲಿ ಕೂಡಾ ಒಂದು ರೀತಿಯ ಪ್ರಭಾವವನ್ನು ಬೀರಿದೆ. ಉದಾ: ಕೇರಳದಲ್ಲಿ 2007ರಲ್ಲಿ 'ತೀರದೇಸ ಮಹಿಳಾವೇದಿಕೆ' ಮಹಿಳಾ ಮೀನುಗಾರರ ಗುಂಪು ಇರೋಮ ಶರ್ಮಿಳಾ ಚಾನುರವರನ್ನು ಬೆಂಬಲಿಸಿ ಸಶಸ್ತ್ರ ಪಡೆಯ ವಿಶೇಷ ಅಧಿಕಾರಗಳ ಕಾಯ್ದೆಯನ್ನು ಹಿಂತೆಗೆದುಕೊಳ್ಳಬೇಕೆಂದು ಕರೆಕೊಟ್ಟಿತ್ತು. ಈ ಕರೆಗೆ 1000 ಮಹಿಳಾ ಗುಂಪುಗಳು ದೇಶದ ಎಲ್ಲೆಡೆಯಿಂದ ಬೆಂಬಲಿಸಿದವು. ಪ್ರತಿಭಟನಾ ಪತ್ರದಲ್ಲಿ ಅವರು ಹೀಗೆ ಹೇಳಿದ್ದರು:

'ಮಹಿಳಾ ಗುಂಪುಗಳಾದ ನಾವು ಘನತೆಯ ಬದುಕಿಗೆ, ಲೈಂಗಿಕ ದೌರ್ಜನ್ಯ ಹಾಗೂ ಇತರ ಹಿಂಸೆಗಳಿಂದ ಬಿಡುಗಡೆಗಾಗಿ ಬಲವಾಗಿ ಹೋರಾಟ ಮಾಡುತ್ತೇವೆ, ಕೇರಳದಲ್ಲಿ ಮಾತ್ರವಲ್ಲ ಎಲ್ಲಾ ಕಡೆಯೂ ಸಹ.... ಈ ಹಂತದಲ್ಲಿಯೇ ನಾವು ಮಣಿಪುರದ ಕಾರ್ಯಕರ್ತೆ, ಕವಯಿತ್ರಿಯಾದ ಇರೋಮ ಶರ್ಮಿಳಾ ಚಾನುರವರಿಗೆ ಬೆಂಬಲ ಸೂಚಿಸುತ್ತೇವೆ. ಈಕೆ 1958ರ ಶಸ್ತಾಸ್ತ್ರ ಪಡೆಯ ವಿಶೇಷ ಅಧಿಕಾರಗಳ ಕಾಯ್ದೆಯನ್ನು ಹಿಂತೆಗೆದುಕೊಳ್ಳುವ ಮೂಲಕ ಶಾಂತಿ ಸ್ಥಾಪಿಸಬೇಕೆಂಬ ಬೇಡಿಕೆ ಇಟ್ಟು ನವೆಂಬರ್ 2000ದಿಂದ ಅನಿರ್ದಿಷ್ಟ ಕಾಲ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ.'

ಈ ವರ್ಷ ಮೇ ನಲ್ಲಿ ಜಮ್ಮು-ಕಾಶ್ಮೀರದ ಶೋಪಿಯನ್‌ನಲ್ಲಿ ಇಬ್ಬರು ಮಹಿಳೆಯರ ಮೇಲೆ ಅತ್ಯಾಚಾರವೆಸಗಿ ಕೊಲೆಗೈಯ್ಯಲಾಗಿದೆ. ಈ ರಾಜ್ಯದಲ್ಲಿಯೂ ಸಹ ಶಸ್ತಾಸ್ತ್ರ ಪಡೆಯ ವಿಶೇಷ ಅಧಿಕಾರಗಳ ಕಾಯ್ದೆ ಜಾರಿಯಲ್ಲಿದೆ. ಈ ಅಮಾನವೀಯ ಕಾನೂನಿನ ಚೌಕಟ್ಟಿನಲ್ಲಿ ಭದ್ರತಾ ಪಡೆಯ ಅಧಿಕಾರಿಗಳು ಅನುಭವಿಸುತ್ತಿರುವ ವಿಶೇಷ ಹಕ್ಕುಗಳು ಆಘಾತಕಾರಿ ವಿಷಯಗಳಾಗಿವೆ. ಪ್ರತಿಭಟನಾ ಧ್ವನಿಗಳಿಂದ ಒತ್ತಡಕ್ಕೊಳಗಾಗಿರುವ ಗೃಹಸಚಿವ ಪಿ.ಚಿದಂಬರಂ ಜುಲೈನಲ್ಲಿ ಸಂಸತ್ತಿನಲ್ಲಿ ಈ ಶಸ್ತಾಸ್ತ್ರ ಪಡೆಯ ವಿಶೇಷ ಅಧಿಕಾರಗಳ ಕಾಯ್ದೆಯನ್ನು ಮರುಪರಿಶೀಲಿಸುವುದಾಗಿ ಹೇಳಿಕೆ ನೀಡಿದ್ದಾರೆ. ಆದರೆ ಮರುಪರಿಶೀಲನೆಯನ್ನು ಸರಿಯಾದ ಸಮಯದಲ್ಲಿ ಮಾಡಲಾಗುವುದೆಂದು ಕೂಡಾ ಇವರು ಹೇಳಿಕೆ ನೀಡಿದ್ದರು!


ಮತ್ತೆ ಹಳೇ ರಾಗವೇ, ಯಾರೋ ಕೆಲವರು ಹೇಳುವುದನ್ನು ಮಾತ್ರವೇ ಕೇಳಿಸಿಕೊಳ್ಳುವುದು. ಕೇಂದ್ರ ಸರ್ಕಾರ ಜನರ ಬೇಡಿಕೆಯನ್ನು ಕೇಳಿಸಿಕೊಳ್ಳುವಲ್ಲಿ ಸೋತು ಹೋಗಿದೆ. **"ಶಸ್ತಾಸ್ತ್ರ ಪಡೆಯ ವಿಶೇಷ ಅಧಿಕಾರಗಳ ಕಾಯ್ದೆಯನ್ನು ತೆಗೆದುಹಾಕಿ"** ಇದನ್ನೇ ಜನರು ಪುನಃ ಪುನಃ ಹೇಳುತ್ತಿರುವುದು. ಇದರಲ್ಲಿ ಪುನರ್ ಪರಿಶೀಲನೆ ಮಾಡುವ ಪ್ರಶ್ನೆ ಏನು ಬಂತು?! ವಾದಕ್ಕಾಗಿಯೇ ಎಂದು ಮಾತನಾಡೋಣ, ಕೊಲೆ ಮಾಡಿದವರೂ ಸಹ ಕೊಲೆ ಮಾಡಲು ತಮಗೆ ವಿಶೇಷ ಅವಕಾಶ ನೀಡಿದ ಕಾನೂನಿನ ಪರಿವೀಕ್ಷಣೆ ಮಾಡಲು ಸಾಧ್ಯ ಎಂದುಕೊಳ್ಳೋಣ. ಇದನ್ನು ಮಾಡುವುದಕ್ಕೆ, ಅಂದರೆ ಪರಿಶೀಲನೆ ಮಾಡುವುದಕ್ಕೆ ಸರಿಯಾದ ಸಮಯ, ಕ್ಷಣ ಯಾವುದು? ಇನ್ನೆಷ್ಟು ಅತ್ಯಾಚಾರ, ಇನ್ನೆಷ್ಟು ಕೊಲೆ, ಇನ್ನೆಷ್ಟು ಜನರ ನೋವಿನ ಕತೆಗಳು, ಸರಿಯಾದ ಸಮಯ ಬರುವವರೆಗೆ ನಡೆಯಬೇಕಿದೆ, ಇದಕ್ಕೂ ಹೆಚ್ಚೆಂದರೆ ಈಶಾನ್ಯ ಪ್ರದೇಶದ ಜನರು ಇನ್ನೆಷ್ಟು ಸಹನೆ ಹೊಂದಿರಬೇಕೆಂಬ ನಿರೀಕ್ಷೆ ಇದೆ?

"ನಾನು ಸಹನೆಯಿಂದ ಇರಬೇಕು" – ಇರೋಮ್ ಶರ್ಮಿಳಾ ಹೇಳುತ್ತಾರೆ, "ಈ ಸಮಯದಲ್ಲಿ ನಾನು ನೋವನ್ನು ಸಹಿಸಿಕೊಳ್ಳಬೇಕಾಗಿದೆ." ಈಗಾಗಲೇ ಹತ್ತು ವರ್ಷಗಳ ಉಪವಾಸದಲ್ಲಿ ಆಕೆ ಒಬ್ಬ ತಪಸ್ವಿಯ ತರಹ ಸಹನೆ, ನೋವನ್ನು ನುಂಗಿಕೊಂಡಿದ್ದಾರೆ. ಆಕೆಯ ಪದ್ಯಗಳನ್ನು ಆಕೆ ಮಿಸ್ಟಿಕ್ ಧ್ವನಿಯಲ್ಲಿಯೆ ಬರೆದಿದ್ದಾರೆ. 'ಹುಟ್ಟು ಸಾವಿಲ್ಲದ ಜಾಗ', 'ಸತ್ಯ ಪ್ರಖರ ಹಾಗೂ ಶುದ್ಧವಾಗಿರುವ ಜಾಗ' ಎಂಬ ಪದ್ಯದ ಸಾಲುಗಳು ಆಕೆಯ ಆಲೋಚನೆಯ ತರಂಗಗಳನ್ನು ಸ್ಪಷ್ಟ ಪಡಿಸುತ್ತವೆ.


ಅನೈತಿಕ ಸರ್ಕಾರವನ್ನು ನೈತಿಕ ಹೋರಾಟಕ್ಕೆ ತೊಡಗಿಸಿರುವ ಇರೋಮ್ ಶರ್ಮಿಳಾ ಮಣಿಪುರದ ಜನರಿಗೆ ಮಾತ್ರವಲ್ಲ, ಪ್ರಭುತ್ವದ ಕಪಿಮುಷ್ಟಿಯಲ್ಲಿ ನರಳುತ್ತಿರುವ ಎಲ್ಲರಿಗೂ ಒಂದು ಆಶಾಕಿರಣವಾಗಿದ್ದಾಳೆ; ಮಣಿಪುರದ ಈ ಧೈರ್ಯಸ್ಥ ಹೆಣ್ಣುಮಗಳು ಪ್ರಖರ ಹಾಗೂ ಶುದ್ಧಸತ್ಯದ ಪ್ರತೀಕ ಆಗಿದ್ದಾಳೆ.

(ಇರೋಮ್ ಶರ್ಮಿಳಾ ಚಾನುರವರ ಹತ್ತು ವರ್ಷದ ಉಪವಾಸ ಸತ್ಯಾಗ್ರಹದ ಆಚರಣೆಗೆ ನೂರಾರು ಸಂಸ್ಥೆಗಳು ಹಾಗೂ ವ್ಯಕ್ತಿಗಳು ಒಟ್ಟಾಗಿ ನವೆಂಬರ್ 2ರಿಂದ 6ರವರೆಗೆ ಸಿನಿಮಾ ಪ್ರದರ್ಶನ, ಪ್ರತಿಭಟನೆ, ಮೆರವಣಿಗೆ, ಸೆಮಿನಾರ್, ಛಾಯಾಚಿತ್ರಪ್ರದರ್ಶನಗಳನ್ನು ಏರ್ಪಡಿಸಿವೆ. ಹೆಚ್ಚಿನ ವಿವರಗಳಿಗೆ ಭೇಟಿನೀಡಿ: http:/Manipurfreedom.org)

❑



'ಲೈಂಗಿಕ ಹಿಂಸಾಚಾರ' ರಾಜಕೀಯ ಶಬ್ದ ಭಂಡಾರದಿಂದ ದೂರವಿರಲಿ



-ಪ್ರತೀಕ್ಷಾ ಭಕ್ಷಿ

ಮೂಲ ಲೇಖನ ಪ್ರತೀಕ್ಷಾಭಕ್ಷಿಯವರದು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟು ಮಹಿಳೆಯರ ಮೇಲಿನ ಅತ್ಯಾಚಾರವನ್ನು ನಿಷೇಧಿಸುವ (POA) ಕಾನೂನು 1995ರಲ್ಲಿ ಜಾರಿಗೆ ಬಂದಿದ್ದರೂ ಅದರ ಅನುಷ್ಠಾನದಲ್ಲಿ ಯಾವ ಪ್ರಗತಿಯೂ ಆಗಿಲ್ಲ ಎಂಬುದನ್ನು ಈ ಲೇಖನ ಚರ್ಚಿಸುತ್ತದೆ. Economic and Political Weeklyಯಲ್ಲಿ ಪ್ರಕಟಗೊಂಡಿರುವ "Violence of Political Rhetoric on Rape" ಎಂಬ ಈ ಲೇಖನವನ್ನು 'ನಮ್ಮ ಮಾನಸ'ಕ್ಕಾಗಿ ಡಾ. ಬಿ.ಎನ್. ಸುಮಿತ್ರಾಬಾಯಿ ಅನುವಾದಿಸಿದ್ದಾರೆ.

ನಮ್ಮ ಶಾಸಕರು ಮಹಿಳೆಯರ ಮೇಲಿನ ಹಿಂಸಾಚಾರಗಳ ನಿವಾರಣೆಗಾಗಿ ಹಲವಾರು ಬಗೆಯ ಕಾನೂನುಗಳನ್ನು ಜಾರಿಗೊಳಿಸಿದ್ದಾರೆ. ಆದರೆ ಆ ಹಿಂಸಾಚಾರಗಳಲ್ಲಿ ಬದುಕುಳಿದವರು ಕಾನೂನಿನ ನ್ಯಾಯಾಲಯಗಳಲ್ಲಿ ನ್ಯಾಯಕ್ಕಾಗಿ ಹೋರಾಟ ಮಾಡಲು ಬೇಕಾದ ಸಂಪನ್ಮೂಲಗಳನ್ನು ಕಂಡುಕೊಳ್ಳಬೇಕಾಗಿರುತ್ತದೆ ಎಂಬ ವಾಸ್ತವಾಂಶವನ್ನು ಕಿಂಚಿತ್ತೂ ಗುರುತಿಸಲಾಗದೆ ಇರುವುದು ಮಾತ್ರ ಗಾಬರಿ ಹುಟ್ಟಿಸುವಂಥದು. ಒಬ್ಬ 'ಸಾಥಿನ್' ಮಹಿಳೆ ಮೇಲ್ಜಾತಿ ಪುರುಷರಿಂದ ಸಾಮೂಹಿಕ ಅತ್ಯಾಚಾರಕ್ಕೆ ಬಲಿಯಾದಾಗ, ಆ ಅನ್ಯಾಯದ ಘಟನೆಗೆ ಸಾಕ್ಷ್ಯಾಧಾರವಾಗಿ ತಾನು ಉಟ್ಟಿದ್ದ ಸೀರೆಯನ್ನೇ ಬಿಚ್ಚಿಕೊಡಬೇಕಾಗಿ ಬಂತು, ತನ್ನ ಗಂಡನ ಧೋತಿಯನ್ನು ಸುತ್ತಿಕೊಂಡು ಅವಳು 20 ಕಿ.ಮೀ.ಗಿಂತ ದೂರದಲ್ಲಿದ್ದ ತನ್ನ ಹಳ್ಳಿಗೆ ಹಿಂದಿರುಗಬೇಕಾಯ್ತು. ರಾಜಸ್ಥಾನದಲ್ಲಾದ ಇಂಥ ಘಟನೆಯ ನಿಜಸ್ಥಿತಿಯ ಬಗ್ಗೆ ರಾಜಕಾರಣಿಗಳು ಅಥವಾ ಕಾನೂನು ಸುಧಾರಣಾ ವಾದಿಗಳು ಏನಾದರೂ ತಲೆಕೆಡಿಸಿಕೊಳ್ಳುತ್ತಾರೆಯೆ? ರಾಜಕೀಯವಾಗಿ ಪ್ರತಿಷ್ಠಿತರೆನಿಸಿದ ಎಷ್ಟೋ ನ್ಯಾಯವಾದಿ ಪಂಡಿತರು ಇದ್ದರೂ ಆ ಹೆಣ್ಣಿನ ಸ್ಥಿತಿಗತಿಯ ಬಗ್ಗೆ ಎಂದಾದರೂ ಅವರು ಚಿಂತಿಸಿದ್ದಾರಾ? ಇಂಥವರಿಗೆ ನಿರಂತರವಾಗಿ ದೊರಕಬೇಕಾದ ಯಾವ ವೈದ್ಯಕೀಯ ಗಮನವಾಗಲಿ, HIV/AIDS, ಹೆಪಟೈಟಿಸ್ ಬಿ ಯ ಸಾಧ್ಯತೆ ಬಗ್ಗೆ ತೋರಬೇಕಾದ ಕಳಕಳಿಯಾಗಲಿ ಇರುವುದಿಲ್ಲ. ಇನ್ನು ಬಲಾತ್ಕಾರದ ಪರಿಣಾಮವಾದ ಗರ್ಭಧಾರಣೆ ಮತ್ತು ಮಾನಸಿಕ ಆಘಾತಗಳ ಬಗ್ಗೆ ಹೇಳುವುದೇ ಬೇಡ. ಪತಿಯಿಂದ ಪರಿತ್ಯಕ್ತಳಾಗಿರುವ ತಾಯಿಯೊಬ್ಬಳು ತನ್ನ ಮಗಳ ಮೇಲೆ ಅತ್ಯಾಚಾರ ಆಗಿದೆ ಎಂದು ದೂರುಕೊಟ್ಟರೆ ಅವಳು ಸಾಮಾಜಿಕ ಕಳಂಕದಿಂದಲೂ, ಬೇರೆ ರಕ್ಷಣೆಗಾಗಿಯೂ ಬೇರೊಂದು ಸ್ಥಳಕ್ಕೆ ತೆರಳಬೇಕಾಗುವುದರ ಬಗ್ಗೆ ಯಾರು ಚಿಂತಿಸುತ್ತಾರೆ? ಅತ್ಯಾಚಾರಕ್ಕೆ ಬಲಿಯಾದ ಮಹಿಳೆಯರ ಪುನರ್ವಸತಿಯ ವ್ಯವಸ್ಥೆ ಹೇಗೆ ಎಂಬ ಬಗ್ಗೆ ಯಾರಾದರೂ ಗಂಭೀರವಾಗಿ ವಾದ ಮಾಡುತ್ತಾರಾ?

1995ರ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಮೇಲಿನ ಹಿಂಸಾಚಾರಗಳನ್ನು ನಿಷೇಧಿಸುವ ಕಾನೂನು POA (Prevention of Atrocities) ಒಂದು ಅಸಾಧಾರಣ ಸಾಮಾಜಿಕ ಕಾನೂನು. ಲೈಂಗಿಕ ಹಿಂಸಾಚಾರಕ್ಕೆ ಬಲಿಯಾದವಳು ಸಾಕ್ಷ್ಯವೊದಗಿಸಲು ಯಾವುದೇ ವಿಧಾನ ಇರದಿದ್ದಾಗ, ನ್ಯಾಯಕ್ಕಾಗಿ ಹೋರಾಡಲು ಶಕ್ತಳಾಗಿರುವುದಿಲ್ಲ ಎಂಬ ವಾಸ್ತವ ಸಂಗತಿಯನ್ನು ಈ ಕಾನೂನು ಪರಿಗಣಿಸುತ್ತದೆ. ಹೀಗಾಗಿ 1995ರ ಕಾನೂನುಗಳು ಹಿಂಸಾಚಾರಕ್ಕೆ ಬಲಿಯಾದವರಿಗೆ, ಅವರು ನ್ಯಾಯಾಲಯದಲ್ಲಿ ಸಾಕ್ಷ್ಯ ಹೇಳಲು ನೆರವಾಗುವುದಕ್ಕಾಗಿ ಪರಿಹಾರ ಧನವನ್ನು ಒದಗಿಸಬೇಕೆಂದು ಘೋಷಿಸಿದವು.

ಅತ್ಯಾಚಾರಕ್ಕೆ ಬಲಿಯಾದ ವ್ಯಕ್ತಿ ತನ್ನ ವಾಸದ ಸ್ಥಳದಿಂದ ನ್ಯಾಯಾಲಯದವರೆಗೂ ಒಬ್ಬ ತನಿಖಾಧಿಕಾರಿ ಅಥವಾ ಒಬ್ಬ ಮಾಜಿಸ್ಟ್ರೇಟರ ಬಳಿಗೆ ಬರುವುದಕ್ಕೆ ತಗಲುವ ಪ್ರಯಾಣ ವೆಚ್ಚವನ್ನು 1995ರ ಕಾನೂನು ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ. ಪ್ರತಿಯೊಬ್ಬ ಅಂತಹ ಮಹಿಳೆ- ಅಪ್ರಾಪ್ತವಯಸ್ಕರಿಂದ ಹಿಡಿದು 60 ವರ್ಷದವರವರೆಗೆ- ತನ್ನ ಸಹಾಯಕ ವ್ಯಕ್ತಿಯೊಬ್ಬರನ್ನು ಕರೆತರುವುದಕ್ಕೆ ತಗಲುವ ವೆಚ್ಚವನ್ನು ಅವರ ಕೇಸಿನ ಹಿಯರಿಂಗ್, ತನಿಖೆ ಅಥವಾ ಪಾಟೀಸವಾಲಿನ ಅವಧಿ ಪರ್ಯಂತವೂ ಸರ್ಕಾರವೇ ಭರಿಸಬೇಕು. ಕೃಷಿ ಕಾರ್ಮಿಕರಿಗೆ ಕೊಡುವ ದಿನಗೂಲಿಯ ಮೊತ್ತಕ್ಕೆ ಕಡಿಮೆಯಿಲ್ಲದಷ್ಟು ದಿನಭತ್ಯೆಯನ್ನು ಬಲಿಯಾದ ವ್ಯಕ್ತಿಗೂ ಆಕೆಯ ಸಹಾಯಕರಿಗೂ ಸರ್ಕಾರವು ನೀಡಬೇಕಾಗುತ್ತದೆ. ಅಲ್ಲದೆ ಬಲಿಯಾದ ವ್ಯಕ್ತಿ ಮತ್ತು ಅವಳ ಸಹಾಯಕರಿಗೆ ಆಹಾರದ

ಖರ್ಚುವೆಚ್ಚವನ್ನೂ ಆಯಾ ಸರ್ಕಾರ ನಿಗದಿಪಡಿಸುವ ದರಕ್ಕೆ ಅನುಗುಣವಾಗಿ ನೀಡಬೇಕಾಗುತ್ತದೆ. ಈ ಸಹಾಯಧನವನ್ನು ಜಿಲ್ಲಾ ಮಾಜಿಸ್ಟ್ರೇಟರು ಮೂರು ದಿನಗಳ ಒಳಗೇ ಮಂಜೂರು ಮಾಡಬೇಕು. POA Actನ 3ನೇ ಸೆಕ್ಷನ್‌ನ ಕೆಳಗೆ ಬರುವಂಥ ಅಪರಾಧ ಅದಾಗಿದ್ದಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರು ಆಕೆಯ ಔಷಧಿಯ ಖರ್ಚುವೆಚ್ಚ, ವಿಶೇಷ ವೈದ್ಯಕೀಯ ಸಲಹೆ, ರಕ್ತ ಬದಲಾವಣೆ, ಅವಶ್ಯಕ ವಸ್ತ್ರಗಳನ್ನು, ಊಟ, ಹಣ್ಣುಗಳು ಮುಂತಾದ ಎಲ್ಲದರ ಖರ್ಚುವೆಚ್ಚಕ್ಕೂ ತಗಲುವ ಹಣವನ್ನು ಹಿಂಸಾಚಾರಕ್ಕೆ ಬಲಿಯಾದ ವ್ಯಕ್ತಿ(ಗಳಿ)ಗೆ ತುಂಬಿಸಿಕೊಡ ಬೇಕಾಗುತ್ತದೆ.

ಜಿಲ್ಲಾ ಆಡಳಿತ ವ್ಯವಸ್ಥೆಯ "ಪರಿಹಾರ ಧನವನ್ನು ಧನರೂಪದಲ್ಲಿ ಅಥವಾ ಪದಾರ್ಥಗಳ ರೂಪದಲ್ಲಿ ಬಲಿಯಾದ ವ್ಯಕ್ತಿಗೂ ಆಕೆಯ ಕುಟುಂಬದ ಸದಸ್ಯರಿಗೂ ಅಥವಾ ಅವಳನ್ನು ಅವಲಂಬಿಸಿರುವವರಿಗೂ ತುರ್ತಾಗಿ ದೊರಕಿಸಲು ಬೇಕಾದ ವ್ಯವಸ್ಥೆ ಮಾಡಬೇಕಾಗುತ್ತದೆ. ಈ ಪರಿಹಾರಧನದ ಮೊತ್ತವು ಈ ಕಾನೂನಿಗೆ ಅನುಬಂಧವಾಗಿ ನೀಡಲಾಗಿರುವ ಮೊತ್ತದ ಕ್ರಮಕ್ಕೆ ಅನುಗುಣವಾಗಿರಬೇಕು" ಎಂದು ಈ ಕಾನೂನು ವಿಧಿಸುತ್ತದೆ. ಈ ತತ್‌ಕ್ಷಣದ ಪರಿಹಾರಧನದಲ್ಲಿ ಆಹಾರ, ನೀರು, ಬಟ್ಟೆ, ವಸತಿ, ವೈದ್ಯಕೀಯ ನೆರವು, ಪ್ರಯಾಣ ಸೌಕರ್ಯಗಳು, ಮತ್ತಿತರ ಮಾನವರಿಗೆ ಅವಶ್ಯಕವಾದ ವಸ್ತುಗಳು ಸೇರಿರುತ್ತವೆ. ಹಿಂಸಾಚಾರ ನಡೆದ ಸ್ಥಳದಲ್ಲಿ ಮನೆಯನ್ನು ಸುಟ್ಟುಹಾಕಿದ್ದರೆ, ಇಲ್ಲವೆ ನಾಶಪಡಿಸಿದ್ದರೆ, ಸರ್ಕಾರವು ಅದನ್ನು ಮತ್ತೆ ಕಟ್ಟಿಕೊಡಬೇಕು ಅಥವಾ ಇಟ್ಟಿಗೆ/ಕಲ್ಲು ಕಟ್ಟಡದ ಕೆಲಸಗಾರಿಕೆಗಳನ್ನು ಒದಗಿಸಿಕೊಡಬೇಕು. ಅತ್ಯಾಚಾರಕ್ಕೆ ಬಲಿಯಾದವರಿಗೆ, ಅಮೇಧ್ಯಪದಾರ್ಥಗಳನ್ನು ಬಲವಂತವಾಗಿ ತಿನ್ನಿಸಿ, ಕುಡಿಸಿದ್ದರೆ, ಆ ಮೂಲಕ ಅಸಹ್ಯವೇದನೆಗೆ ಗುರಿಪಡಿಸಿದ್ದರೆ/ಅಥವಾ ಹೀನಾಯಕ್ಕೆ ಬಲಿಯಾಗಿಸಿದ್ದಲ್ಲಿ ಹಾಗೆ ಬಲಿಪಶುವಾದ ಪ್ರತಿಯೊಬ್ಬ ವ್ಯಕ್ತಿಗೂ 25,000 ರೂ. ಅಥವಾ ಅದಕ್ಕಿಂತ ಮೇಲ್ಪಟ್ಟು, ಅವರಿಗಾಗಿರುವ ಅನ್ಯಾಯದ ಗಂಭೀರತೆಗೆ ಅನುಗುಣವಾಗಿ ಮತ್ತು ಆ ವ್ಯಕ್ತಿ ಅನುಭವಿಸಿದ ಅವಮಾನ, ಮಾನನಷ್ಟಕ್ಕೆ ಅನುಗುಣವಾಗಿ ಪರಿಹಾರವನ್ನು ಸರ್ಕಾರವು ನೀಡಬೇಕು. ಅಪರಾಧಿಗಳ ಮೇಲೆ ಚಾರ್ಜ್‌ಷೀಟ್‌ಅನ್ನು ನ್ಯಾಯಾಲಯಕ್ಕೆ ಅರ್ಪಿಸಿದಾಗ ಬಲಿಪಶುವಾಗಿದ್ದ ವ್ಯಕ್ತಿಗೆ ಪರಿಹಾರಧನದ 25% ಭಾಗವನ್ನು ಪಡೆಯಲು ಹಕ್ಕಿರುತ್ತದೆ. ಅಪರಾಧವು ಸಾಬೀತಾಗಿ ಶಿಕ್ಷೆ ವಿಧಿಸಿದ ನಂತರ, ಅದಕ್ಕೆ ಬಲಿಯಾದವರಿಗೆ ಉಳಿದ 75% ಧನವನ್ನು ಪಡೆಯಲು ಅವಕಾಶ ವಿರುತ್ತದೆ.

ಒಬ್ಬ ಮಹಿಳೆಯ ಘನತೆ, ಸಭ್ಯತೆಗೆ ಅಪಚಾರವಾಗಿದ್ದರೆ ಅಥವಾ ಆಕೆಯನ್ನು ಲೈಂಗಿಕವಾಗಿ ಶೋಷಿಸಿದ್ದರೆ, "ಹೀಗೆ ಅನ್ಯಾಯಕ್ಕೊಳಗಾದ ಪ್ರತಿವ್ಯಕ್ತಿಗೂ 50,000/- ರೂ. ಪರಿಹಾರ ಪಡೆಯಲು ಹಕ್ಕು ಇರುತ್ತದೆ. ವೈದ್ಯಕೀಯ ಪರೀಕ್ಷೆಯ ನಂತರ ಈ ಮೊತ್ತದಲ್ಲಿ ಅರ್ಧವನ್ನೂ, ಕೇಸು ಪೂರ್ತಿಯಾಗಿ ಇತ್ಯರ್ಥವಾದ ಮೇಲೆ ಉಳಿದರ್ಧ ಧನವನ್ನೂ ನೀಡತಕ್ಕದ್ದು".

ಭಾರತೀಯ ದಂಡ ಸಂಹಿತೆಯ ಪ್ರಕಾರ 10 ವರ್ಷ ಅಥವಾ ಅದಕ್ಕೆ ಮೇಲ್ಪಟ್ಟ ಜೈಲು ಶಿಕ್ಷೆಗೆ ಒಳಗಾಗುವ ಮಟ್ಟದಲ್ಲಿ [ಸೆಕ್ಷನ್ 3(2)] ಅಪರಾಧವು ಜರುಗಿದ್ದ ಪಕ್ಷದಲ್ಲಿ "ಅದಕ್ಕೆ ಬಲಿಯಾದ ವ್ಯಕ್ತಿಗೂ ಹಾಗೂ ಅವಳನ್ನು ಅವಲಂಬಿಸಿರುವವರಿಗೂ ಆಗಿರುವ ಅಪಚಾರದ ಗಂಭೀರತೆ ಹಾಗೂ ಸ್ವರೂಪಕ್ಕೆ ಅನುಗುಣವಾಗಿ ಕನಿಷ್ಠಪಕ್ಷ 50,000 ರೂಪಾಯಿಗಳ ಪರಿಹಾರಕ್ಕೆ ಹಕ್ಕು ಇರುತ್ತದೆ."

ಇಂಥ ಯಾವ ಕಾನೂನೂ ಎಂದಾದರೂ ಕಾರ್ಯರೂಪಕ್ಕೆ ಬಂದದ್ದೇ ಅಪರೂಪ. ವಾಸ್ತವದಲ್ಲಿ ಈ ಕಾನೂನಿನ ಪಾಲನೆಯ ರೂಢಿ ಹೇಗಿದೆಯೆಂದರೆ ಲೈಂಗಿಕ ಹಿಂಸಾಚಾರಕ್ಕೆ ಬಲಿಯಾದ ವ್ಯಕ್ತಿಯು ಮಧ್ಯಕಾಲೀನ ಪರಿಹಾರವನ್ನು ಅಪೇಕ್ಷಿಸಬಹುದೆಂಬ ನಿಯಮವೇ ಸಾಮಾಜಿಕ ಸಂಘರ್ಷದ ಸಂಕೇತವೆನಿಸಿದ್ದು! ಅದರಲ್ಲೂ ದಲಿತ ಹಾಗೂ ಬುಡಕಟ್ಟು ಮಹಿಳೆಯರನ್ನು ಸುಳ್ಳು ಹೇಳುವವರೆಂದೂ, ಸರ್ಕಾರದ ಸಂಪನ್ಮೂಲವನ್ನು ಲಪಟಾಯಿಸಿ ತಮ್ಮ ಬಡತನವನ್ನು ನೀಗಿಸಿಕೊಳ್ಳಲು ಬಯಸುತ್ತಾರೆಂದೂ ನೋಡಲಾಗುತ್ತದೆ. ಬಹಳಷ್ಟು ಸಲ ಬಲಿಯಾದ ವ್ಯಕ್ತಿಗಳಿಗೆ ಯಾವುದೇ ಮಧ್ಯಂತರ ಪರಿಹಾರ ನೀಡುವುದೇ ಇಲ್ಲ ಅಥವಾ ಅವರಿಗೆಂದು ನೀಡುವ ಪರಿಹಾರ ಧನದ ಮೇಲೆ ಅವರಿಗೇ ಅಧಿಕಾರ ಇರುವುದಿಲ್ಲ. ಬದಲಾಗಿ ಪರಿಹಾರಧನ ಎಂಬ ಪದವನ್ನು ಅತ್ಯಾಚಾರದ ಹಿಂಸೆಗೆ ಕೊಡುವ ಧನಸಹಾಯ ಎಂದು ಅರ್ಥೈಸ ಲಾಗುತ್ತದೆ. ಕಾನೂನಿನಲ್ಲಿ ಒಂದು ಅಸಾಧಾರಣ ಕ್ರಮ ಎಂದು ರಚಿತ ವಾಗಿರುವ ಈ "ಪರಿಹಾರ" ಎಂಬ ಪದಕ್ಕೆ ಹೀಗೆ ನೈತಿಕವಾದ ಅರ್ಥ ವನ್ನು ಹಚ್ಚಿ ನೋಡಲಾಗುವುದರಿಂದ, ಒಬ್ಬರನ್ನು ಅವಮಾನಿಸಲೆಂದು ಕೊಡುವ ಪರಿಹಾರಕ್ಕೂ, ಒಬ್ಬ ವ್ಯಕ್ತಿ ಹಿಂಸಾಚಾರದ ವಿರುದ್ಧ ಸಾಕ್ಷ್ಯ ಹೇಳಲು ನೆರವಾಗಲೆಂದು ನೀಡಲಾಗುವ ಪರಿಹಾರಕ್ಕೂ ಇರುವ ವ್ಯತ್ಯಾಸವೇ ಕಾಣದಂತಾಗಬಹುದು.

ನಮ್ಮ ರಾಜಕಾರಣಿಗಳು ಲೈಂಗಿಕ ಹಿಂಸಾಚಾರವನ್ನು ತಮ್ಮ ರಾಜಕೀಯಕ್ಕೆ ಒಂದು ಸಂಪನ್ಮೂಲವಾಗಿ ಮಾಡಿಕೊಳ್ಳುವ ಕಲೆಗಾರಿಕೆಗೇ ಹೆಚ್ಚು ಒಲಿದಿದ್ದಾರೆ. 2002ರಲ್ಲಿ ಗುಜರಾತ್‌ನಲ್ಲಿ ನಡೆದ ಹಿಂಸಾಚಾರದಲ್ಲಿ ಇದನ್ನು ನಾವು (ಕಣ್ಣಾರೆ) ಕಂಡಿದ್ದೇವೆ. 2007ರಲ್ಲಿ (ಪಶ್ಚಿಮ ಬಂಗಾಳದ) ನಂದಿಗ್ರಾಮದಲ್ಲೂ ಇದನ್ನು ನಾವು ಕಂಡಿದ್ದೇವೆ. ಮಹಿಳೆಯರ ಐತಿಹಾಸಿಕ ಅವಮಾನವನ್ನು ಮರೆಮಾಚಿಬಿಡುವ, ಅತ್ಯಾಚಾರಕ್ಕೆ ಬಲಿಯಾದ ಮಹಿಳೆಯರನ್ನು ಬಳಸಿಕೊಳ್ಳುವ ರಾಜಕೀಯ ಭಾಷಣ ಚಾತುರ್ಯದ ಸರದಿಯಾಗಿದೆ ಇದು. ಅತ್ಯಾಚಾರಕ್ಕೊಳಗಾದ ಸ್ತ್ರೀದೇಹಗಳನ್ನು ಕೊಂಡಾಡುವುದಕ್ಕೆ ಬಳಕೆಯಾಗುತ್ತ ಅದೇ ಆಯಾ ರಾಜಕಾರಣಿಯು ಮಹಿಳೆಯರ ಬಗ್ಗೆ ಹೊಂದಿರುವ ಕಾಳಜಿಯ ಸಾಕ್ಷಿಯೆನಿಸಿಕೊಳ್ಳುತ್ತಿದೆ.

ಒಬ್ಬ ಮಹಿಳಾ ರಾಜಕಾರಣಿಯು ಮತ್ತೊಬ್ಬ ಮಹಿಳೆಗೆ ಆಕೆ ನಿಜವಾಗಿ ಮಾನಭಂಗಕ್ಕೆ ಬಲಿಯಾಗಿರುವ ಸಂದರ್ಭದಲ್ಲಿ ಭಾಷಣಚಾತುರ್ಯದೊಂದಿಗೆ ಹಣವನ್ನು ನೀಡುವುದೂ ಆಳುವ ವ್ಯವಸ್ಥೆಯ ಒಂದು ರಾಜಕೀಯ ವಿಮರ್ಶೆಯೇ ಆಗುತ್ತದೆ. ಏಕೆಂದರೆ ಆ ರಾಜಕಾರಣಿ ಮಹಿಳೆಯು ಅತ್ಯಾಚಾರ ಎಂಬುದರಲ್ಲಿನ ಹಿಂಸೆಯ ಬಗ್ಗೆ ತನ್ನ ಅಜ್ಞಾನವನ್ನೇ ಬಯಲು ಮಾಡಿರುತ್ತಾಳೆ. ಚಾರಿತ್ರಿಕವಾಗಿ ಪುರುಷ ಹಿಂಸಾಚಾರಕ್ಕೆ ಅದರಲ್ಲೂ ಮೇಲ್ಜಾತಿಯವರ ಹಿಂಸಾಚಾರಕ್ಕೆ ಸ್ಥಾಯಿಯಾದ ಗುರಿಯಾಗುತ್ತ ಬಂದಿರುವ ಮಹಿಳೆಯರ ಶರೀರಗಳ ಲೈಂಗಿಕೀಕರಣದ ಪ್ರಮೇಯದ ಮೇಲೆ ಇಂತಹ ರಾಜಕೀಯ ವಾಗ್ಮಿತೆಯ ಕಲೆಯ ರೂಪದ ಹಿಂಸೆ ಬೆಳೆದಿರುತ್ತದೆ.

ಉತ್ತರ ಪ್ರದೇಶದ ಕಾಂಗ್ರೆಸ್ ಮುಖಂಡರಾದ ರೀಟಾ ಬಹುಗುಣ ಅವರು ಅಲ್ಲಿಯ ಮುಖ್ಯಮಂತ್ರಿ ಮಾಯಾವತಿಯವರನ್ನು ಆಕೆ ಅತ್ಯಾಚಾರಕ್ಕೆ ಬಲಿಯಾದ ಸ್ತ್ರೀಯರನ್ನೇ ಒಂದು ತಮಾಷೆಯ ದೃಶ್ಯವಾಗಿಸಿದರೆಂದೂ, ಒಂದು ಕಾನೂನು ಕಾರ್ಯದ ಅಧಿಕಾರವನ್ನು, ರಾಜ್ಯಸರ್ಕಾರವೊಂದರ ಸಮಾರಂಭವನ್ನಾಗಿ ಪರಿವರ್ತಿಸಿದ್ದಾರೆಂದೂ ಹಾಗೆ ಮಾಡಿ ಮೇಲ್ಜಾತಿ ಪುರುಷರು ಅತ್ಯಾಚಾರದ ಬಗ್ಗೆ ಬಳಸುವ ಅಲಂಕೃತ ಭಾಷೆಯನ್ನು ಈಕೆಯೂ ಹರಟಿದ್ದಾರೆಂದು ಟೀಕಿಸಿದ್ದು

ಸರಿಯಷ್ಟೆ. ಇದರಲ್ಲಿ ನಿಜವಾಗಿ ಪಣಕ್ಕೆ ಒಡ್ಡಿಕೊಂಡಿರುವ ಸಮಸ್ಯೆ ಏನು? ಮಾಯಾವತಿಯು ಒಂದು ಕಾನೂನುದತ್ತ ಪರಿಹಾರದ ಹಕ್ಕನ್ನೇ ಒಂದು (ಸರ್ಕಾರಿ) ಸಮಾರಂಭವಾಗಿಸಿಕೊಂಡರು. ಮತ್ತು ತಮ್ಮ ರಾಜ್ಯದಲ್ಲಿ ತಮ್ಮದೇ ಪ್ರತಿಮೆಗಳನ್ನು ಅಕ್ರಮವಾಗಿ ಸ್ಥಾಪಿಸುತ್ತಿದ್ದಾರೆಂಬ ಬಗ್ಗೆ ಹುಟ್ಟಿಕೊಂಡಿದ್ದ ಎಲ್ಲ ವಿವಾದಗಳೂ ಆಕೆ ಅತ್ಯಾಚಾರಕ್ಕೆ ಬಲಿಯಾದ ಮಹಿಳೆಯರಿಗೆ ಪರಿಹಾರಧನವನ್ನು ವಿತರಿಸಲು ಹೆಲಿಕಾಪ್ಟರ್‌ನಲ್ಲಿ ಹಾರಿಹೋದ ಕೂಡಲೇ ಮಾಯವಾಗಿಹೋದವು. ತತ್ಪರಿಣಾಮವಾಗಿ ರೀಟಾ ಬಹುಗುಣರ ಟೀಕೆಯನ್ನು ಪ್ರತಿಭಟಿಸಿ ಆಕೆಯ ಮನೆಯನ್ನು ಸುಟ್ಟುಹಾಕಿದ ಮಂದಿ ರಾಜಕೀಯದ ಸ್ಥಾನದಲ್ಲಿ ಹಿಂಸಾಚರಣೆಯನ್ನು ತಂದಿದ್ದಾರೆ. ನಾಗರಿಕರಾಗಿ ನಾವು ರಾಜಕೀಯದ ಈ ಎಲ್ಲ ಹಿಂಸಾಚಾರದ ಪ್ರತಿಮೆಗಳನ್ನೂ ಅದು ಭಾಷಣ ಚಾತುರ್ಯದ್ದೇ ಇರಲಿ, ಅಥವಾ ಆಸ್ತಿಯನ್ನು ನಾಶಪಡಿಸುವುದೇ ಆಗಿರಲಿ ಸುಮ್ಮನೆ ನುಂಗಿಕೊಂಡಿರಬೇಕೆ?

ಯುಪಿ ಸರ್ಕಾರಕ್ಕೆ ನೈಜವಾದ ದಲಿತ ಮತ್ತು ಬುಡಕಟ್ಟು ಮಹಿಳೆಯರು ಅತ್ಯಾಚಾರಕ್ಕೆ ಬಲಿಯಾಗಿರುವ ವಿಷಯದಲ್ಲಿ ನಿಜವಾದ ಯಾವ ಕಳಕಳಿಯೂ ಇರುವುದು ಕಾಣಿಸುತ್ತಿಲ್ಲ ಎಂಬುದೇ ಇಲ್ಲಿ ಮುಖ್ಯ ಸಮಸ್ಯೆ. ಮಹಿಳೆಯರು ತಮ್ಮ ರಕ್ಷಣೆಯ ಹಕ್ಕನ್ನು ಹೊಂದಿರಬೇಕೆಂಬುದನ್ನು ಯಾವುದೇ ಸರ್ಕಾರವೂ ಎಂದೂ ಗಂಭೀರವಾಗಿ ಪರಿಗಣಿಸಿಯೇ ಇಲ್ಲ ಮತ್ತು ಯಾವತ್ತೂ ಅದು ಆಳುವವರ ದೃಷ್ಟಿಯಲ್ಲಿ ಒಂದು ಸಮಸ್ಯೆಯೆನಿಸಿಯೂ ಇಲ್ಲ. ಅತ್ಯಾಚಾರ ವಿರೋಧಿ ಕಾನೂನನ್ನು ಪರಿಷ್ಕರಿಸುವ ಬಗ್ಗೆ ಕೂಡ ಆಳುವ ಸರ್ಕಾರಗಳು ಗಂಭೀರವಾಗಿ ಚಿಂತಿಸಿದ್ದಿಲ್ಲ. ಪರಿಹಾರ, ಪುನರ್ವಸತಿ, ಸ್ವಸ್ಥಾನಕ್ಕೆ ನೆಲೆಗೊಳಿಸುವುದು ನ್ಯಾಯಬದ್ಧ ಹಕ್ಕುಗಳು ಮತ್ತು ಒಂದು ಬಗೆಯ ಅವಮಾನಕಾರಕ ಪರಿಹಾರಕ್ಕೆ ವಿರುದ್ಧವಾದದ್ದು ಎಂಬ ಬಗ್ಗೆ ಒಂದು ಗಂಭೀರ ವಾಗ್ವಾದವನ್ನು ನಡೆಸುವ ಸಾಮರ್ಥ್ಯ ಕೂಡ ಸರ್ಕಾರಕ್ಕಿಲ್ಲ. 1971ರಿಂದ ಈಚೆಗೆ ಆ ರಾಜ್ಯದಲ್ಲಿ ಅತ್ಯಾಚಾರಗಳ ಸಂಖ್ಯೆ ಹಿಂದೆ ಇದ್ದುದಕ್ಕಿಂತ ಶೇಕಡ 70ರಷ್ಟು ಹೆಚ್ಚಾಗಿದೆ ಎಂಬುದಾಗಿ ಆ ಸರ್ಕಾರದ್ದೇ ಅಂಕಿಅಂಶಗಳು ವರದಿಯಾಗಿದ್ದರೂ ಅತ್ಯಾಚಾರಕ್ಕೆ ಬಲಿಯಾದವರಿಗೆ ನೆರವು ನೀಡುವ ಸರ್ಕಾರಿ ಪ್ರಯತ್ನಗಳು ಇಲ್ಲವೇ ಇಲ್ಲ ಎಂದರೂ ನಡೆಯುತ್ತದೆ.

ರಾಹುಲ್ ಗಾಂಧಿಗೆ ಸಲಹೆಗಾರರಾಗಿರುವ ಯುವಕರೂ ಪ್ರತಿಭಾವಂತರೂ ಆದ ವಕೀಲರು ದಲಿತ ಮತ್ತು ಬುಡಕಟ್ಟು ಮಹಿಳೆಯರ ಮೇಲಿನ ಅತ್ಯಾಚಾರಗಳನ್ನು ಗಮನಕ್ಕೆ ತೆಗೆದುಕೊಂಡು ಆತ ಇಂತಹ ಸಂದರ್ಭದಲ್ಲಿ ರಾಜಕೀಯವಾಗಿ "ದುರದೃಷ್ಟಕರ" ಎಂಬ ವಾಕ್ಚಾತುರ್ಯದ ಗುಣವಾಚಕ ಹಚ್ಚಿಬಿಟ್ಟರೆ ಸಾಲದು ಎಂಬುದನ್ನು ಅರ್ಥಮಾಡಿಕೊಳ್ಳುವಂತೆ ಸಲಹೆಗಳನ್ನು ಕೊಡಲಿ. ನಿಜವಾಗಿ ಪರಿಹರಿಸಬಹುದಾದ ಕಾರ್ಯಯಂತ್ರದ ಅಭಾವವಿರುವಲ್ಲಿ ಅತ್ಯಾಚಾರಿ ಸಂಸ್ಕೃತಿಯನ್ನು ಸಹಜೀಕರಿಸುವಂಥ ಪ್ರಕ್ರಿಯೆಯನ್ನು ನ್ಯಾಯವೆನ್ನಿಸಿಬಿಡಲು ಯಾವುದೇ ರೀತಿಯ ಭಾವುಕತೆಯೂ ಸಮರ್ಥವಾಗಲಾರದು. ಬಲಾತ್ಕಾರಕ್ಕೆ ಬಲಿಯಾದವರಿಗೆ ಪರಿಹಾರದ ಹಕ್ಕು ನ್ಯಾಯಯುತವಾಗಿ ದೊರಕಬೇಕು ಎಂಬುದನ್ನು ಅಣಕವಾಡಲು ಅದು ಯಾರಿಗೂ ಅವಕಾಶ ಕೊಡಲಾರದು.

ನಮ್ಮ ರಾಜಕಾರಣಿಗಳು ಮಾನವ ಹಕ್ಕುಗಳ ಬಗ್ಗೆ ಶಿಕ್ಷಣ ಪಡೆಯಬೇಕಾದದ್ದು ತುರ್ತಿನ ಅವಶ್ಯಕತೆಯಾಗಿದೆ, ಸಂವಿಧಾನಾತ್ಮಕ ಆಡಳಿತ ಎಂದರೇನು ಎಂಬುದನ್ನು ಅರ್ಥಮಾಡಿಕೊಳ್ಳಲು ಅವರು ವಿಶ್ವವಿದ್ಯಾಲಯಗಳಿಗೇ ಹಿಂದಿರುಗಿಹೋಗಿ ಕಲಿಯುವುದನ್ನು ಸ್ವಾಗತಿಸೋಣ. ಈ ನಡುವೆ, ಅವರು ಲೈಂಗಿಕ ಹಿಂಸಾಚಾರಗಳನ್ನು ತಮ್ಮ ರಾಜಕೀಯ ಶಬ್ದ ಭಂಡಾರದಿಂದ ದೂರವಿರಿಸಲಿ. ಏಕೆಂದರೆ ಇಂಡಿಯಾದ ಎಲ್ಲ ಮಹಿಳೆಯರನ್ನೂ ಅವಮಾನಿಸುತ್ತಿರುವವರು ಈ ರಾಜಕೀಯ ಮುಖಂಡರೇ ಆಗಿದ್ದಾರೆ. ❑



ವಿಮೋಚನೆ

● *ಡಾ. ಮಾಲತಿ ಪಟ್ಟಣಶೆಟ್ಟಿ*

ಬೇಕೀಗ ವಿಮೋಚನೆ
ಸಾಕು ಸಾಕಿನ್ನು ಯೋಚನೆ
ಮಾತಲ್ಲೆ ಉರುಳಿವೆ ಯೋಜನೆ
ವಾದಗಳಲ್ಲಿ ನರಳಿವೆ ವಿವೇಚನೆ
ಬೇಕು ಬೇಕೀಗ ದೌರ್ಜನ್ಯ ವಿಮೋಚನೆ
ವಿಮೋಚನೆ ವಿಮೋಚನೆ...

ನಮ್ಮ ದೇಹವಿದು ಮೌಲ್ಯಸೊತ್ತು
ನಮ್ಮ ಮೌಲ್ಯವೇನೆಂದು ನಮಗೆ ಗೊತ್ತು
ವರದಕ್ಷಿಣೆ ವ್ಯಾಪಾರದುರುಳಿಗೆ
ತುತ್ತಾಗಬೇಕೆ ಮಕ್ಕಳಾ ಕತ್ತು?
ಕುತ್ತಾಗಬೇಕೆ ಸ್ತ್ರೀಜನ್ಮಕೆ ಈ ಆಪತ್ತು?
ವಿಮೋಚನೆ ವಿಮೋಚನೆ...

ಬಾಳೆಂಬ ವಿವಾಹ ಮಂಟಪದಲ್ಲಿ
ಭುಗಿಲೆದ್ದ ದೌರ್ಜನ್ಯ ಸಾಕ್ಷಿಯಲ್ಲಿ
ಹೆಜ್ಜೆಯಾಗಬೇಕು ಸಪ್ತಪದಿ ವಿಮೋಚನೆಗೆ
ಸಜ್ಜಾಗಬೇಕು ಪ್ರತಿಭಟನೆ ದಾರಿಗೆ
ವಿಮೋಚನೆ ವಿಮೋಚನೆ...

ಭ್ರೂಣವಿರಲಿ, ವಿವಾಹ, ವೃದ್ಧಾಪ್ಯವಿರಲಿ
ಹೆಣ್ಣು ಜನಮವೀಗ ನಮ್ಮ ಹೊಣೆ
ಕಾಳಿಂಗ ಮರ್ದನಕೆ ಸ್ತ್ರೀಶಕ್ತಿಯಾಗಿ
ತುಳಿಯಬೇಕು ಕ್ರೌರ್ಯದ ಹೆಡೆ
ಮೇಲೇಳಬೇಕು ವಿಮೋಚನೆಗೆ ಪಡೆ
ವಿಮೋಚನೆ ವಿಮೋಚನೆ... ❑

ಧನಸಹಾಯ ಅತ್ಯಾಚಾರಕ್ಕೆ ಪರಿಹಾರವೆ?

● *ಡಾ. ವಸುಧಾದಾಗಮ್‌ವಾರ್*



ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ ಮಾಯಾವತಿ ಹಾಗೂ ರೀಟಾ ಬಹುಗುಣ ಇವರ ನಡುವೆ 'ಅತ್ಯಾಚಾರ'ಕ್ಕೆ ಸಂಬಂಧಪಟ್ಟ ವಿಷಯದ ಬಗ್ಗೆ ನಡೆದ ಜಗಳ ಕೆಲವು ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಮಹಿಳೆಯರು ಮೇಲ್ಜಾತಿಯವರಿಂದ ಅತ್ಯಾಚಾರಕ್ಕೆ ಒಳಗಾದರೆ ಕಾನೂನಿನ ರೀತ್ಯ ಧನಪರಿಹಾರವನ್ನು ಪಡೆಯಬಹುದು. 1989ರಲ್ಲಿ ಕಾಂಗ್ರೆಸ್ ಸರ್ಕಾರ ಈ ಕಾನೂನನ್ನು ಜಾರಿಗೆ ತಂದಿತು. 1978ರಲ್ಲಿಯೇ ಉತ್ತರಪ್ರದೇಶದಲ್ಲಿ ಇದನ್ನು ಜಾರಿಗೊಳಿಸಲಾಗಿತ್ತು. ಅತ್ಯಾಚಾರಕ್ಕೆ ಒಳಗಾದ ಮಹಿಳೆಗೆ ಪರಿಹಾರ ರೂಪದಲ್ಲಿ ಹಣವನ್ನು ನೀಡಿದರೆ ಸಾಕೆ? ಇದು ಎಷ್ಟರ ಮಟ್ಟಿಗೆ ಆಕೆಯ ಮಾನಸಿಕ ಆಘಾತವನ್ನು, ನೋವನ್ನು ಪರಿಹರಿಸಬಲ್ಲದು? ಅತ್ಯಾಚಾರಕ್ಕೆ ಒಳಗಾಗುವ ಎಲ್ಲ ವರ್ಗ, ಜಾತಿಯ ಮಹಿಳೆಯರಿಗೂ ಏಕೆ ಪರಿಹಾರಧನ ಕೊಡಬಾರದು? ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡದ ಮಹಿಳೆ. ಅದೇ ಪಂಗಡ ಪುರುಷನಿಂದ ಅತ್ಯಾಚಾರಕ್ಕೆ ಒಳಗಾದ ಸಂದರ್ಭದಲ್ಲಿ ಇಂತಹ ಧನಪರಿಹಾರವನ್ನು ಪಡೆಯುತ್ತಾಳೆಯೆ? ಆದಿವಾಸಿ ಮಹಿಳೆಯರಿಗೆ ಮಾತ್ರ ಇದು ಅನ್ವಯವಾಗುತ್ತದೆಯೆ? ಇಂತಹ ಸಂಗತಿಗಳನ್ನು ಕಾನೂನು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ.

ಅತ್ಯಾಚಾರಕ್ಕೆ ಒಳಗಾದ ಮಹಿಳೆ ದೂರು ನೀಡಿದಾಗ, ಪ್ರಥಮ ಮಾಹಿತಿ ವರದಿ, ವೈದ್ಯಕೀಯ ಪರೀಕ್ಷೆ, ಚಾರ್ಜ್‌ಶೀಟ್ ಹಾಕುವುದು, ಅನಂತರ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವುದು–ಸಾಮಾನ್ಯವಾಗಿ ನಡೆಯುವ ಪ್ರಕ್ರಿಯೆ. ವೈದ್ಯಕೀಯ ಪರೀಕ್ಷೆಯಲ್ಲಿ ಅತ್ಯಾಚಾರ ನಡೆದಿರುವುದು ಸಾಬೀತಾಗದಿದ್ದರೆ ಪೊಲೀಸರು ಅತ್ಯಾಚಾರ ನಡೆದಿಲ್ಲವೆಂದು ಕೇಸನ್ನು ಮುಚ್ಚಿಬಿಡುತ್ತಾರೆ. ವಿವಾಹಿತ ಹೆಣ್ಣುಮಕ್ಕಳು ಅತ್ಯಾಚಾರಕ್ಕೆ ಬಲಿಯಾಗಿದ್ದರೆ ಕೆಲವೇ ಗಂಟೆಗಳಲ್ಲಿ ಅತ್ಯಾಚಾರದ ಗುರುತುಗಳು ಮರೆಯಾಗುತ್ತವೆ. ಆದರೆ ಘಟನೆ ಸಾಬೀತಾಗಲು ಅಮಾನುಷವಾದ ಹಲ್ಲೆಯ ಗಾಯದ ಗುರುತುಗಳಾದರೂ ಆಕೆಯ ಮೈಮೇಲೆ ಇರಬೇಕಾಗುತ್ತದೆ. ಹಾಗಿಲ್ಲದೇ ಹೋದ ಸಂದರ್ಭದಲ್ಲಿ ಆಕೆಯ ಮೇಲೆ ಅತ್ಯಾಚಾರ ನಡೆದಿಲ್ಲವೆಂಬ ತೀರ್ಮಾನಕ್ಕೆ ಬರಲಾಗುತ್ತದೆ. ಮಹಿಳೆ ಇಂತಹ ಲೈಂಗಿಕ ಕ್ರಿಯೆಗೆ ರೂಢಿಯಾಗಿದ್ದಳು ಎಂಬ ಆರೋಪವನ್ನೂ ಆಕೆಯ ಮೇಲೆ ಹೊರಿಸಲಾಗುತ್ತದೆ. ಈ ರೀತಿಯ ಆರೋಪಗಳಿಗಾಗಿ ಆಕೆ ಪರಿಹಾರಧನವನ್ನು ಪಡೆಯಬೇಕೆ? ಒಂದು ವೇಳೆ ಪ್ರಕರಣ ಸಾಬೀತಾಗಿ ಆರೋಪ ಪಟ್ಟಿಯನ್ನು ಸಲ್ಲಿಸಿದ್ದೇ ಆದರೆ, ವಿಶೇಷ ವಿಚಾರಣಾ ಘಟಕಕ್ಕೆ ಮಾಹಿತಿ ನೀಡಿ, ಪರಿಹಾರಧನವನ್ನು ನೀಡುವುದಕ್ಕೆ ಚಾಲನೆ ನೀಡಲಾಗುತ್ತದೆ. ಭ್ರಷ್ಟಾಚಾರ ಹಾಗೂ ನೌಕರಶಾಹಿಯ ವಿಳಂಬಗತಿಯಿಂದಾಗಿ ನೊಂದ ಮಹಿಳೆ ಪರಿಹಾರವನ್ನು ಪಡೆಯುವುದೂ ದುಸ್ತರವಾಗುತ್ತದೆ. ಎಲ್ಲಾ ಸಂದರ್ಭಗಳಲ್ಲೂ ಪರಿಹಾರದ ಮೊತ್ತ 5000 ರೂ.ಗಳು ಮಾತ್ರ.

ಅತ್ಯಾಚಾರಕ್ಕೆ ಒಳಗಾದ ಮಹಿಳೆಗೆ ಧನಪರಿಹಾರವನ್ನು ನೀಡುವುದು ಸೂಕ್ತವೆ? ದೆಹಲಿಯ 'ಮಾರ್ಗ' ಎಂಬ ಸಂಸ್ಥೆ ಈ ಕುರಿತು ಒಂದು ಅಧ್ಯಯನವನ್ನು ಮಾಡಿದೆ. ಈ ಅಧ್ಯಯನಕ್ಕೆ ಉತ್ತರಪ್ರದೇಶ ಹಾಗೂ ಮಧ್ಯಪ್ರದೇಶದಲ್ಲಿ ಅತ್ಯಾಚಾರಕ್ಕೆ ಬಲಿಯಾದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಮಹಿಳೆಯರನ್ನು ಆಯ್ಕೆ ಮಾಡಿಕೊಂಡಿತ್ತು. ಈ ರಾಜ್ಯಗಳನ್ನು ಆಯ್ಕೆ ಮಾಡಿಕೊಳ್ಳಲು ಮುಖ್ಯ ಕಾರಣವೆಂದರೆ, 1991ರ ಜನಗಣತಿಯ ಪ್ರಕಾರ ಶೇ. 21ರಷ್ಟು ಭಾರತೀಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗದ ಜನರು ಈ ರಾಜ್ಯಗಳಲ್ಲಿ ನೆಲೆಸಿದ್ದಾರೆ. ಇವರಲ್ಲಿ ಶೇ. 88ರಷ್ಟು ಜನ ಗ್ರಾಮಗಳಲ್ಲಿ ವಾಸವಾಗಿದ್ದಾರೆ. ಈ ಅಧ್ಯಯನಕ್ಕಾಗಿ ಅತ್ಯಾಚಾರಕ್ಕೆ ಬಲಿಯಾದ 50 ಜನ ಮಹಿಳೆಯರನ್ನು ಭೇಟಿ ಮಾಡುವುದು ಸಂಸ್ಥೆಯ

ಉದ್ದೇಶವಾಗಿತ್ತು. ಸಾಮಾನ್ಯವಾಗಿ ಮಹಿಳೆಯರು 'ಅತ್ಯಾಚಾರ'ಕ್ಕೆ ಸಂಬಂಧಪಟ್ಟಂತೆ ಮಾತನಾಡಲು ಹಿಂಜರಿಯುವುದರಿಂದ, ಒಂದು ಜಿಲ್ಲೆಯ ಬದಲಾಗಿ ಎರಡು ಜಿಲ್ಲೆಯನ್ನು ಆಯ್ಕೆ ಮಾಡಿಕೊಳ್ಳಲಾಯಿತು.

ಮೀರತ್ ಜಿಲ್ಲೆಯಲ್ಲಿ 33 ಕೇಸುಗಳು ದಾಖಲಾಗಿದ್ದವು. ಇವುಗಳಲ್ಲಿ ಕೇವಲ 22 ಕೇಸುಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಯಿತು. ಈ 22 ಕೇಸುಗಳಲ್ಲಿಯೂ ಕೇವಲ 15 ಕೇಸುಗಳಲ್ಲಿ ಅತ್ಯಾಚಾರಕ್ಕೆ ಬಲಿಯಾದವರೊಡನೆ, ಅವರ ಕುಟುಂಬದ ಸದಸ್ಯರೊಂದಿಗೆ ಮಾತನಾಡಲು ಸಾಧ್ಯವಾಗಿತ್ತು. 22 ಕೇಸುಗಳಲ್ಲಿಯೂ ಸಹ ಸಂಪೂರ್ಣ ದಾಖಲಾತಿಗಳು ಇರಲಿಲ್ಲ. ಅದೇ ರೀತಿ ಬಾಂದಾ ಜಿಲ್ಲೆಯಲ್ಲಿ ಶೇ. 44 ಕೇಸುಗಳು ದಾಖಲಾಗಿದ್ದವು. ಇವುಗಳಲ್ಲಿ 28 ಕೇಸುಗಳನ್ನು ಮಾತ್ರ ತೆಗೆದುಕೊಳ್ಳಲಾಯಿತು. ಇದರಲ್ಲಿ ಕೇವಲ 18 ಜನ ಮಹಿಳೆಯರು ಅಥವಾ ಅವರ ಕುಟುಂಬದ ಸದಸ್ಯರೊಂದಿಗೆ ಮಾತನಾಡಲು ಅವಕಾಶ ಪಡೆಯಲಾಯಿತು.

ಹದಿಮೂರು ಕೇಸುಗಳಲ್ಲಿ ಎಲ್ಲರೂ ಅಪ್ರಾಪ್ತವಯಸ್ಸಿನ ಬಾಲಕಿಯರು. ಇಬ್ಬರು ಕೇವಲ 6 ವರ್ಷದವರು. ಒಂದು ಮಗು 4 ಅಥವಾ ಐದು ವರ್ಷದ್ದಾಗಿತ್ತು. ಒಂದು ಮಗು 12 ವರ್ಷದ್ದು, ಉಳಿದವರೆಲ್ಲರು 14 ವರ್ಷ ವಯಸ್ಸಿಗಿಂತ ಕಡಿಮೆ ಇದ್ದವರು. ಈ 50 ಕೇಸುಗಳಲ್ಲಿಯೂ ಆರೋಪಿಗಳ ಜಾತಿಯನ್ನು ಸ್ಪಷ್ಟವಾಗಿ ನಮೂದಿಸಲಾಗಿತ್ತು. 22 ಜನ ಓ.ಬಿ.ಸಿ.ಯವರು, ಠಾಕುರ್ ಅಥವಾ ರಜಪೂತರು 11: ಮುಸ್ಲಿಂ 8, ಬ್ರಾಹ್ಮಣರು 5. ಇನ್ನು ನಾಲ್ಕು ಕೇಸುಗಳಲ್ಲಿ ಆರೋಪಿಗಳ ಜಾತಿಯನ್ನು ಸ್ಪಷ್ಟವಾಗಿ ನಮೂದಿಸಿರಲಿಲ್ಲ. ಬ್ರಾಹ್ಮಣರು ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಿಂದ ನಗರ ಪ್ರದೇಶಗಳಿಗೆ ವಲಸೆ ಹೋಗಿರುವುದರಿಂದ ಓ.ಬಿ.ಸಿ.ಯವರೇ ಗ್ರಾಮೀಣ ಪ್ರದೇಶದಲ್ಲಿ ಪ್ರಾಬಲ್ಯವನ್ನು ಹೊಂದಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ದಲಿತರಿಗೆ ಹೋಲಿಸಿಕೊಂಡು ಗ್ರಾಮೀಣ ಪ್ರದೇಶದ ಎಲ್ಲ ಜನರು ಮೇಲ್ಜಾತಿಯವರೆಂದೇ ಗುರುತಿಸಿಕೊಳ್ಳುತ್ತಾರೆ.

ಇಂಡಿಯನ್ ಪೀನಲ್‌ಕೋಡ್ ಪ್ರಕಾರ, ಗರ್ಭಿಣಿ ಮಹಿಳೆಯ ಮೇಲೆ ಅತ್ಯಾಚಾರ ನಡೆಸಿದಾಗ ಅಥವಾ ಹಲವಾರು ಪುರುಷರು ಒಬ್ಬ ಮಹಿಳೆಯ ಮೇಲೆ ಅತ್ಯಾಚಾರವೆಸೆಗಿದಾಗ ಅದನ್ನು ಸಾಬೀತು ಪಡಿಸಬೇಕಾಗುತ್ತದೆ. ಹಾಗೆಯೇ ಆಕೆಯ ಒಪ್ಪಿಗೆಯಿಂದ ನಡೆದಿದೆ ಎಂದು ಸಾಬೀತು ಪಡಿಸುವ ಜವಾಬ್ದಾರಿ ಆರೋಪಿಯ ಮೇಲಿದೆ. ಆಯ್ಕೆ ಮಾಡಿಕೊಂಡ 50 ಕೇಸುಗಳಲ್ಲಿ ಕೇವಲ ಒಬ್ಬ ವ್ಯಕ್ತಿಯ ಮೇಲೆ ಮಾತ್ರ ಆರೋಪವನ್ನು ದಾಖಲಿಸಲಾಗಿತ್ತು. ವಿಶೇಷ ವಿಚಾರಣಾ ಘಟಕವು 5000 ರೂ. ಪರಿಹಾರಧನವನ್ನು ನೀಡುವುದು ಅನಿವಾರ್ಯ ವಾಗಿತ್ತು. ಅಪ್ರಾಪ್ತ ವಯಸ್ಸಿನ ಬಾಲಕಿಯರಲ್ಲಿ ಒಬ್ಬ ಬಾಲಕಿಯ ಮೇಲೆ ಅತ್ಯಾಚಾರ ನಡೆದದ್ದು ಸಾಬೀತಾಗಿದ್ದರೆ, ಉಳಿದ ಬಾಲಕಿಯರ ಬಗ್ಗೆ ಸರಿಯಾದ ಮಾಹಿತಿ, ದಾಖಲೆಗಳು ಲಭ್ಯವಾಗಲೇ ಇಲ್ಲ. 35 ಕೇಸುಗಳಿಗೆ ಸಂಬಂಧಪಟ್ಟ ಹಾಗೆ ಪೊಲೀಸ್ ಠಾಣೆಗಳಲ್ಲಿ ವೈದ್ಯಕೀಯ ಪರೀಕ್ಷೆಯ ದಾಖಲೆಗಳೇ ಇರಲಿಲ್ಲ. 9 ಪ್ರಕರಣಗಳಲ್ಲಿ ವೈದ್ಯರು ಸಾಕ್ಷ್ಯಾಧಾರಗಳ ಬಗ್ಗೆ ಅಸಹ್ಯವಾದ ಭಾಷೆಯಲ್ಲಿ ವರದಿಯನ್ನು ನೀಡಿದ್ದರು.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪರಿಹಾರಧನವನ್ನು ಉದಾರ ವಾಗಿ ನೀಡಲಾಗಿತ್ತು. 41 ಪ್ರಕರಣದಲ್ಲಿ, ಎಲ್ಲಾ ಮಹಿಳೆಯರಿಗೆ 5000 ರೂ. ನೀಡಲಾಗಿತ್ತು. ವೈದ್ಯಕೀಯ ವರದಿ ಇರದಂತಹ ಪ್ರಕರಣಗಳಲ್ಲಿಯೂ ಸುಮಾರು 28 ಕೇಸುಗಳಲ್ಲಿ ಪರಿಹಾರವನ್ನು ನೀಡಲಾಗಿತ್ತು. 'ಅತ್ಯಾಚಾರ' ನಡೆದಿಲ್ಲ ಎಂದ 9 ಕೇಸುಗಳಲ್ಲಿ ಸಹ ಪರಿಹಾರವನ್ನು ಬಿಡುಗಡೆ ಮಾಡಲಾಗಿತ್ತು. 9 ಕೇಸುಗಳ ಪರಿಹಾರ ಧನ ಬಿಡುಗಡೆಯ ಪ್ರಕ್ರಿಯೆಯ ಹಾದಿಯಲ್ಲಿದ್ದವು. ಕೇವಲ ಒಂದು ಕೇಸನ್ನು ಮಾತ್ರ ಅತ್ಯಾಚಾರ ನಡೆದಿಲ್ಲವೆಂಬ ಕಾರಣಕೊಟ್ಟು ತಿರಸ್ಕರಿಸಲಾಗಿತ್ತು. ಒಂದು ಪ್ರಕರಣದಲ್ಲಿ ಆರೋಪಿಯ ಒತ್ತಡದಿಂದಾಗಿ ಮಹಿಳೆ ವೈದ್ಯಕೀಯ ಪರೀಕ್ಷೆಯನ್ನು ತಿರಸ್ಕರಿಸಿದ್ದಳು. ಆಕೆ ಮನಸ್ಸು ಬದಲಾಯಿಸಿ, ಹೇಳಿಕೆ ನೀಡಿದ್ದರಿಂದ ಪೊಲೀಸರು ದಾಖಲೆಗಳನ್ನು ಸುಲಭವಾಗಿ ಮಾಯವಾಗಿಸಿದ್ದರು. ಇನ್ನೊಂದು ಪ್ರಕರಣದಲ್ಲಿ ನಾಲ್ಕು ಜನ ಪುರುಷರು ಆರೋಪಕ್ಕೆ ಗುರಿಯಾಗಿದ್ದರು. ಇವರಲ್ಲಿ 3 ಜನರು ಪರಿಶಿಷ್ಟ ಜಾತಿಗೆ ಸೇರಿದವರಾಗಿದ್ದರೆ, ಒಬ್ಬನು ಓ.ಬಿ.ಸಿ.ಗೆ ಸೇರಿದವ ನಾಗಿದ್ದನು. ಅದೇ ಜನಾಂಗದ ಪುರುಷನಿಂದ ಅತ್ಯಾಚಾರಕ್ಕೆ ಒಳಗಾದ ಮಹಿಳೆಯರ ವೈದ್ಯಕೀಯ ಪರೀಕ್ಷೆಯನ್ನು ನಡೆಸಲಾಗುವುದಿಲ್ಲ. ಒಂದು ಬಾರಿ ಈ ಯೋಜನೆಯ ವ್ಯಾಪ್ತಿಯಿಂದ ಹೊರಗುಳಿದರೆ ಪೊಲೀಸರು ಐ.ಪಿ.ಸಿ. ಸೆಕ್ಷನ್ 375 ಅಡಿಯಲ್ಲಿಯೂ ದಾಖಲಿಸುವುದಿಲ್ಲ. ಇಷ್ಟಾಗಿಯೂ ಬಹುಪಾಲು ಪ್ರಕರಣಗಳಲ್ಲಿ ಮಹಿಳೆಯರು ಪರಿಹಾರಧನ ವನ್ನು ಪಡೆದಿದ್ದಾರೆ.

ಅತ್ಯಾಚಾರದ ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾದದ್ದು ತುಂಬಾ ಕಡಿಮೆ. ಕೇವಲ ಎರಡು ಪ್ರಕರಣಗಳಲ್ಲಿ ಶಿಕ್ಷೆಯಾಗಿದ್ದರೆ, 3 ಪ್ರಕರಣಗಳಲ್ಲಿ ಬಿಡುಗಡೆಯನ್ನು ಪಡೆದಿದ್ದರು. ಸರ್ಕಾರ ಹಾಗೂ ಪೊಲೀಸ್ ಇಲಾಖೆಗಳ ನಡುವೆ ಸೂಕ್ತ ಹೊಂದಾಣಿಕೆಯಿದ್ದು, ಪರಿಹಾರಧನವನ್ನು ಕೊಡಿಸುವ ಕ್ರಿಯೆ ಮುಗಿದ ಕೂಡಲೇ ದಾಖಲೆಗಳು ಅರೆಬರೆಯಾಗುತ್ತಿದ್ದವು, ಇಲ್ಲವೆ ಕಾಣೆಯಾಗುತ್ತಿದ್ದವು. ಮಹಿಳೆಯ ಮೇಲೆ ನಡೆಯುವ ದೌರ್ಜನ್ಯವನ್ನು ತಡೆಯುವುದಕ್ಕಿಂತ ಪರಿಹಾರಧನ ವನ್ನು ನೀಡುವುದರ ಮೂಲಕ ಮಹಿಳೆಯರನ್ನು ನ್ಯಾಯ ಪಡೆಯುವು ದರಿಂದಲೇ ವಂಚಿಸಲಾಗುತ್ತಿದೆ. ಈ ಯೋಜನೆಯ ಬಗ್ಗೆ ಮಹಿಳೆ ಯರಿಗೂ ಸರಿಯಾದ ಮಾಹಿತಿ ಇರುವುದಿಲ್ಲ. ಪರಿಹಾರಧನವನ್ನು ಪಡೆಯದ ಮಹಿಳೆಯರಿಗೆ ಯೋಜನೆಯ ಬಗ್ಗೆ ಮಾಹಿತಿ ಇರಲಿಲ್ಲ. ಕೆಲವೊಮ್ಮೆ ತಪ್ಪು ಮಾಹಿತಿಯನ್ನು ನೀಡಲಾಗುತ್ತಿತ್ತು. 5,000 ರೂ.ಗಳ ಜೊತೆಗೆ ಭೂಮಿ ಎಂದೋ, 25,000 ರೂ., 10,000 ರೂ. ಎಂದೋ ತಪ್ಪು ತಪ್ಪು ಮಾಹಿತಿಯನ್ನು ನೀಡಲಾಗುತ್ತಿತ್ತು. ಅಲ್ಲದೆ ಹೀಗೆ ಪರಿಹಾರವನ್ನು ಪಡೆಯುವ ಮಹಿಳೆಯರನ್ನು ನೆರೆಹೊರೆಯವರು ಅಪಹಾಸ್ಯ ಮಾಡುವುದು ಸಾಮಾನ್ಯ ಸಂಗತಿಯಾಗಿತ್ತು. ಅದೃಷ್ಟ ವಂತಳೆಂಬ ವ್ಯಂಗ್ಯ, ಕೆಲವೊಮ್ಮೆ ಅತ್ಯಾಚಾರ ನಡೆದೇ ಇಲ್ಲ, ಆಕೆಯೇ ಬೇರೆಯವರೊಂದಿಗೆ ಓಡಿ ಹೋಗಿದ್ದಳೆಂದೂ ಅಣಕವಾಡಿದ್ದು ಉಂಟು.

ಪರಿಹಾರದ ಹಣವನ್ನು ನಿಯಂತ್ರಿಸುವವರು ಹಾಗೂ ನಿರ್ಧಾರ ವನ್ನು ತೆಗೆದುಕೊಳ್ಳುವವರು ಸಂಪೂರ್ಣವಾಗಿ ಗಂಡಸರು. ಈ ಹಣವನ್ನು ಕೆಲವರು ಬ್ಯಾಂಕ್‌ನಲ್ಲಿ, ಅಂಚೆ ಕಛೇರಿಯಲ್ಲಿಟ್ಟಿದ್ದರೆ ಕೆಲವರು ಮಕ್ಕಳ ಮದುವೆಗಾಗಿ ಇಟ್ಟಿದ್ದೂ ಇದೆ. ತಂದೆಯೊಬ್ಬ ತನ್ನ 12 ವರ್ಷದ ಮಗಳಿಗಾಗಿ ಪಡೆದ ಪರಿಹಾರದ ವಿಷಯವನ್ನು ಹೆಂಡತಿಗಾಗಲೀ ಮಗಳಿಗಾಗಲೀ ತಿಳಿಸಿಯೇ ಇರಲಿಲ್ಲ!


ಮಹಿಳೆಯರು ಸಾಮಾನ್ಯವಾಗಿ ಹೀಗೆ ಪಡೆದ ಪರಿಹಾರದ

ಹಣವನ್ನು ಮನೆಯ ದೈನಂದಿನ ಅಗತ್ಯಗಳಿಗೆ ಬಳಸುವುದು ಅನಿವಾರ್ಯವಾಗಿತ್ತು. ಕೆಲವರು ವಕೀಲರಿಗೆ, ಮಧ್ಯವರ್ತಿಗಳಿಗೆ 2,000 ರೂ.ಗಳಷ್ಟು ಹಣವನ್ನು ನೀಡಿದ್ದಾರೆ. ಕೆಲವೊಮ್ಮೆ 5,000 ರೂ.ಗಳಲ್ಲಿ 4,000 ರೂ.ಗಳವರೆಗೆ ಕೇಸ್ ಗಾಗಿಯೇ ಖರ್ಚು ಮಾಡಿದ್ದುಂಟು.

ಅತ್ಯಾಚಾರಕ್ಕೆ ಬಲಿಯಾದ ಕುಟುಂಬಗಳ ಸ್ಥಿತಿಯು ಶೋಚನೀಯವಾದದ್ದು. ಕೆಲವು ಕುಟುಂಬದವರು ಮನೆಯನ್ನೇ ಖಾಲಿ ಮಾಡಿ ಬೇರೆ ಕಡೆ ಸ್ಥಳಾಂತರಗೊಳ್ಳುತ್ತಾರೆ. ಇನ್ನೂ ಕೆಲವರು, ಸಂಬಂಧಿಕರ ಮನೆಗೆ ಕಳಿಸಿಬಿಡುತ್ತಾರೆ. ಅಪ್ರಾಪ್ತವಯಸ್ಸಿಗೆ ಬಾಲಕಿಯರನ್ನು ಶಾಲೆ ಬಿಡಿಸಲಾಗುತ್ತಿತ್ತು. ಎಲ್ಲೂ ಹೋಗಲು ಸಾಧ್ಯವಾಗದವರು ಅದೇ ಗ್ರಾಮದಲ್ಲಿ ಉಳಿದಿದ್ದಾರೆ. ಅಂತಹವರು, ಆರೋಪಿಗಳ ಹೆದರಿಕೆ ಬೆದರಿಕೆಗಳ ಜೊತೆಗೇ ಗ್ರಾಮದಲ್ಲಿ ವಾಸಿಸಬೇಕಾಗುತ್ತದೆ. ಅತ್ಯಾಚಾರಕ್ಕೆ ಬಲಿಯಾಗಿರುವ ಕಾರಣಕ್ಕಾಗಿ ಆಕೆಯ ಜನಾಂಗ ಆಕೆಯನ್ನು ತುಚ್ಛವಾಗಿ ನೋಡುವುದಿಲ್ಲ. ಬದಲಾಗಿ ಆಕೆ ಪೊಲೀಸ್ ಠಾಣೆಗೆ ಕಛೇರಿಗಳಿಗೆ ಓಡಾಡಲು ಪ್ರಾರಂಭಿಸಿದಾಗ, ಅಧಿಕಾರಿಗಳು ವಿಚಾರಣೆಗಾಗಿ ಗ್ರಾಮಕ್ಕೆ ಬರುವಂಥ ಸಂದರ್ಭದಲ್ಲಿ ಹೆಚ್ಚು ಅವಮಾನ ಹಾಗೂ ಹಿಂಸೆಯನ್ನು ಅನುಭವಿಸುತ್ತಾಳೆ. ಮಾಯಾವತಿ ಸರ್ಕಾರ ಪರಿಹಾರದ ಮೊತ್ತವನ್ನು 25,000 ರೂ.ಗೆ ಏರಿಸಿದೆ. ಇದನ್ನು ವಿತರಿಸಲು ಡೈರೆಕ್ಟರ್ ಜನರಲ್ ಹೆಲಿಕಾಪ್ಟರ್‌ನಲ್ಲಿ ಬರುವುದು, ಅದರ ಪ್ರಚಾರ ಆಕೆಯ ಘನತೆಯನ್ನು ಕುಗ್ಗಿಸುತ್ತದೆ. ಈ ಯೋಜನೆಗಳ ಉಪಯೋಗ ಪಡೆಯುವ ಪ್ರತಿ ಹಂತದಲ್ಲೂ ಆಕೆ ತಾನು ಪರಿಶಿಷ್ಟ ಜನಾಂಗದವಳೆಂದು, ಅತ್ಯಾಚಾರಕ್ಕೊಳಗಾದವಳೆಂದು ಘೋಷಿಸಿಕೊಳ್ಳುತ್ತಾ ಬರುವುದು ಅನಿವಾರ್ಯವಾಗುತ್ತದೆ.

ಅತ್ಯಾಚಾರಕ್ಕೆ ಒಳಗಾದ ಮಹಿಳೆಗೆ, ನ್ಯಾಯಾಲಯದಲ್ಲಿ ಸೂಕ್ತ ನ್ಯಾಯ ಸಿಗುವಂತೆ ನೋಡಿಕೊಂಡು ಆರೋಪಿಗೆ ಶಿಕ್ಷೆಯಾಗುವಂತೆ ಮಾಡುವುದರ ಬದಲಾಗಿ ಪರಿಹಾರ ಧನ ನೀಡುವ ಧೋರಣೆಯಿಂದ ಪರಿಶಿಷ್ಟ ಜಾತಿ ಹಾಗೂ ವರ್ಗದ ಮಹಿಳೆಯರ ಬದುಕಿನಲ್ಲಿ ಎಂತಹ ಬದಲಾವಣೆಯಾಗುತ್ತಿದೆಯೆಂಬುದನ್ನು ವಿಮರ್ಶಿಸುವುದು ಜರೂರಿಯಾಗಿದೆ.

(ಮೈನ್‌ಸ್ಟ್ರೀಮ್ ಪತ್ರಿಕೆಯಲ್ಲಿ ಪ್ರಕಟವಾದ ಈ ಲೇಖನದ ಅನುವಾದಕರು: ಎಚ್.ಎಸ್. ರಾಜೇಶ್ವರಿ)



ಪುರಂದರದಾಸರ ದೃಷ್ಟಿಯಲ್ಲಿ ಸ್ತ್ರೀ

• ಚಿ.ನ. ಮಂಗಳಾ

"ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ"

ಧರ್ಮಕ್ಷಯ ಉಂಟಾಗಿ ಅಧರ್ಮ ವೃದ್ಧಿಯಾದ ಸಂದರ್ಭಗಳಲ್ಲಿ ಧರ್ಮಸಂಸ್ಥಾಪನೆಗಾಗಿ ಆಗಾಗ ಮಹಾಪುರುಷರ ಅವತಾರವಾಗುತ್ತಲೇ ಇದೆ. ಭಗವಂತನ ಹತ್ತವತಾರಗಳಲ್ಲದೆ ಭಗವಾನ್ ಬುದ್ಧ, ಮಹಾವೀರ, ರಾಮಕೃಷ್ಣ ಪರಮಹಂಸ, ಮಹಾತ್ಮ ಗಾಂಧೀಜಿ ಇಂತಹ ಸತ್ಪುರುಷರ ಬಾಳಿನ ಬೆಳಕು ಬದುಕನ್ನು ಆವರಿಸಿರುವ ಅಧಿಕಾರವನ್ನು ತೊಡೆದು ಹಾಕುವ ದಿವ್ಯ ಸಾಧನವಾಗಿದೆ. ಕರ್ಮಯೋಗಿಗಳಾಗಿ, ಭಗವದ್ಭಕ್ತರಾಗಿ, ಜ್ಞಾನಭಂಡಾರಿಗಳಾಗಿ ಅನೇಕ ಸ್ತ್ರೀಪುರುಷರು ಭರತ ಭೂಮಿಯನ್ನು ಪವಿತ್ರತೆಯ ಬೀಡಾಗಿ ಮಾಡಿದ್ದಾರೆ. ಇಂತಹ ಉಜ್ವಲ ಪಾರಂಪರ್ಯದ ಒಂದು ಅನರ್ಘ್ಯ ಕುಸುಮ ಶ್ರೀ ಪುರಂದರದಾಸರು. ಇವರು ವಿಷಯಸುಖಗಳ ಸುಳಿ ಮಾನವನನ್ನು ಹೇಗೆ ಅಧಃಪತನದ ಪಾತಾಳಕ್ಕೆಳೆಯುತ್ತದೆಂಬುದನ್ನು ತಮ್ಮ ಕೀರ್ತನೆಗಳಲ್ಲಿ ಜನರ ಹೃದಯಕ್ಕೆ ನಾಟುವಂತೆ ಪರಿಪರಿಯಾಗಿ ಬಣ್ಣಿಸಿದರು. ಆದರೆ ಮಾನವಕೋಟಿಯ ಅರ್ಧ ಭಾಗವಾದ ಸ್ತ್ರೀಯರ ಬಗ್ಗೆ ದಾಸರ ದೃಷ್ಟಿ, ಏಕೆ ಪ್ರಸನ್ನವಾಗಿರಲಿಲ್ಲ! ಅದರಲ್ಲೂ ಪುರಂದರದಾಸರರಾಗುವುದಕ್ಕೆ ಮೊದಲು ಅವರು ನವಕೋಟಿ ನಾರಾಯಣರಾಗಿ, ಧನ ಲೋಭದಿಂದಲೂ, ಸಾಂಸಾರಿಕ ಮೋಹಪಾಶದಿಂದಲೂ ಬಂಧಿತರಾಗಿದ್ದಾಗ ಅವರಿಗೆ ಎಂತಹ ಸುಗಣಿಯಾದ ಪತ್ನಿಯಿದ್ದಳು ಎಂಬುದನ್ನು ನೆನೆಸಿಕೊಂಡಾಗ ದಾಸರ ದೃಷ್ಟಿಯಲ್ಲಿ ಸ್ತ್ರೀ ಅಷ್ಟು ಲಘುವಾಗಿ ಕಂಡುಬರಲು ಆಗಿನ ಸಮಾಜ ಕಾರಣವೇ?

ನವಕೋಟಿ ನಾರಾಯಣನ ಪತ್ನಿ ಸರಸ್ವತಿ. ಅವರ ಜೀವನ ವೃತ್ತಾಂತವನ್ನು ನೋಡಿದರೆ ಶ್ರೀನಿವಾಸನಾಯಕ ಪುರಂದರದಾಸರಾಗಲು ಅವರ ಪತ್ನಿಯೇ ಕಾರಣ. ಬೇಡಿ ಬಂದ ಯಾಚಕನಿಗೆ ಮೂಗಿನಲ್ಲಿದ್ದ ಮೂಗುತಿಯನ್ನೇ ದಾನಮಾಡಿ ಪತಿಗೆ ದಿವ್ಯದರ್ಶನ ಮಾಡಿಸಿದ ಮಹಾಸಾಧ್ವೀಮಣಿ ಆಕೆ.

ತಮ್ಮ ಹೆಂಡತಿಯಿಂದ ವೈರಾಗ್ಯಭಾಗ್ಯ ಹುಟ್ಟಿತೆಂದೂ ಅವರು ದಂಡಿಗೆ ಬೆತ್ತ ಹಿಡಿದು ದಾಸ ಜೀವನ ಆರಂಭಿಸಲು ಆಕೆಯೇ ಕಾರಣವೆಂದು ಆಕೆಯ ಸಂತತಿ ಸಾವಿರವಾಗಲೆಂದು ಅವರೇ ಈ ಕೆಳಗಿನ ಹಾಡಿನಲ್ಲಿ ಹಾಡಿದ್ದಾರೆ.

ಅದದ್ದೆಲ್ಲ ಒಳಿತೇ ಆಯಿತು ನಮ್ಮ ॥ಪ॥
ಶ್ರೀಧರನ ಸೇವೆ ಮಾಡಲು ಸಾಧನ ಸಂಪತ್ತಾಯಿತು ॥ಅ.ಪ॥
ದಂಡಿಗೆ ಬೆತ್ತ ಹಿಡಿಯುವುದಕ್ಕೆ
ಮಂಡೆ ಬಾಗಿ ನಾಚುತಲಿದ್ದೆ
ಹೆಂಡತಿ ಸಂತತಿ ಸಾವಿರವಾಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯ

ಎಂದಿದ್ದಾರೆ. ಆಶೀರ್ವದಿಸಿದ್ದಾರೆ. ಆದರೆ ಅವರ ಕೆಳಗಿನ ಪದ ನೋಡಿ:

ಹೆಂಡತಿ । ಪ್ರಾಣ ಹಿಂಡುತಿ ॥ಪ॥
ದೊಡ್ಡ । ಕೊಂಡ ಕೋತಿಯಂತೆ ಕುಣಿ ಕುಣಿಸುತ್ತಿ ॥ಅ.ಪ॥
ಹೊತ್ತಾರೆ ಏಳುತ್ತಿ ಹೊರಗೆ ತಿರುಗಾಡುತ್ತಿ ।
ಹೊತ್ತು ಹೋಯಿತು ಭತ್ಯ ತಾರೆನ್ನುತ್ತಿ ॥
ಉತ್ತಮ ಗುರು ಹಿರಿಯರ ಮಾತು ಮೀರುತ್ತಿ ।
ಮೃತ್ಯು ದೇವತೆಯಂತೆ ಮನೆಯೊಳಗಿರುತಿ ॥1॥

ಇಲ್ಲದ್ದು ಬೇಡುತ್ತಿ ಸುಳ್ಳು ಮಾತಾಡುತ್ತಿ ।
ಒಳ್ಳೆ ಊಟವನ್ನುಂಡು ಕುಳಿತಿರ್ಪೆನೆಂತಿ ॥
ಎಳ್ಳಿನಷ್ಟು ಕೆಲಸ ಮಾಡಲಾರೆನಂತಿ ।
ಎಲ್ಲೆಲ್ಲಿ ತಲೆಯೆತ್ತದ್ಹಾಂಗೆ ಮಾಡುತ್ತೀ ॥2॥

ಹಿರಿಯತನಕ್ಹೋಗುತ್ತಿ ಗರುವಿಕೆ ಮಾಡುತ್ತೀ ।
ನೆರೆಹೊರೆಯರ ಕಲ್ಲಲೆ ಬಡೆದಾಡುತ್ತಿ ॥
ದೊರೆ ಸಿರಿಪುರಂದರ ವಿಠಲನ ಸ್ಮರಿಸದೆ ।
ದುರಿತಕ್ಕೆ ಗುರಿಯಾಗಿ ನೀ ನಿಲ್ಲುತ್ತಿ ॥3॥

ಏಕೆ ಅವರು ಹೀಗೆ ಹಾಡಿದರು? ಗಂಡಂದಿರ ಪ್ರಾಣ ಹಿಂಡುವುದು ದಿನ ನಿತ್ಯದ ನೋಟವೇನೊ ನಿಜ.

"ಅನ್ಯರಲಿ ಜನಿಸಿರ್ದ ಅಂಗನೆಯ ಕರೆತಂದು ।
ತನ್ನ ಮನೆಗವಳ ಯಜಮಾನಿಯೆನಿಸಿ ॥
ಭಿನ್ನವಿಲ್ಲದಲರ್ಧದೇಹವೆನಿಸುವ ಸತಿಯು ।
ಕಣ್ಣಿನಲಿ ನೋಡಲಂಜ್ವಳು ಕಾಲವಶದಿ"

"ಅತಿ ಪ್ರೀತಿಯಿಂದಲಿ ಮದುವ್ಯಾದ ಮೋಹದ ।
ಸತಿ ನಿನ್ನ ಮರಣ ಕಾಲದಲ್ಲಿ ॥
ಗತಿಯಾರು ತನಗೆಂದು ಗೋಳಿಡುವಳಲ್ಲದೆ ।
ಜೊತೆಯಾಗಿ ನಿನ್ನ ಸಂಗಡ ಬಾಹೋಳಲ್ಲ."

ಈ ಎರಡು ಕೀರ್ತನೆಗಳಲ್ಲಿ ದಾಸರು ಸಂಸಾರವನ್ನು ನೆಚ್ಚಬೇಡವೆಂದು ಎಚ್ಚರಿಸುವಾಗ ಪತಿ ಮರಣ ಹೊಂದಿರುವಾಗ ಸತಿ ಅವನನ್ನು ನೋಡಲು ಅಂಜುವಳು, ತನಗೆ ಗತಿ ಯಾರೆಂದು ಗೋಳಿಡುವಳು ಎಂದಿದ್ದಾರೆ. ಆದರೆ ಸತಿಯ ಗೋಳಿಗೆ ಬರಿಯ ಆರ್ಥಿಕ ಅವಲಂಬನೆಯೊಂದೇ ಕಾರಣವೆ? ಹತ್ತಾರು ವರುಷಗಳಿಂದ ಒಟ್ಟಿಗೆ ನಡೆದುಬಂದ ಬಾಳು ಪತಿಯ ಮರಣದಿಂದ ಬರಡಾಗುವಾಗ ಸತಿಯ ಮನಸ್ಸಿನ ಉಮ್ಮಳವೆಷ್ಟಿರಬೇಡ!

ಹೆಣ್ಣುಮಕ್ಕಳನ್ನೂ, ಕಾಮ, ಮೋಹ, ಅಸತ್ಯಗಳನ್ನೂ ಒಂದೇ ತಕ್ಕಡಿಯಲ್ಲಿ ತೂಗಿ ಪುರಂದರದಾಸರು ಗಂಡಸರನ್ನು ಹೀಗೆ ಎಚ್ಚರಿಸಿದ್ದಾರೆ:

"ನಂಬಬೇಡಿ ನಾರಿಯರನ್ನು ।
ಹಂಬಲ ಹಾರೈಸಬೇಡಿ ॥ಪ॥

ಅಂಬುಜಾಕ್ಷಿಯರೊಲುಮೆ ।
ಡಂಭಕವೆಂದು ತಿಳಿಯಿರೊ ॥ಅ.ಪ.॥

ಮಾಟವೆಲ್ಲ ಪುಸಿಯು ಸತಿಯರಾಟವೆಲ್ಲ ಸಂಚು ಸನ್ನೆ।
ನೋಟವೆಲ್ಲ ಘನ್ನ ಘಾತಕ ಕೂಟವೆಲ್ಲ ವಂಚನೆ ॥
ಪಾಟುಗೆಟ್ಟು ಹೆಂಗಳೊಡನೆ ಕೋಟಲೆಗೊಂಡು ತಿರುಗಬೇಡಿ ।
ನೀಟುಗಾತಿಯರೊಲುಮೆ ಬೂಟಕವೆಂದು ತಿಳಿಯಿರೊ ॥1॥

ಸೋತನೆಂದು ವಿಟಗೆ ದೈನ್ಯ ಮಾತನಾಡಿ ಮರಳುಗೊಳಿಸಿ।
ಕಾತರವನು ಕೊಟ್ಟು ಅವನ ಮಾತಾಪಿತರ ತೊಲಗಿಸಿ ॥
ಧರಣಿ ಜನರು ಕೇಳಿ ಲೇಶ ಕರುಣವಿಲ್ಲ ನಾರಿಯರಿಗೆ ।
ಎರಳೆ ಕಂಗಳ ಹೆಂಗಳೊಲುಮೆ ಬರೆಹ ನೀರಮೇಲಿನ ।
ಸರಸಮುಖಿಯರಿರವ ನೀವು ಬರಿದ ನಂಬಿ ಕೆಡಲುಬೇಡಿ।
ಗುರು ಪುರಂದರ ವಿಠಲರಾಯನ ಚರಣ ನಂಬಿ ಬದುಕಿರೋ" ॥

ಹೆಂಗಸರನ್ನು ನಂಬಿ ಕೆಡುವ ಪುರುಷರಿಗೇನೋ ಇದು ಎಚ್ಚರಿಕೆ ಯಾಯಿತು. ಆದರೆ ಸ್ವಾರ್ಥ, ಮೋಸ, ವಂಚನೆಯೇ ಮೂರ್ತಿವೆತ್ತು ಬಂದಂತಿರುವ ಗಂಡಸರನ್ನು, ಕೈ ಹಿಡಿದ ಪತಿಯನ್ನು ನಂಬಿ ಕಣ್ಣೀರಿನಲ್ಲಿ ಕೈ ತೊಳೆಯುತ್ತಿರುವ ಹೆಂಗಸರಿಲ್ಲವೆ?

ಸತಿಗೆ ಸ್ವಾತಂತ್ರ್ಯವನ್ನು ಕೊಡಬೇಡವೆಂದು ಎಚ್ಚರಿಸುವ ಈ ಕೀರ್ತನೆಯನ್ನು ನೋಡಿ:

"ಸತಿಗೆ ಸ್ವತಂತ್ರವ ಕೊಡದಿರು । ನಿನ್ನ ।
ಮತಿಗೆಟ್ಟು ಬಯ ಬಿಡದಿರಣ್ಣ ॥ಪ॥

ಪತಿಗೆ ಬಣ್ಣದ ಮಾತನಾಡ್ಯಾಳೊ ।
ಅವಳು ಮಿತಿಯಿಲ್ಲದೆ ವೆಚ್ಚ ಮಾಡ್ಯಾಳೊ ॥
ಅತಿ ಹರುಷದಲಿ ಕೂಡ್ಯಾಳೊ । ಪರ ।
ಗತಿಗೆ ಕರ ಕರೆ ಮಾಡ್ಯಾಳಣ್ಣ ॥1॥

ಹಡೆದ ತಂದೆ ತಾಯಿ ತೊರೆಸ್ಯಾಳೊ ।
ತನ್ನ ಕಡೆಗೆ ಬಾಯೆಂದು ಕರೆಸ್ಯಾಳೊ ॥
ಬಿಡದೆ ಒಂಟಿಯ ಮಾಡಿ ನಿಲಿಸ್ಯಾಳೊ ।
ಒಂದು ಪಡಿ ಭತ್ತಕೆ ಬಾಯಿ ಬಿಡಿಸ್ಯಾಳಣ್ಣ ॥2॥

ತಂದದ್ದರೊಳಗರ್ಧ ಕದ್ದಾಳೊ । ತನ್ನ ।
ಸಂದು ಸುಳಿವು ನೋಡಿ ಮೆದ್ದಾಳೊ ॥
ಮುಂದಿದ್ದ ಕೂಸನ್ನು ಒದ್ದಾಳೊ ।
ಹತ್ತು ಮಂದಿಲಿ ಮಾನವ ಕೆಡಿಸ್ಯಾಳಣ್ಣ ॥3॥

ಉಂಡು ಉಟ್ಟ ಮನೆ ಎಣಿಸ್ಯಾಳೊ ।
ಅವನ ಭಂಡು ಮಾಡಿ ಬಾಯ ಬಿಡಿಸ್ಯಾಳೊ ॥
ಮಂಡೆ ಕೆದರಿಕೊಂಡು ಸೆಣಸ್ಯಾಳೊ ।
ದೊಡ್ಡ ಕೊಂಡ ಕೋತಿಯಂತೆ ಕುಣಿಸ್ಯಾಳಣ್ಣ ॥4॥

ಕರಕರೆ ಸಂಸಾರ ತರವಲ್ಲ ।
ಇಂಥ ದುರುಳ ಹೆಣ್ಣಿನ ಸಂಗವಿರೆ ಸಲ್ಲ ॥
ನೆರೆಹೊರೆ ನೋಡಿ ನಗುವರಲ್ಲ । ಸಿರಿ ।
ಪುರಂದರ ವಿಠಲ ತಾ ಬಲ್ಲ" ॥5॥

ಮನೆಗೆ ಭಾಗ್ಯಲಕ್ಷ್ಮಿಯಾಗಿ, ಪತಿಗೆ ನೆರವಾಗಿ ಮನೆಯನ್ನು ನಂದನ ವನವಾಗಿಸುವ ಮಹಿಳಾಮಣಿಗಳೂ ಇರುತ್ತಾರಲ್ಲವೆ?

ವಿಧವೆಯಾದ ಹೆಂಗಸು ಹೇಗೆ ಸಮಾಜದ ಗುರಿಗೆ ಬಲಿಯಾಗುತ್ತಾಳೆಂಬುದು ಈ ಕೆಳಗಿನ ಕೀರ್ತನೆಯಲ್ಲಿ ಚಿತ್ರಿಸಲ್ಪಟ್ಟಿದೆ.

"ರಮಣನಿಲ್ಲದ ಸತಿ ಪರರ ಕಣ್ಣಿಗೆ ಮಾರಿ ॥ಪ॥
ಹಡೆದವಳ ಎದೆ ಕೊರಳ ಕೊಯ್ವಂಥ ಚೂರಿ ॥ಅ.ಪ॥

ಮಾತು ಕಲಿತರೆ ಏನು ಮಹಾಜಾಣೆಯಾದರೇನು ।
ಚಾತುರ್ಯವಿದ್ದರೇನು ಚಲುವೆಯಾದರೇನು ॥
ರಾಶಿ ಹಣವಿದ್ದರೇನು ।
ರೀತಿ ಕೆಟ್ಟ ಜನ್ಮ ಪೊರೆಯಬೇಕಲ್ಲ ॥1॥

ಹೊರಗೆ ಬರಲಿಕ್ಕೆ ಸಲ್ಲ ಇದಿರಾಗಿ ಇರ ಸಲ್ಲ ।
ಅಡಿಗೆಗೆ ಯೋಗ್ಯಳಲ್ಲ ಹರಿಯು ತಾನೇ ಬಲ್ಲ ॥
ಮರಿಯಾದೆಗಳು ಇಲ್ಲ ಬಲು ಹಗುರು ರಾಜ್ಯಕ್ಕೆಲ್ಲ ।
ಸರ್ವ ರೀತಿಲಿ ಕೆಟ್ಟ ಜನ್ಮ ಪೊರೆ ಸಲ್ಲ ॥2॥

ಆಕೆ ತನ್ನಯ ಮನೆಗೆ ಮೃತ್ಯು ಎಂದೆಂಬುವಳು ।
ಹುಟ್ಟಿದಾ ಮನೆಯವರು ದೂಷಿಸುವರು ॥
ಎಷ್ಟು ಹೇಳಲಿ ಬಹಳೆ ತುಚ್ಛವನೆ ಮಾಡುವರು ।
ಅಕ್ಕ ತಂಗಿಯರಿಗೆ ದಿಕ್ಕು ಎಂಬುವರು ॥3॥

ಉಪಕಾರ ಮಾಡಿದರೆ ಗತಿಯು ನೀನೆಂಬುವರು ।
ಶ್ರಮವೆಂದರು ಆದರಿಸರು ॥
ವಿಪರೀತ ಹಣವಿದ್ದರಪಹರಿಸಿ ತಿಂಬುವರು ।
ಅತಿ ದೈನ್ಯದಿಂದ ಬೇಡೆ ಬಾಯಿ ಬಡಿಸುವರು ॥4॥

ಚಾಕರಿ ಮಾಡಿದರೆ ಆಚೀಚೆಲಾಡುವರು ।
ರಾಶಿ ಅನ್ನವನ್ನುಂಡಳೆಂದು ದೂರುವರು ॥
ಈಸು ಸೈರಿಸಿಕೊಂಡು ಏಕಾಗ್ರದಲಿ ಕುಳಿತು ।
ಈಶ ಪುರಂದರ ವಿಠಲನ ನೆನೆಯ ನಾರಿ ॥5॥

ಆಧುನಿಕ ಕಾಲದಲ್ಲಿ ಕೂಡ ವಿಧವೆಯರ ಬಾಳು ಕಣ್ಣೀರಿನ ಕಡಲಾಗಿರುವಾಗ ಪುರಂದರದಾಸರ ಕಾಲಕ್ಕೆ ಇನ್ನೂ ಕಠಿಣವಾಗಿರಬೇಕು. ಮದುವೆಯಾಗಿ ಪತಿಯ ಮನೆಗೆ ಹೋಗುವ ಹೆಣ್ಣುಮಗಳಿಗೆ ಹೇಳುವ ಸವಿಮಾತು ಕೆಳಗಿನ ಕೀರ್ತನೆ:

"ತಂಗಿಗ್ಹೇಳಿದ ಕೃಷ್ಣ ಚಂದದಲಿ ಬುದ್ಧಿ ॥ಪ॥
ಅತ್ತೆಯ ಮನೆಯಲ್ಲಿ ಇರುವಂಥ ಸುದ್ದಿ ॥ಅ.ಪ.॥

ಯಾರೇನು ಅಂದರೂ ಮೋರೆಯ ತಿರುಹದಿರು ।
ಮೋರೆ ಮೇಲಕ್ಕೆಯೆತ್ತಿ ಬಲ್ಲಳೆಂದೆನಿಸಿ ॥
ವಾರಿಗೇವರಕೂಡ ನೀರನ್ನು ತರುವಾಗ ।
ವಾರೆಗಣ್ಣಲಿ ನೋಟ ನೋಡದಿರು ಕಂಡ್ಯ ॥1॥

ಪರರ ಒಡವೆಯ ಕಂಡು ದುರುಳ ಮಾತಾಡದಿರು ।
ನೆರೆಹೊರೆಯವರಿಗೆ ನೀನು ತಲೆವಾಗಿ ನಡಿಯೆ ॥
ಪರರ ಮಾತುಗಳಿಂದ ದುರುಳಳೆಂದು ಎಣಿಸಬೇಡ ।
ನೆರೆಹೊರೆಯವರ ಕಂಡು ನೀ ಬದುಕು ಮಾಡಮ್ಮ ॥2॥

ಭಂಗಾರದ ಪೇಟೆಯೊಳು ಅಂಗಡಿಗೆ ಹೋಗದಿರು ।
ಅಂಗನೇರಿಗೆ ಮಾನಭಂಗಾಗಿ ನಡೆಯೆ ॥
ಅಂಗನೇರಿಗೆ ನಿನ್ನಂತರಂಗವ ಹೇಳದಿರು ।
ಭಂಗಾರ ವಸ್ತುಗಳ ಮುಚ್ಚಿಕೊಳಮ್ಮ ॥3॥

ಹಾಕಿದ್ದು ನೀನುಂಡು ಬೇಕೆಂದು ಬೇಡದಿರು ।
ಸಾಕು ಸಾಕೆಂಬ ನಾಚಿಕೆಯ ಹಿಡಿಯೆ ॥
ಮಂದಿಯರೊಡನೆ ಕೋಕೆ ಮಾತಾಡದಿರು ।
ಲೋಕದೊಳಿವಳೊಬ್ಬ ಮೂಕಿಯೆಂದೆನಿಸೆ ॥4॥

ಇಷ್ಟರು ಅಂದರು ನಿಷ್ಠೂರವಾಡದಿರು ।
ಘಟ್ಟಿ ಮಾಡಮ್ಮ ನಿನ್ನ ಮನಸು ।
ಸೃಷ್ಟಿಯೊಳಗೆ ನಮ್ಮ ಪುರಂದರ" ॥5॥

ಅತ್ತೆ ಮನೆಯನ್ನು ಸೇರಿದ ಸೊಸೆ ಹೀಗೆ ಹಿರಿಯರಿಗೆ ಗೌರವ ಕೊಡಬೇಕು, ಅಕ್ಕಪಕ್ಕದವರೊಡನೆ ಹೊಂದಿಕೊಂಡು ಹೋಗಬೇಕು ಎನ್ನುವುದನ್ನು ದಾಸರು ಬಣ್ಣಿಸಿದ್ದಾರೆ. ಹೆಂಗಸರ ಬಾಯಲ್ಲಿ ಗುಟ್ಟು ನಿಲ್ಲುವುದಿಲ್ಲ ಹಾಗೆಯೆ, ಬಂಗಾರದ ಆಸೆ ಹೆಣ್ಣುಮಕ್ಕಳಿಗೆ ಹೋಗುವುದಿಲ್ಲ. ಮೊದಲಾದ ಲೋಕರೂಢಿಯ ವಿಷಯಗಳೂ ಇಲ್ಲಿವೆ. ಸತಿಗೆ ಪತಿಯೇ ಪರದೈವವೆಂಬ ಸಚ್ಚಾರಿತ್ರ್ಯದ ನುಡಿ ಹೇಳಲ್ಪಟ್ಟಿದೆ. ಇಂತಹ ಚಾರಿತ್ರ್ಯವಿಲ್ಲದವರಿಗೆ ದಾಸರು ವಿಧಿಸಿರುವ ಶಿಕ್ಷೆ ಘೋರ ವಾಗಿಯೇ ಇದೆ. ಈ ಕೆಳಗಿನ ಕೀರ್ತನೆ ನೋಡಿ:

ಸುಜ್ಞೆಯಿಂದಾಳ ಬೇಕಣ್ಣ ॥ಪ॥
ಗಂಡನಾಜ್ಞೆಯ ಮೀರಿ ನಡೆವ ಲಂಡ ಹೆಣ್ಣ ॥ಅ॥

ಅತ್ತೆ ಮಾವಗೆ ಅಂಜದವಳ ।
ತನ್ನ ಉತ್ತಮ ಪುರುಷನ ಜರೆದು ನುಡಿವವಳ॥
ಭಕ್ತರ ಕಂಡು ಬಂಧಿಪಳ ।
ನಡುನೆತ್ತಿಯ ಚರ್ಮವ ಕೆತ್ತಬೇಕವಳ ॥1॥

ಕೂಳು ಕೊಬ್ಬಿಲಿ ಉರಿವವಳ ।
ಗಂಡ ಹೇಳಿದ ಮಾತು ಕೇಳದೆ ಮೀರುವವಳ ॥
ಸೂಳೆಯಂದದಿ ನಡೆವವಳ ತಲೆ ।
ಬೋಳಿಸಿ ಕಸ ಹೆಡಿಗೆ ಹೊರಿಸಬೇಕವಳ ॥2॥

ಹಟ್ಟಿ ಹಟ್ಟಿ ತಿರುಗುವಳ । ತನ್ನ ।
ಗಟ್ಟಿತನದಲಿ ಮಾರು ಮಲೆತವಳ ॥
ಹುಟ್ಟು ಹುಟ್ಟಲಿ ।
ಬಾಯೊಳು ಹೆಕ್ಕಬೇಕವಳ ॥3॥

ನಲ್ಲರ ಕಂಡು ನಗುವವಳ । ತನ್ನ ।
ಬಲ್ಲಿದ ಗಂಡನ ಬೈದು ಕರೆವಳ ॥
ಮಲ್ಲರಂದದಿ ಹೋರುವವಳ । ಅವಳ ।
ಹಲ್ಲು ಮುರಿದು ಜಿಹ್ವೆ ಸೀಳಬೇಕವಳ ॥4॥

ಎಂದೂ ಈ ಪರಿಯಲ್ಲಿರುವಳ । ಅವಳ ।
ಅಂದಮಾಡುವದೇಕೆ ಬಿಡಬೇಕಿನ್ನವಳ ॥
ಒಂದಿಷ್ಟು ಗುಣವಿಲ್ಲದವಳ । ಶ್ರೀಪು ।
ರಂದರ ವಿಠಲರಾಯಗಲ್ಲದವಳ ॥5॥

ಇಂತಹ ಕೀರ್ತನೆಯನ್ನು ಬರೆದಿರುವ ದಾಸರು ಸರಸ್ವತಿದೇವಿ ಯನ್ನು ಎಷ್ಟು ಸೊಗಸಾಗಿ, ನವುರಾಗಿ ಬಣ್ಣಿಸಿದ್ದಾರೆ ನೋಡಿ:

"ನಲಿದಾಡೆ ಎನ್ನ ನಾಲಿಗೆ ಮೇಲೆ ಸರಸ್ವತಿದೇವಿ ।
ಕುಣಿದಾಡೆ ಎನ್ನ ನಾಲಿಗೆ ಮೇಲೆ ॥ಪ॥


ಸಲಿಲಜೋದ್ಭವನ ವದನನಿಲಯಳೆ ।
ಇಳೆಯೊಳಪ್ರತಿಮ ಗುಣಗಣಾಂಬುಧಿ ತಾಯೆ ॥ಅ॥

ಘಲು ಘಲು ಘಲು ಗೆಜ್ಜೆಯ ನಾದ ।
ಭಳಿಭಳಿರೆ ನಿಮ್ಮ ಹೊಳೆವ ಬೆರಳುಂಗುರ ಕಿಣಿಕಿಣಿನಾದ।
ಎಳೆಯ ಮಾವಿನ ತಳಿರ ಪೋಲುವ ದಿವ್ಯಪಾದ ॥
ಶೃಂಗಾರವಾದ ಜಡೆ ಬಂಗಾರ । ಹೊಂಗ್ಯಾದಿಗೆ ಮುಡಿದ।

ಬಂಗಾರದ ಹೆರಳಿನ ರಾಕಟೆ ವರ ।
ಭೃಂಗದ ಸ್ವರ ಹಿಂಗದೆ ಭಕ್ತರ ಸಲಹುವ ಭಾರ ।
ಕಂಗಳ ಮನೋಹರ ॥
ರಂಗ ಪುರಂದರ ವಿಠಲರಾಯನ ।
ಮಂಗಳ ಮೂರ್ತಿಯ ತೋರೆ ಶುಭಾಂಗಿ" ॥5॥

ಇಂತಹ ಮಂಗಳ ಮೂರ್ತಿಯನ್ನು ವರ್ಣಿಸಿದ ಪುರಂದರ ದಾಸರು, ಭಾಗ್ಯದ ಲಕ್ಷ್ಮಿ ಬಾರಮ್ಮ ಎಂದು ಮೃದುವಾಗಿ ಕರೆದ ದಾಸರು, ಜಗತ್ತಿನ ಉಳಿದ ಹೆಣ್ಣುಮಕ್ಕಳ ಬಗ್ಗೆ ಅಶ್ರದ್ಧೆ ತೋರಿದರೆಂದರೆ ನಂಬುವುದು ಸ್ವಲ್ಪ ಕಷ್ಟವೆ. ಅವರ ಕೀರ್ತನೆಗಳನ್ನು ಒಟ್ಟಿಗೆ ನೋಡಿದಾಗ, ಹೆಣ್ಣುಮಕ್ಕಳು, ಹೆಂಡತಿ ಇವರ ಬಗ್ಗೆ ಸಹಾನುಭೂತಿಯನ್ನು ತೋರದೆ ಬರೆದಿರುವ ಮಾತುಗಳು ದಾಸರ ಹೆಸರಿನಲ್ಲಿ ಸ್ತ್ರೀದ್ವೇಷಿಗಳು ತಾವೇ ಬರೆದು ಸೇರಿಸಿರುವ ಕೀರ್ತನೆಗಳೇನೋ ಎನಿಸುತ್ತವೆ.

"ಜೀವನ" ಪತ್ರಿಕೆಯ ಲೇಖನ
ಜನವರಿ 1964



ತುಳಿತಕ್ಕೊಳಗಾದ ಮಹಿಳೆಯರ ಸ್ಥಿತಿಗೆ ಕನ್ನಡಿ ಹಿಡಿದ 'ವನಿತಾ ಚಿಂತನಮಾಲೆ'

● ಡಾ. ಚಂದ್ರಮತಿ ಸೋಂದಾ

ಪುಸ್ತಕ ಪ್ರಕಟಣೆಯಲ್ಲಿ ಸಾಮಾಜಿಕ ಬದ್ಧತೆಯನ್ನು ಒಳಗೊಳ್ಳುವ ನವಕರ್ನಾಟಕ ಪ್ರಕಾಶನ ಸಂಸ್ಥೆ ತನ್ನ ಐವತ್ತರ ಸಂಭ್ರಮಕ್ಕಾಗಿ ಹಾಕಿಕೊಂಡ ಯೋಜನೆಗಳಲ್ಲಿ 'ವನಿತಾ ಚಿಂತನ ಮಾಲೆ'ಯೂ ಒಂದು. ಈ ಮಾಲಿಕೆಯಲ್ಲಿ ಮೊದಲ ಕಂತು ಹತ್ತು ಪುಸ್ತಕಗಳು. ಮಹಿಳಾ ಲೋಕದ ಆತ್ಮಕಥನ, ಜೀವನಕಥನ, ಹೆಣ್ಣು ಬದುಕಿನ ಸಂಕಟಗಳ ಕೊಂಡ ಹಾಯ್ದು ಎದ್ದು ಬಂದ ಬಗೆಯನ್ನು ವಿವರಿಸುವ ಕೃತಿಗಳು. ಕೈಗೆಟುಕುವ ಬೆಲೆಯಲ್ಲಿ, ಸುಂದರವಾಗಿ ಮುದ್ರಿತವಾಗಿರುವ ಈ ಪುಸ್ತಕಗಳು ಮಹಿಳಾಲೋಕಕ್ಕೆ ಸಂಸ್ಥೆಯಿತ್ತ ವಿಶೇಷ ಕೊಡುಗೆ. 'ನಮ್ಮ ಮಾನಸ'ದ ಓದುಗರಿಗಾಗಿ ಆ ಪುಸ್ತಕಗಳ ಪರಿಚಯ ಇಲ್ಲಿದೆ.

ಮನಕಲಕುವ ಸತ್ಯಕಥೆಗಳು

"ಈ ದೇಶದ ಶೇಕಡ 70 ರಿಂದ 80ರಷ್ಟು ಸ್ತ್ರೀಯರು ಅನುಭವಿಸುತ್ತಿರುವ ನಿರಂತರ ಕಿರುಕುಳವನ್ನು ನಾವು ಸರ್ವೇಸಾಮಾನ್ಯವೆಂದು ಪರಿಗಣಿಸಿ ನೆಮ್ಮದಿಯಿಂದ ಇರಬಲ್ಲೆವು. ಇದಕ್ಕಿಂತ ಹೆಚ್ಚಿನ ದುರಂತ ಯಾವುದಿದೆ? ಅದೇ ಪುರುಷರ ಸಮಸ್ಯೆ ಎಷ್ಟೇ ಕ್ಷುಲ್ಲಕವಾದರು ಆದ್ಯತೆಯನ್ನು ಪಡೆಯುತ್ತದೆ" (ಒಂದು ಕಿರುನುಡಿ ಪು.4) ಎಂದಿರುವ ಜಿ.ಎಸ್. ಜಯದೇವ ಅವರ ಅಭಿಪ್ರಾಯ **'ಶಕ್ತಿಧಾಮದ ಸತ್ಯ ಕಥೆಗಳು'** ಓದಿದ ಮೇಲೆ ಬಹಳ ಸಂಗತವೆನಿಸುತ್ತದೆ. ಇಲ್ಲಿ ಚಿತ್ರಿತವಾಗಿರುವ ಜಕಿಯಾ, ಆಶಾ, ಲಲಿತ, ಬೆಳ್ಳಿ, ಕವಿತ ಮತ್ತು ಶ್ವೇತ ಎಲ್ಲರೂ ಪರಿಸ್ಥಿತಿಯ ಕೈಗೊಂಬೆಗಳಾಗಿ ಬದುಕನ್ನು ಕಳೆದುಕೊಂಡು ಮಹಿಳಾ ಪುನರ್ವಸತಿ ಕೇಂದ್ರ ಶಕ್ತಿಧಾಮದ ಆಶ್ರಯ ಪಡೆದವರು. ಇವರಲ್ಲಿ ಯಾರೂ ಅಪರಾಧಿಗಳಲ್ಲ. ಮನುಷ್ಯ ಸಹಜವೆನಿಸುವ ಚಿಕ್ಕ ಪುಟ್ಟ ತಪ್ಪು ಇವರಿಂದಲೂ ಘಟಿಸಿದೆ ಅಷ್ಟೇ. ಆದರೆ ಅದರ ಪರಿಣಾಮ ಮಾತ್ರ ಊಹೆಗೂ ನಿಲುಕದ್ದು.

ಜಕಿಯಾ ಅತ್ಯಂತ ಸೂಕ್ಷ್ಮ ಮನಸ್ಸಿನ ಹುಡುಗಿ. ಈ ಸೂಕ್ಷ್ಮತೆಯೇ ಅವಳ ಬದುಕನ್ನು ಆಪೋಶನ ತೆಗೆದುಕೊಳ್ಳಲು ಕಾರಣವಾಗುತ್ತದೆ. ಅಪ್ಪನ ಪ್ರೀತಿಯ ಮಗಳಾಗಿದ್ದ ಜಕಿಯಾಳನ್ನು ಫಯಾಜ್ ಎನ್ನುವ ತಿಳಿಗೇಡಿಯೊಬ್ಬ ಅಪಹರಿಸುವುದರಿಂದ ಅವಳ ಬದುಕು ಅತಂತ್ರವಾಗುತ್ತದೆ. ಫಯಾಜ್ ವಿಚಿತ್ರ ವ್ಯಕ್ತಿ. ಅವಳನ್ನು ಬಲಾತ್ಕಾರದಿಂದ ಕರೆದೊಯ್ದರೂ ಅವಳ ಮೇಲೆ ಅತ್ಯಾಚಾರ ಮಾಡುವುದಿಲ್ಲ. ಆದರೆ ಪೊಲೀಸರಾಗಲಿ ಸಮಾಜವಾಗಲಿ ಇದನ್ನು ನಂಬುವುದಿಲ್ಲ. ಕಳ್ಳತನದ ಕೇಸಿನಲ್ಲಿ ಅವನನ್ನು ಹಿಡಿಯಲು ಸಾಧ್ಯವಾಗದಿದ್ದ ಪೊಲೀಸರಿಗೆ ಜಕಿಯಾ ಘಟನೆಯಲ್ಲಿ ಅವಳ ಮೇಲೆ ಆತ ಅತ್ಯಾಚಾರ ಮಾಡಿದ್ದಾನೆಂದು ಕೇಸು ಹಾಕಿ ಜೈಲಿಗೆ ತಳ್ಳುವ ಉತ್ಸಾಹ. ಇದು ಜಕಿಯಾಳ ಮನಸ್ಸಿನ ಮೇಲೆ ಯಾವ ಪರಿಣಾಮ ಬೀರುತ್ತದೆ ಎನ್ನುವುದು ಅವರಿಗೆ ಅಪ್ರಸ್ತುತ. ಫಯಾಜನ ಮನೆಯಲ್ಲಿ ಅವನ ಹೆಂಡತಿ ಮಕ್ಕಳ ಸ್ಥಿತಿಯನ್ನು ಕಣ್ಣಾರೆ ಕಂಡ ಜಕಿಯಾಳಿಗೆ ಅವನನ್ನು ಸಿಕ್ಕಿಸಿ ಜೈಲಿಗೆ ತಳ್ಳಿದರೆ ಅವನ ಕುಟುಂಬ ಅನಾಥವಾಗುತ್ತದೆ ಎನಿಸುವುದರಿಂದ ಅವಳು ಕೋರ್ಟಿನಲ್ಲಿ ಪೊಲೀಸರ ಯೋಜನೆಗೆ ವಿರುದ್ಧವಾಗಿ ತಾನೇ ಅವನೊಂದಿಗೆ ಹೋಗಿದ್ದುದಾಗಿ ಹೇಳುತ್ತಾಳೆ. ಇದರಿಂದ ಅವಳು ಪೊಲೀಸರ, ಮನೆಯವರ ಮತ್ತು ಸಮಾಜದ ದೃಷ್ಟಿಯಲ್ಲಿ ತಪ್ಪಿತಸ್ಥೆ. ಅಂತಃಸಾಕ್ಷಿಯಂತೆ ನುಡಿದರೂ ಆನಂತರ ಅವಳಿಗೆ ಗೊಂದಲವಾಗಿ ಹುಚ್ಚುಹುಚ್ಚಾಗಿ ಉತ್ತರಿಸಲು ಪ್ರಾರಂಭಿಸುವುದರಿಂದ ತಂದೆ ಅವಳ ಕಿರಿಕಿರಿ ತಪ್ಪಿಸಿಕೊಳ್ಳಲು ಮಗಳನ್ನು ಶಕ್ತಿಧಾಮಕ್ಕೆ ಸೇರಿಸುತ್ತಾರೆ. "ಇವಳು ಹೀಗಾಗ್ತಾಳೆ ಎಂದು ಮೊದಲೇ ಗೊತ್ತಿದ್ದರೆ ನಾನು ಇವಳಿಗೆ ವಿಷ ಕೊಡ್ತಿದ್ದೆ ಸ್ವಾಮಿ" ಎನ್ನುತ್ತಾರೆ. ಪ್ರೀತಿಯ ಮಗಳ ಬಗ್ಗೆ ಹೆತ್ತ ತಂದೆಯೇ ಹೀಗೆ ಹೇಳಿದರೆ ಅವಳು ಬದುಕುವುದೆಲ್ಲಿ?

ಆಶಾ ಮಾಡಿದ ತಪ್ಪಾದರೂ ಏನು? ಮನೆಯವರು ನೋಡಿದ್ದ ಸಂಬಂಧಕ್ಕೆ ಬದಲು ತನಗೆ ಇಷ್ಟವಾದವನನ್ನು ಮದುವೆಯಾಗಿದ್ದು. ಅದೇ ಅವಳ ಬದುಕಿನ ದುರಂತಕ್ಕೆ ಮುನ್ನುಡಿಯಾಗುತ್ತದೆ. ಅವಳ ತಂದೆ ಆಶಾಳ ತಾಯಿಯನ್ನು ಬಿಟ್ಟು ಮತ್ತೊಬ್ಬ ಹೆಂಗಸನ್ನು ಕಟ್ಟಿಕೊಂಡುದರಿಂದ ಮಕ್ಕಳು ತಂದೆಯ ಪ್ರೀತಿಗೆ ಎರವಾಗುತ್ತಾರೆ. ಪ್ರಾಯಶಃ ಅವಳಿಗೆ ಆ ಮನೆಯಲ್ಲಿ ಸಿಗದ ಪ್ರೀತಿಗಾಗಿ ಅವಳು ಸೋಮುವನ್ನು ಪ್ರೀತಿಸಿ ಅವನೊಂದಿಗೆ ಗುಟ್ಟಾಗಿ ಮದುವೆಯಾಗಿ ಅವನ ಮನೆಗೆ ಬಂದ ಮೇಲೆ ಅವಳಿಗೆ ತಿಳಿಯುತ್ತದೆ, ಅವನು ತಾಯಿಯ ಮಾತನ್ನು ಮೀರಲಾರದ ಮಗ ಎಂದು. ಮಗ ತನ್ನ ತಾಳಕ್ಕೆ ಕುಣಿಯಬೇಕೆಂದು ಬಯಸುವ ಆಶಾಳ ಅತ್ತೆ ಅವಳ ಬದುಕಿನಲ್ಲಿ ಮತ್ತೆ ಮತ್ತೆ ಖಳನಾಯಕಿಯಾಗಿ ಬಂದು ಆಶಾಳ ಬದುಕು ದುರ್ಭರಗೊಳ್ಳಲು ಕಾರಣವಾಗುತ್ತಾಳೆ. ಕುಡಿದ ಅಮಲಿನಲ್ಲಿ ಸೋಮುವೇ ಮಗುವನ್ನು ಗೋಡೆಗೆ ಬಡಿದು, ಮಗು ಸಾವಿಗೀಡಾದರೂ ಕೊಲೆಯ ಆಪಾದನೆ ಸೊಸೆಯ ಮೇಲೆ ಬರುವಂತೆ ಮಾಡಿ ಆಶಾಳನ್ನು ಜೈಲಿಗೆ ತಳ್ಳುವ ಅತ್ತೆ ತನ್ನ ಮಗನ ವಿಷಯದಲ್ಲಿ ನಿಜವಾದ 'ತಾಯಿ'ಯೇ. ತನ್ನ ತಪ್ಪಿಲ್ಲದೆ ಆಶಾ ಜೈಲಿಗೆ ಹೋಗುವ ಪರಿಸ್ಥಿತಿಯ ಹುನ್ನಾರದಿಂದ ಅವಳ ಮನಸ್ಸು ಕಠಿಣವಾಗುತ್ತದೆ. ಮಾನವ ಸಂಬಂಧದಲ್ಲಿ ನಂಬಿಕೆಯನ್ನು ಕಳೆದುಕೊಳ್ಳುವ ಆಶಾ ಜೈಲಿನ ಬದುಕನ್ನೇ ಒಪ್ಪಿಕೊಳ್ಳುವ ಹಂತ ತಲುಪುವುದಕ್ಕೆ ಮನಸ್ಸು ಮರುಗುತ್ತದೆ. ಆಕೆ ಧೈರ್ಯವಂತೆಯೇ. ಗಂಡನ ತಪ್ಪಿಗಾಗಿ ಕೇರಳದ ಕುಟ್ಟಿ ಮೂರು ತಿಂಗಳ ಮಗುವನ್ನು ಕರೆದೊಯ್ದಾಗ ಅವಳೊಬ್ಬಳೇ ಕೇರಳಕ್ಕೆ ಹೋಗಿ ಮಗುವನ್ನು ಕರೆತರುತ್ತಾಳೆ. ಆದರೆ ಅವಳ ಬದುಕಿನಲ್ಲಿ ಮತ್ತೆ ಮತ್ತೆ ಘಟಿಸುವ ದುರಂತ ಅವಳನ್ನು ಅಸಹಾಯಕ ಸ್ಥಿತಿಗೆ ತಳ್ಳುತ್ತದೆ.


ಲಲಿತ ಮೂಕಿ, ಜೊತೆಗೆ ಸುಂದರಿ. ತಂದೆಯ ಸಾವಿನನಂತರ ಆಸ್ತಿಯಲ್ಲಿ ಅವಳಿಗೆ ಪಾಲುಕೊಡುವುದನ್ನು ತಪ್ಪಿಸಿಕೊಳ್ಳಲು ಅವಳ ಅಣ್ಣಂದಿರು ಉಪಾಯವಾಗಿ ಲಲಿತಳನ್ನು ಶಕ್ತಿಧಾಮಕ್ಕೆ ದೂಡಿದ ಕ್ರೌರ್ಯ ಬೆಚ್ಚಿ ಬೀಳುವಂಥದು. ಶಕ್ತಿಧಾಮದ ಕಟ್ಟುಪಾಡು ಒಗ್ಗದ ಆಕೆ ಅಲ್ಲಿಂದ ತಪ್ಪಿಸಿಕೊಂಡು ಹೊರ ಪ್ರಪಂಚಕ್ಕೆ ಕಾಲಿಟ್ಟಾಗ ಕಾಮುಕರ ಕೈಗೆ ಸಿಕ್ಕು ಸಾಮೂಹಿಕ ಅತ್ಯಾಚಾರಕ್ಕೆ ಬಲಿಯಾಗುವ ಸಂಗತಿ ಕರುಳನ್ನು ಕಿವಿಚುತ್ತದೆ. ಹೇಗೋ ಅವಳ ಮನೆಯವರನ್ನು ಪತ್ತೆಹಚ್ಚಿ ಅವಳನ್ನು ಊರಿಗೆ ಕಳಿಸುವುದು ಸಮಾಧಾನಕರ ಎನಿಸಿದರೂ, ಅವಳ ಅಣ್ಣಂದಿರು ಸುಮ್ಮನಿರದೆ ಡಿ.ಸಿ. ಮೂಲಕ ಶಕ್ತಿಧಾಮದ ಮೇಲೇ ಗೂಬೆ ಕೂರಿಸಲು ಪ್ರಯತ್ನಿಸುವುದು ಅಸಹ್ಯ ಹುಟ್ಟಿಸುತ್ತದೆ. ಒಡಹುಟ್ಟಿದವರಿಗೆ ಮನೆಯ ಮಗಳನ್ನು ಮನೆಯಿಂದ ಆಚೆ ತಳ್ಳಿದ್ದು ತಪ್ಪು ಅನಿಸುವುದೇ ಇಲ್ಲ. ಅರ್ಚಕ ವೃತ್ತಿಯಿಂದ ಬದುಕುವ ಆ ಕುಟುಂಬಕ್ಕೆ ದೇವರು, ಪೂಜೆ ಎಲ್ಲ ಹೊಟ್ಟೆಪಾಡಿಗೆ ಮಾತ್ರ. 'ಮಾಡೋದು ಅನಾಚಾರ ಮನೆ ಮುಂದೆ ಬೃಂದಾವನ' ಎನ್ನುವಂಥ ಗಾದೆ ಇಂಥವರಿಂದಲೇ ಹುಟ್ಟಿರಬೇಕು ಎನಿಸುತ್ತದೆ.

ಬೆಳ್ಳಿ ಮಾಡದ ತಪ್ಪಿಗಾಗಿ ಜೈಲು ಸೇರಿದವಳು. ಬೆಳ್ಳಿಯ ಅಪ್ಪ ಮಗಳನ್ನು ಸುಬ್ರಹ್ಮಣ್ಣಿಗೆ ತಾನೇ ಮದುವೆ ಮಾಡಿಕೊಟ್ಟಿದ್ದರೂ ಅಳಿಯ ಸಾರಾಯಿ ವ್ಯಾಪಾರ ಪ್ರಾರಂಭಿಸಿದಾಗ ತನಗೆ ಅವಮಾನವಾಯಿತೆಂದು ಮಗಳನ್ನು ಅಲ್ಲಿಂದ ಎಳೆದುತಂದು ಅವಳ ಇಚ್ಛೆಗೆ ವಿರುದ್ಧವಾಗಿ ಇನ್ನೊಂದು ಮದುವೆ ಮಾಡುತ್ತಾನೆ. ಬೆಳ್ಳಿ ಅಪ್ಪನಿಗೆ ತಿಳಿಯದಂತೆ ಅಲ್ಲಿಂದ ತಪ್ಪಿಸಿಕೊಂಡು ಸುಬ್ರಹ್ಮಣ್ಣಿ ಇರುವಲ್ಲಿಗೆ ಹೋಗುತ್ತಾಳೆ. ಆದರೆ ವೀರಪ್ಪನ್‌ಗೆ ಆಹಾರ ಸರಬರಾಜು ಮಾಡಿ ದಿಢೀರನೆ ಶ್ರೀಮಂತನಾಗ ಹೊರಟ ಗಂಡನ ತಪ್ಪಿಗೆ ಬೆಳ್ಳಿಯ ಬದುಕು ನಾಶವಾಗುತ್ತದೆ. ಪೊಲೀಸರ ಗುಂಡಿಗೆ ಗಂಡ ಬಲಿಯಾದರೆ, ತಪ್ಪಿಲ್ಲದಿದ್ದರೂ ಪೊಲೀಸರ ದೃಷ್ಟಿಯಲ್ಲಿ ಬೆಳ್ಳಿಯೂ ಅಪರಾಧಿಯೇ. ಟಾಡಾ ಕಾಯ್ದೆಯಡಿ ಬಂಧಿತಳಾದ ಆಕೆ 10 ವರ್ಷಗಳಷ್ಟು ದೀರ್ಘಕಾಲ ಜೈಲು ಶಿಕ್ಷೆ ಅನುಭವಿಸಿ ಬಿಡುಗಡೆ ಗೊಂಡು ತವರಿಗೆ ಬಂದವಳು, ಅವಳ ಗಂಡ ಸಂಪಾದಿಸಿದ್ದ ಹಣ ಒಡವೆಗಳ ಆಧಾರದಿಂದ ಚಿಕ್ಕದಾಗಿ ಅಂಗಡಿ ತೆರೆದು ಬದುಕನ್ನು ಕಂಡುಕೊಳ್ಳಲು ಪ್ರಯತ್ನಿಸಿದಳು. ಅಪ್ಪ, ಮಗಳ ಪರಿಸ್ಥಿತಿಯ ಲಾಭ ಪಡೆಯಲು ನೋಡುತ್ತಾನೆಯೇ ವಿನಾ ಅವಳು ಎಷ್ಟು ನೊಂದಿದ್ದಾಳೆ ಎಂದಲ್ಲ. ತವರು ಅವಳನ್ನು ಅಸ್ಪೃಶ್ಯಳಂತೆ ನಡೆಸಿಕೊಂಡಿತು. ಇದರಿಂದ ಬೇಸತ್ತು ಮನೆಯಲ್ಲಿ ಗಲಾಟೆ ಮಾಡಿ ಅವಳು ಸೇರಿದ್ದು ಶಕ್ತಿಧಾಮಕ್ಕೆ. ಮಗನ ನೆನಪಾಗಿ ಮತ್ತೆ ತವರಿಗೆ ಹೋಗುವ ಅವಳು ಏನಾದಳೋ?

ಕವಿತಳ ಬದುಕು ಮಕ್ಕಳು, ಸಂಬಂಧ ಎನ್ನುವ ಯಾವ ಕಕ್ಕುಲಾತಿಯೂ ಇಲ್ಲದ ಹೆತ್ತವರ ಬೇಜವಾಬ್ದಾರಿತನಕ್ಕೆ ಬಲಿಯಾದುದು. ಗಂಡನ ಹೊಡೆತ ತಾಳಲಾರದೆ ಉಳಿದ ನಾಲ್ಕು ಮಕ್ಕಳನ್ನು ಕಟ್ಟಿಕೊಂಡು ಮನೆಯಿಂದ ತಾಯಿ ಹೊರನಡೆದರೆ, ಇವಳನ್ನು ಸಂಭಾಳಿಸಲಾರದೆ ಕೈಗೆ 15 ರೂಪಾಯಿ ಕೊಟ್ಟು 'ಎಲ್ಲಾದರೂ ಹೋಗು' ಎಂದ ತಂದೆ ಎನಿಸಿಕೊಂಡ ಭೂಪ. ಅನಾಥ ಮಗುವನ್ನು ಮಗಳಂತೆ ಸಾಕಿದವನು ಎಳನೀರು ರಂಗ. ಕವಿತಳನ್ನು ಕಂಡರೆ ಕೋಪಗೊಳ್ಳುವ ಅವನ ಹೆಂಡತಿ ನೀಲಮ್ಮ ರಂಗ ಪರ ಊರಿಗೆ ಹೋದಾಗ ಅವಳನ್ನು ಬೈದು ಮನೆಯಿಂದ ಹೊರಹೋಗುವಂತೆ ಮಾಡುತ್ತಾಳೆ. ಆಶ್ರಯ ತಪ್ಪಿದರೂ ಕವಿತಾ ಕಂಗಾಲಾಗದೆ ಮೈಸೂರಿಗೆ ಬಂದು ಯಾರದೋ ಮನೆಯಲ್ಲಿ ಅಡಿಗೆ ಮಾಡಿ ಆಶ್ರಯ ಪಡೆಯುವ ಧೈರ್ಯ ಮೆಚ್ಚಬೇಕಾದ್ದೇ. ಆ ನೆಲೆಯೂ ತಪ್ಪಿ ಸರ್ಕಾರಿ ಬಾಲಕಿಯರ ಮಂದಿರ ಸೇರುತ್ತಾಳೆ. ಮುಂದೆ ಅವಳಿಗೆ ಗಾರ್ಮೆಂಟ್ ಕಾರ್ಖಾನೆಯಲ್ಲಿ ಕೆಲಸವೇನೋ ದೊರಕಿತು. ಅಲ್ಲಿ ಮುರುಗನ ಪರಿಚಯವಾಗಿ ಅವನನ್ನು ಮದುವೆಯಾಗುವ ಅವಳಿಗೆ, ಆತ ತಾಯಿಯ ಮಾತನ್ನು ಕೇಳಿ ತನಗೂ ತಿಳಿಸದೆ ಅವರೆಲ್ಲರೊಂದಿಗೆ ಊರು ಬಿಟ್ಟು ಹೋದಾಗ ಆಗುವ ಆಘಾತದಿಂದ ಮಂಕು ಕವಿಯುತ್ತದೆ. ಗರ್ಭಿಣಿಯೂ ಆಗಿರುವ ಅವಳ ಸ್ಥಿತಿಯನ್ನು ನೋಡಲಾರದೆ ಯಾರೋ ಅವಳನ್ನು ಶಕ್ತಿಧಾಮಕ್ಕೆ ಕರೆತರುತ್ತಾರೆ. ಕವಿತಳ ಬದುಕಿನಲ್ಲಿ ಅವಳಿಗೆ ಸಿಗುವ ಪ್ರತಿಯೊಬ್ಬರೂ ನಂಬಿಕೆಗೆ ದ್ರೋಹ ಬಗೆಯುವವರೇ.

ಶ್ವೇತಳ ಬದುಕಿನಲ್ಲಿ ಅಪ್ಪ ಅಮ್ಮನ ಜಗಳದಲ್ಲಿ ಕೂಸು ಬಡವಾಯಿತು ಎನ್ನುವ ಗಾದೆ ಮಾತು ಅಕ್ಷರಶಃ ಸತ್ಯ. ಮನೆಯಲ್ಲಿ ಪ್ರತಿದಿನ ಕದನ ನಡೆಯುತ್ತಿದ್ದರೂ ಶ್ವೇತ ಎಸ್.ಎಸ್.ಎಲ್.ಸಿ ಮುಗಿಸಿ ಕಾಲೇಜು ಸೇರಿದ್ದಳು. ಜಗಳ ಅತಿಯಾಗಿ ಅಪ್ಪನ ಆತ್ಮಹತ್ಯೆಯಲ್ಲಿ ಕೊನೆಗೊಂಡಿತ್ತು. ತಾಯಿಗೆ ಮಗಳ ಬಗ್ಗೆ ಪ್ರೀತಿ ಇಲ್ಲದುದರಿಂದ ಅವಳು ಅನಾಥಪ್ರಜ್ಞೆಯಿಂದ ನರಳುವಂತಾಯಿತು. ಕಾಲೇಜಿಗೆ ಬರುತ್ತಿದ್ದ ಶಶಿಕಲಾ ಅವಳನ್ನು 'ದಂಧೆ'ಗೆ ತಳ್ಳಲು ಮುಂದಾದಳು. ಅವಳನ್ನು ಅದರಿಂದ ಪಾರು ಮಾಡುವ ಅಭಿಷೇಕನು ಸಂಪನ್ನನೇನಲ್ಲ. ಅವನೂ 'ದಂಧೆ'ಯಲ್ಲಿ ತೊಡಗಿರುವ ವಿಷಯ ತಿಳಿದರೂ ಶ್ವೇತಳಿಗೆ ಅವನ ಮೇಲೆ ಅಭಿಮಾನ. ನಿಧಾನವಾಗಿ ಅದರ ಸುಳಿಯಲ್ಲಿ ಸಿಗುತ್ತಾಳೆ. ಪೊಲೀಸರು ದಾಳಿ ಮಾಡಿದಾಗ ಅವಳೊಂದಿಗೆ ಮಗುವಿರುವ ಕಾರಣದಿಂದ ಶಕ್ತಿಧಾಮ ಸೇರುತ್ತಾಳೆ. ಶಕಿಧಾಮದ ಸಿಬ್ಬಂದಿವರ್ಗ ಅವಳನ್ನು ನೇರ ಬದುಕಿಗೆ ತರಲು ಪ್ರಯತ್ನಿಸಿದರೂ ತಪ್ಪಿಸಿಕೊಳ್ಳುತ್ತಾಳೆ. ಅಭಿಷೇಕ್ ಜೈಲಿನಿಂದ ಬಿಡುಗಡೆಯಾಗಿ ಬಂದ ಮೇಲೆ ಲಕ್ವ ಹೊಡೆದಿರುವ ಆತನ ಸೇವೆ ಮಾಡುತ್ತ ಆ ಮಗುವಿನೊಂದಿಗೆ ಬದುಕುತ್ತಿರುವ ಸಂಗತಿ ಚೋದ್ಯವೆನಿಸುತ್ತದೆ. ಮನುಷ್ಯನ ನಂಬಿಕೆ ಮತ್ತು ಸಂಬಂಧಗಳನ್ನು ಇದು ಹೀಗೇ ಎಂದು ವ್ಯಾಖ್ಯಾನಿಸಲು ಸಾಧ್ಯವಿಲ್ಲ.

ಶಕ್ತಿಧಾಮದ ಸತ್ಯಕಥೆಗಳಲ್ಲಿನ ಹೆಣ್ಣುಮಕ್ಕಳು ಯಾರೂ ತಾವಾಗಿ ಕಷ್ಟಪರಂಪರೆಗಳನ್ನು ಎಳೆದುಕೊಂಡವರಲ್ಲ. ಹೆಣ್ಣಿನ ಬಗೆಗಿನ ಸಮಾಜದ ತಾರತಮ್ಯ ಅವರ ಬದುಕನ್ನು ಹೊಸಕಿ ಹಾಕುತ್ತದೆ. ಎಲ್ಲರಂತೆ ಈ ಹೆಣ್ಣುಮಕ್ಕಳೂ ಬದುಕಿನ ಬಗ್ಗೆ ಕನಸನ್ನು ಕಟ್ಟಿಕೊಂಡವರೇ. ಬದಲಾಗುತ್ತಿರುವ ಸಾಮಾಜಿಕ ಸಂದರ್ಭದಲ್ಲಿ ಮಹಿಳೆಗೆ ಸಾಕಷ್ಟು ಅವಕಾಶ, ಅನುಕೂಲಗಳು ಸಿಗುತ್ತಿವೆ ಎಂದು ನಾವು ಭ್ರಮಿಸುತ್ತೇವೆ. ಆದರೆ ವಾಸ್ತವ ಹಾಗಿಲ್ಲ ಎನ್ನುವುದಕ್ಕೆ ಈ ಕಥೆಗಳು ಸ್ಯಾಂಪಲ್‌ಗಳಷ್ಟೆ. ಕೆಳವರ್ಗದ ಮಹಿಳೆಯರ ಬದುಕು ಬಡತನ, ಅಜ್ಞಾನ, ಅಸಹಾಯಕತೆಗಳಿಂದಾಗಿ ದೌರ್ಜನ್ಯಕ್ಕೆ ಒಳಗಾಗುತ್ತಲೇ ಇದೆ. ಶಕ್ತಿಧಾಮ ಅದರ ಮಿತಿಯಲ್ಲಿ ಹಲವರಿಗೆ ಸಾಂತ್ವನ ಹೇಳುವ ಮೂಲಕ ಅವರು ಬದುಕಿನ ಬಗ್ಗೆ ಆಸಕ್ತಿ ತಾಳಲು, ಬದುಕನ್ನು ಕಟ್ಟಿಕೊಳ್ಳಲು ಸಹಕರಿಸುತ್ತಿದೆ; ಅವರಲ್ಲಿ ನಂಬಿಕೆಯನ್ನು ಬಿತ್ತಲು ಪ್ರಯತ್ನಿಸುತ್ತಿದೆ. 'ನಿಮ್ಮ ನೆಮ್ಮದಿಯನ್ನು




ಶಕ್ತಿಧಾಮದ ಸತ್ಯಕಥೆಗಳು (2009)
ಲೇ : ಜಿ.ಎಸ್. ಜಯದೇವ
ಪುಟ : 112
ಬೆಲೆ : ರೂ. 65/-
ಪ್ರ : ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿ., ಬೆಂಗಳೂರು

ಕಲಕುವುದು ನಮ್ಮ ಉದ್ದೇಶ. ಏಕೆಂದರೆ ಈ ಕಟು ವಾಸ್ತವತೆಯ ನಡುವೆ ನೀವು ನೆಮ್ಮದಿಯಿಂದ ಇರುವುದಾದರೆ ಅದಕ್ಕಿಂತ ದೊಡ್ಡ ಪಾಪ ಮತ್ತೊಂದಿಲ್ಲ' ಎಂದಿರುವ ಲೇಖಕರ ಉದ್ದೇಶ ಸಾರ್ಥಕವಾಗಿದೆ. ಇಲ್ಲಿನ ಹೆಣ್ಣುಮಕ್ಕಳ ಬದುಕಿನ ಸಂಕಷ್ಟಗಳು ನಮ್ಮ ಮನಸ್ಸನ್ನು ಕಲಕುತ್ತವೆ. ನಮ್ಮನ್ನು ಯೋಚನೆಗೆ ಹಚ್ಚುತ್ತವೆ. ಪ್ರಾಯಶಃ ಒಂದು ಕೃತಿಯ ಸಾರ್ಥಕ್ಯ ಇರುವುದೇ ಇದರಲ್ಲಿ ಎನಿಸುತ್ತದೆ.

ಪಲವಾರು ವರ್ಷಗಳಿಂದ ಶಕ್ತಿಧಾಮದಲ್ಲಿ ಕ್ರಿಯಾಶೀಲವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಜಯದೇವ ಅವರು ಅಲ್ಲಿಗೆ ಬರುತ್ತಿರುವ ಮಹಿಳೆಯರ ಅಸಹಾಯಕತೆಯನ್ನು ಕಾಣುತ್ತ ಬಂದವರು. ಹೀಗೆ ಕಂಡ ಕೆಲವು ಮಹಿಳೆಯರ ಪರಿಸ್ಥಿತಿಯನ್ನು ಸರಳವಾದ ಭಾಷೆಯಲ್ಲಿ ಹಿಡಿದಿಟ್ಟಿದ್ದಾರೆ. ಭಾವುಕತೆಗೆ ಒಳಗಾಗದೆ ತಮ್ಮ ಅನುಭವಕ್ಕೆ ಬಂದ ಸಂಗತಿಯನ್ನು ರಂಜಕತೆಗೆ ಎಡೆಯಾಗದಂತೆ ಚಿತ್ರಿಸಿರುವುದು ಸ್ವಾಗತಾರ್ಹ. ಅವರ ಬರವಣಿಗೆಯ ರೀತಿಯೇ ನಮ್ಮನ್ನು ಚಿಂತನೆಗೆ ಹಚ್ಚುತ್ತದೆ. ಈ ಪುಸ್ತಕವನ್ನು ಪ್ರಕಟಿಸುವ ಮೂಲಕ ನವಕರ್ನಾಟಕ ಪ್ರಕಾಶನ ತುಳಿತಕ್ಕೊಳಗಾದ ಮಹಿಳೆಯರ ಸ್ಥಿತಿಗೆ ಕನ್ನಡಿ ಹಿಡಿಯುತ್ತಿರುವುದು ಸ್ತುತ್ಯರ್ಹ.

ಮನಮಿಡಿಯುವ 'ಅಂತಿಮ ಜ್ವಾಲೆ'

"ಹೆಣ್ಣಿಗೆ ಅದೊಂದೇ ಮನೆ ಕಣಮ್ಮ! ಹೇಗಾದರೂ ಮಾಡಿ ನೀನು ನಿನ್ನ ಆಯುಷ್ಯವನ್ನು ಅಲ್ಲಿಯೇ ಕಳೆಯಬೇಕು. ಕಾಲ ಒಂದೇ ಸಮ ಇರುವುದಿಲ್ಲ. ಹೇಗೋ ಸ್ವಲ್ಪ ತಾಳಿಕೋ." (ಪು.13) **'ಅಂತಿಮ ಜ್ವಾಲೆ'** ಕಾದಂಬರಿಯ ನಾಯಕಿ ಗೋಮತಿಗೆ ಅವಳ ತಾಯಿ ಹೇಳುವ ಮಾತುಗಳಿವು. ನಮ್ಮ ದೇಶದಲ್ಲಿ ಯಾವ ತಾಯಿಯಾದರೂ ಮಗಳಿಗೆ ಇದಕ್ಕಿಂತ ಭಿನ್ನವಾಗಿ ಹೇಳುತ್ತಾಳೆ ಎಂದು ನಾವು ನಿರೀಕ್ಷಿಸುವಂತಿಲ್ಲ. ಲಾಗಾಯ್ತಿನಿಂದಲೂ ಬಡವ – ಬಲ್ಲಿದ ಎನ್ನುವ ಭೇದವಿಲ್ಲದೆ ಎಲ್ಲ ಮಹಿಳೆಯರೂ ಹೀಗೆಯೇ ನಡೆಯಬೇಕೆಂದು ಸಮಾಜ, ಕುಟುಂಬಗಳು



ಅಂತಿಮ ಜ್ವಾಲೆ ಕಾದಂಬರಿ (2009)
ಹಿಂದಿಮೂಲ: ಹಿಮಾಂಶು ಜೋಶಿ
ಅನು : ಕುಸುಮ ಗೀತ
ಪುಟ : 92
ಬೆಲೆ : ರೂ. 55/-
ಪ್ರ : ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿ., ಬೆಂಗಳೂರು

ಬಯಸುತ್ತ ಬಂದಿವೆ. ಇಂಥ ಉಪದೇಶಗಳನ್ನು ಕೇಳುತ್ತ, ಕೇಳುತ್ತ ಮಹಿಳೆ ಸ್ವಂತಿಕೆಯನ್ನು ಮರೆತಿದ್ದಾಳೆ. ಈ ಕೃತಿಯಲ್ಲಿನ ಗೋಮತಿ ನಮ್ಮ ದೇಶದ ಮಹಿಳೆಯರ ಪ್ರತಿನಿಧಿ. ಲೇಖಕ ಮುನ್ನುಡಿಯಲ್ಲಿ ಹೇಳುವಂತೆ "ಒಂದು ಹಳ್ಳಿಯ ಕಥೆ ಇದು. ಹಳ್ಳಿಯ ಹೆಸರು ಏನೇ ಆಗಿರಬಹುದು. ಪಾತ್ರಗಳನ್ನು ಯಾವುದೇ ಹೆಸರಿನಿಂದ ಕರೆಯಬಹುದು. ಇದರಿಂದ ಏನು ವ್ಯತ್ಯಾಸವಾದೀತು?"

ಅತ್ತೆ-ಮಾವ ಇಲ್ಲದ ಮನೆ, ರೋಗಿಷ್ಟ ಗಂಡ. ಹೇಗೋ ದುಡಿದು ಸಂಸಾರ ನಿಭಾಯಿಸೋಣವೆಂದರೆ ಕ್ರೂರಿಗಳಾದ ಗಂಡನ ಚಿಕ್ಕಪ್ಪ ಮತ್ತು ಅವನ ಮಗ. ದಿನವಿಡೀ ದುಡಿದರೂ ಗೋಮತಿಗೆ ಸಿಗುತ್ತಿದ್ದುದು ಅವಹೇಳನ, ಹೊಡೆತ, ಅವಮಾನ. ರೋಗಿಯಾದ ಅವಳ ಗಂಡನಿಂದಲೂ ಕತ್ತೆ ದುಡಿತ ಮಾಡಿಸುವ ಅವನ ಚಿಕ್ಕಪ್ಪ ಇವರ ಪಾಲಿಗೆ ಬಂದಿರುವ ತುಸು ಜಮೀನನ್ನೂ ನುಂಗಲು ಹಾತೊರೆಯುತ್ತಿದ್ದವನು. ಗೋಮತಿ ಮತ್ತು ಅವಳ ಗಂಡ ಪಿರಮನಿಗೆ ಅರೆಹೊಟ್ಟೆ ಆಹಾರ ಕೊಟ್ಟು ತನ್ನ ಹಿಡಿತದಲ್ಲಿರಿಸಿಕೊಂಡಿದ್ದಲ್ಲದೆ ಅವಳ ನಡತೆ ಸರಿಯಿಲ್ಲವೆಂದು ಹಿಂಸೆ ಕೊಡುತ್ತಿದ್ದ. ಹಿಂಸೆ ತಾಳಲಾರದೆ ಅವಳು ತವರಿಗೆ ಬಂದರೆ ಅಲ್ಲೇನಿದೆ.? ವಿಧವೆ ತಾಯಿ. ಅವಳ ಹೊಟ್ಟೆಗೇ ತತ್ವಾರ. ಮಗಳಿಗೆ ಸಮಾಧಾನ ಹೇಳಿ ತಿರುಗಿ ಕಳಿಸುವುದು ಅವಳಿಗೆ ಅನಿವಾರ್ಯ. ಬಡತನ ಒಂದೇ ಇದಕ್ಕೆ ಕಾರಣವಲ್ಲ, ಸುತ್ತಲಿನ ಜನರ ಬಗೆಗಿನ ಭಯವೂ ಇಲ್ಲಿ ಕೆಲಸ ಮಾಡುತ್ತದೆ. "ಜನ ಎಷ್ಟು ಆಡಿಕೊಳ್ಳುತ್ತಾರೆ ಗೊತ್ತಾ? ನಿನ್ನ ಕರ್ಮ ಏನಿದೆಯೋ ಅನುಭವಿಸು! ಬದುಕುತ್ತೀಯೋ ಸಾಯುತ್ತೀಯೋ, ನಿನಗೆ ಅದೇ ಮನೆ ಬಾಗಿಲು ಅಷ್ಟೆ" (ಪು.18) ಮಗಳ ಕಷ್ಟಕ್ಕಿಂತ ಜನ ಆಡಿಕೊಳ್ಳುತ್ತಾರೆನ್ನುವ ಭಯವೇ ತಾಯಿಗೆ ದೊಡ್ಡದೆನಿಸುತ್ತದೆ. ತಾಯಿಯೂ ತಿರುಗಿ ಹೋಗಲು ಹೇಳಿದಾಗ ಒಮ್ಮೆ ಆತ್ಮಹತ್ಯೆಯ ಯೋಚನೆ ಬಂದರೂ ಮಗ ಕುನ್ನುವಿನ ನೆನಪಾಗಿ ಮನೆಯ ದಾರಿ ಹಿಡಿಯುವ ಗೋಮತಿಯ ಮುಂದಿನ ಬದುಕು ಅಸಹನೀಯವಾದುದು.

ತವರಿನ ಬೆಂಬಲವಿಲ್ಲದೆ, ಮನೆಯವರ ಕಿರುಕುಳವನ್ನೂ ಸಹಿಸುವ ಗೋಮತಿಗೆ ಅವಳ ರೂಪವೇ ಶತ್ರು. ಹೆಣ್ಣಿಗೆ ರೂಪ ಮುಖ್ಯ ಎನ್ನುವ ಸಮಾಜದಲ್ಲಿ ಅವಳ ರೂಪವನ್ನು ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳುವ ಪುರುಷ ಸಂಖ್ಯೆ ಸಾಕಷ್ಟಿದೆ. ಸೊಸೆಯ ಸ್ಥಾನದಲ್ಲಿರುವ ಗೋಮತಿಯ ಮೇಲೆ ಕಲಿರಾಮ ಲೈಂಗಿಕ ದೌರ್ಜನ್ಯವೆಸಗಲು ಬಂದಾಗಲೆಲ್ಲ ಅವನಿಂದ ಉಪಾಯವಾಗಿ ತಪ್ಪಿಸಿಕೊಳ್ಳುವುದು ಅವಳ ದಿನಚರಿಯ ಭಾಗ. ಅವಳು ಓಡಿಹೋಗುವಂತೆ ಮಾಡಿ ಪಿರಮನನ್ನು ಜೀತದಾಳಿನಂತೆ ದುಡಿಸಿ ಜಮೀನು ಕಬಳಿಸುವ ಆತನ ಹುನ್ನಾರ ಗೋಮತಿಗೆ ಗೊತ್ತಿದ್ದರೂ ಆಕೆ ಅಸಹಾಯಕಳು. ಊರಲ್ಲಿ ಯಾರು ತಪ್ಪು ಮಾಡಿದರೂ ಅದು ಪಿರಮನ ಮೇಲೆ ಬರುವಂತೆ ಮಾಡಿ ಅವನನ್ನು ಕೆಲ ದಿನದಮಟ್ಟಿಗೆ ಜೈಲಿಗೆ ಅಟ್ಟಿ, ಗೋಮತಿಯನ್ನು ತನ್ನ ಹಿಡಿತದಲ್ಲಿರಿಸಿಕೊಳ್ಳಲು ನೋಡುವ ಕಲಿರಾಮನ ಕ್ರೌರ್ಯ ಅಸಹ್ಯ ಹುಟ್ಟಿಸುವಂಥದು. ಕಬ್ಬಿಣದ ಕೆಲಸ ಮಾಡುವ ಈ ಸಮುದಾಯ ತಿದಿಯೊತ್ತಿ ಕಬ್ಬಿಣವನ್ನು ಕಾಸಿ ಬಡಿಯುವಂತೆ ದಾಯಾದಿಗಳು ಗೋಮತಿಯ ಕುಟುಂಬವನ್ನು ಬಡಿಯುವ ರೀತಿ ಮನಸ್ಸನ್ನು ಕಲಕುತ್ತದೆ. ಮಳೆ ಬಂದರೆ ಒಳಗೆಲ್ಲ ನೀರು ಸುರಿವ ಮನೆ, ಮೈಮುಚ್ಚಲು ಬೇಕಾದ ಬಟ್ಟೆಯ ಕೊರತೆ, ಹೊಟ್ಟೆ ತುಂಬ ಉಣ್ಣುವಷ್ಟು ಕಾಳುಗಳಿಲ್ಲದ ಪರಿಸ್ಥಿತಿ, ಸಾಲದ್ದಕ್ಕೆ ದಾಯಾದಿಗಳ ಹಿಂಸೆ, ಚಿಕ್ಕಪ್ಪನ ತಪ್ಪು ಕಂಡೂ ಅವನನ್ನು ನಂಬುವ ಗಂಡ, ಇವೆಲ್ಲದರ ನಡುವೆ ಬದುಕು ಸವೆಸಬೇಕಾದ ಸನ್ನಿವೇಶ ಗೋಮತಿಯದು. ರೋಗಿ ಗಂಡನಿಗೆ ಅವಳು ಔಷಧಿ ತರುತ್ತಿದ್ದುದು ದನದ ಡಾಕ್ಟರರಿಂದ!

ಮಿಲಿಟರಿಯಲ್ಲಿದ್ದ ಮೈದುನ ಬಂದಾಗ ಅವಳಿಗೆ ತುಸು ನೆಮ್ಮದಿ. ಮನೆಯ ಹೀನಸ್ಥಿತಿಯನ್ನು ಸರಿಪಡಿಸಲು ಮುಂದಾಗುವಷ್ಟರಲ್ಲಿ ಅವನಿಗೆ ಸೈನ್ಯದಿಂದ ತುರ್ತಾಗಿ ಬರಲು ಕರೆ. ಅವನ ಸಾವು ಅವಳಿಗೆ ಇದ್ದ ಚಿಕ್ಕ ಆಸೆಯನ್ನೂ ಕಮರಿಸುತ್ತದೆ. ಬಡವರು ವಿಧಿವಾದವನ್ನು ಬಹಳವಾಗಿ ನಂಬುತ್ತಾರೆ. ಗೋಮತಿಯ ಬದುಕನ್ನು ಗಮನಿಸಿದರೆ ಓದುಗ ಕೂಡ ಅದನ್ನು ಒಪ್ಪುವ ಸ್ಥಿತಿಗೆ ಬರುವಂತಾಗುತ್ತದೆ. ಕಲಿರಾಮನ ಮಗ ಅತ್ಯಾಚಾರ ಮಾಡಲು ಪ್ರಯತ್ನಿಸಿದಾಗ ಅವನ ಮುಖಕ್ಕೆ ಕೊಳ್ಳಿ ಎಸೆದು ಓಡಿಹೋಗುವ ಗೋಮತಿಯನ್ನು ಯಾರೂ ಹುಡುಕಲು ಪ್ರಯತ್ನಿಸುವುದಿಲ್ಲ. ಅವಳನ್ನು ಹುಲಿ ತಿಂದಿರಬೇಕು ಎಂದು

ಸುಮ್ಮನಾಗುತ್ತಾರೆ. ಹೆಣ್ಣು ಎದುರಿಗಿರುವಾಗ ಎಲ್ಲ ರೀತಿಯಿಂದ ಅವಳನ್ನು ಬಳಸಿಕೊಳ್ಳುವ 'ಜನ' ಅವಳು ಓಡಿಹೋದಾಗ 'ಹೋಗಲಿ' ಎಂದು ತಟಸ್ಥವಾಗಿರುವುದು ಹೆಣ್ಣಿನ ಬಗೆಗಿನ ಧೋರಣೆಗೆ ಕನ್ನಡಿ ಹಿಡಿಯುತ್ತದೆ. ಅವಳು ಮನೆಯವರ ಹಿಂಸೆಗೆ ಹೆದರಿ ಮನೆಬಿಟ್ಟು ಹೋಗುತ್ತಾಳೆ. ಅವಳಿಗೆ ಆಶ್ರಯ ಕೊಡುವ ಖುಶಾಲನಿಗೆ ಅವಳ ರೂಪದ ಮೇಲೆ ಮೋಹ. ಇಬ್ಬರು ಹೆಂಡತಿಯರಿದ್ದರೂ ಅವಳನ್ನೂ ಹೆಂಡತಿಯಂತೆ ಇರಿಸಿಕೊಳ್ಳುವ ಆತ, ಅವಳು ಮಗನನ್ನು ನೋಡಿ ಬರಲು ಆಶಿಸಿದಾಗ ಹೇಳುವ ಮಾತು "ನಾಯಿರಂಡೆ, ಅವರೊಂದಿಗೇ ಸಾಯುವುದಾಗಿದ್ದರೆ ಇಷ್ಟೆಲ್ಲ ನಾಟಕ ಏಕೆ ಮಾಡಿದೆ?....ಹೆಣ್ಣು ನಾಯಿಯಂತೆ ಮನೆಮನೆಯ ಎಂಜಲು ತಿನ್ನಲು ಏಕೆ ಅಲೆಯುತ್ತಿದ್ದಿ?" ಎಂದು. ಅವರ ಸಮುದಾಯದಲ್ಲಿ ಗಂಡನಿಗೆ ಒಂದಿಷ್ಟು ಹಣ ಸಲ್ಲಿಸಿ ಹೆಣ್ಣನ್ನು ಇನ್ನೊಬ್ಬ ಪುರುಷ ತನ್ನವಳಾಗಿ ಮಾಡಿಕೊಳ್ಳಬಹುದು, ಆದರೆ ತಿರುಗಿ ಅವಳು ಗಂಡನ ಜೊತೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳುವಂತಿಲ್ಲ. ಅವನೊಂದಿಗೆ ಮಾತೂ ಆಡಬಾರದು. ಅನಿವಾರ್ಯವಾಗಿ ಅವಳು ಖುಶಾಲನ ಮನೆಯಲ್ಲಿದ್ದರೂ ಗಂಡ ಪಿರಮನ ಮೇಲೆ ಅನುಕಂಪ. ಹಾಗಾಗಿ, ಖುಶಾಲನಿಗೆ ತಿಳಿಯದಂತೆ ಅವನನ್ನು ನೋಡಲು ಹೋಗುತ್ತಾಳೆ. "ನಾಲ್ಕು ನೂರು ರುಪಾಯಿಗಳನ್ನು ನಾನು ಸಾಲ ತೆಗೆದುಕೊಂಡು ಕಟ್ಟಿದೆ. ಮೊದಲು ನಿಮ್ಮಪ್ಪನ ಹಣ ಎಣಿಸು, ಆಮೇಲೆ ಹೊಸಿಲಾಚೆ ಕಾಲಿರಿಸುವೆಯಂತೆ" ಎಂದು ಖುಶಾಲ ಕೂಗಾಡಿದ ಮೇಲೆ ಅವಳು ಅವನಿಗೆ ಗೊತ್ತಾಗದಂತೆ ಅಲ್ಲಿಂದ ಹೊರಟು ನಾನೂರು ರುಪಾಯಿ ಗಳಿಸಲು ಇನ್ನಿಲ್ಲದ ಕಷ್ಟಕ್ಕೆ ಸಿಲುಕುವುದು ಪಿರಮನ ಮೇಲಿನ ಪ್ರೀತಿಯಿಂದ. ಅವಳಿಗೆ ಸಿಗುವ ಎಲ್ಲ ಪುರುಷರೂ ಅವಳನ್ನು ಉಪಭೋಗಿಸಲು ಹಾತೊರೆಯುತ್ತಿದ್ದವರೇ. ಆದರೆ ಪಿರಮ ಕೈಲಾಗದಿದ್ದರೂ ಸಿಡುಕುತ್ತಿರಲಿಲ್ಲ. ಅವಳ ಕಷ್ಟ ತಿಳಿದಿದ್ದರೂ ಏನೂ ಮಾಡಲಾರದ ಅಸಹಾಯಕನಾಗಿದ್ದ. ಅವಳಿಗೆ ಅವನ ಮೇಲೆ ಮಮಕಾರವಿತ್ತು. ಅವಳು ಹಣ ಗಳಿಸಿ ಅದನ್ನು ಖುಶಾಲನಿಗೆ ಕೊಟ್ಟು ಋಣ ಹರಿಸಿಕೊಂಡು ಊರಿಗೆ ಬರುವಷ್ಟರಲ್ಲಿ ಕಲಿರಾಮ ಪಿರಮನನ್ನು ಕೊಂದು ಗುಡಿಸಿಲಿಗೆ ಬೆಂಕಿಹಚ್ಚಿರುತ್ತಾನೆ. ಅದುವರೆಗಿನ ಅವಳ ಪರಿಶ್ರಮ, ಕಷ್ಟ ಎಲ್ಲವೂ ವ್ಯರ್ಥವಾಗುತ್ತದೆ. ಕುನ್ನುವಿನ ಕೈಹಿಡಿದುಕೊಂಡು ಅವಳು ಕತ್ತಲಲ್ಲಿ ಮರೆಯಾಗುವುದರೊಂದಿಗೆ ಕತೆ ಮುಗಿಯುತ್ತದೆ.

"ದುಡಿದು ತಿನ್ನುವ ವರ್ಗದಲ್ಲಿ ಕೂಡ ಹೆಣ್ಣನ್ನು ಹೇಗೆ ಶೋಷಿಸ ಲಾಗುತ್ತದೆ ಎನ್ನುವುದನ್ನು ಕೃತಿ ಅನಾವರಣಗೊಳಿಸುತ್ತದೆ. 'ಅಂತಿಮ ಜ್ವಾಲೆ' ರಚನೆಯಾಗಿ ಮೂರು ದಶಕ ಕಳೆದಿದ್ದರೂ ಮಹಿಳೆಯ ಸ್ಥಿತಿಯಲ್ಲಿ ಹೆಚ್ಚಿನ ಬದಲಾವಣೆಯೇನೂ ಆಗಿಲ್ಲ. ಶೋಷಣೆಯ ಸ್ವರೂಪ ಬದಲಾಗಿದೆ ಅಷ್ಟೆ. 'ಗೋಮತಿಯ ಈ ಸತ್ಯಕಥೆಯನ್ನು ನಾನು ಇದ್ದದ್ದು ಇದ್ದಂತೆ ಬರೆದಿಲ್ಲ. ಒಂದು ವೇಳೆ ನಾನು ಸತ್ಯವನ್ನೇ ಬರೆದಿದ್ದರೂ ಜನರಿಗೆ ಅದು ಸತ್ಯ ಎನಿಸುತ್ತಿರಲಿಲ್ಲ. ಆದ್ದರಿಂದ ಅವಳ ಕೊನೆ ಇಲ್ಲದ ಯಾತನೆಗಳನ್ನು ಅಲ್ಲಲ್ಲಿ ಕಡಿಮೆಯಾಗಿಸುವ ಅಪರಾಧವನ್ನೇನೊ ಎಸಗಿದ್ದೇನೆ ನಿಜ, ಈ ಸತ್ಯಕಥೆ ಯಾರಿಗೂ ಸುಳ್ಳುಕಥೆ ಅನ್ನಿಸದಿರಲಿ ಎಂದು" ಎನ್ನುವ ಲೇಖಕ ಹಿಮಾಂಶುಜೋಶಿ ಅವರ ಮಾತು ಗೋಮತಿಯ ಬದುಕಿನ ಗೋಳಿನ ತೀವ್ರತೆಗೆ ಕನ್ನಡಿ ಹಿಡಿಯುತ್ತದೆ. ಇದು ಸತ್ಯಕಥೆ ಆಗಿರಲಿ ಇಲ್ಲದಿರಲಿ, ಅನೇಕ ಮಹಿಳೆಯರ ಬದುಕು ಇದಕ್ಕಿಂತ ಭಿನ್ನವಲ್ಲ. ಗುಡ್ಡಗಾಡು ಪ್ರದೇಶದ ಬದುಕನ್ನು ಕೃತಿ ತೆರೆದಿಡುತ್ತಿದ್ದರೂ ಬಯಲುನಾಡಿನ ಮಹಿಳೆಯ ಕಥೆ, ವ್ಯಥೆ ಇನ್ನೊಂದು ಬಗೆಯದು. ಐದನೆಯ ಆವೃತ್ತಿಗೆ ಲೇಖಕರು ಬರೆದ ಮುನ್ನುಡಿಯಲ್ಲಿ "ಯಾವ ಗೋಮತಿಯ ಸಂಘರ್ಷದ ಗಾಥೆ ಭಾರತದಲ್ಲಷ್ಟೇ ಅಲ್ಲ, ಚೀನಾ, ಬರ್ಮಾ, ನಾರ್ವೆ ಮೊದಲಾದ ಅನೇಕ ದೇಶಗಳ ಜನರಿಗೆ ತಮ್ಮದೇ ಎನಿಸುತ್ತದೋ, ಆ ಗೋಮತಿ ಈಗ ಎಲ್ಲಿದ್ದಾಳೆ ನೋಡೋಣ ಅನಿಸುತ್ತದೆ ಅಲ್ಲವೇ?" ಎಂದು ಪ್ರಶ್ನಿಸುತ್ತಾರೆ. ಕೆಲವೊಮ್ಮೆ ಮಹಿಳೆ ಯೊಬ್ಬಳ ಬದುಕಿನ ಸಂಘರ್ಷ ಹಲವರದೂ ಆಗಿರುವ ಪ್ರಾತಿನಿಧಿಕತೆ ಅದಕ್ಕೆ ಪ್ರಾಪ್ತವಾಗಿರುತ್ತದೆ. ಹಾಗಾಗಿ, ಗೋಮತಿಯ ಸಂಕಷ್ಟಗಳಿಗೆ ನಮ್ಮ ಮನಸ್ಸು ಮಿಡಿಯುತ್ತದೆ. ನಾವು ಎಲ್ಲೋ ಕಂಡು, ಕೇಳಿದ ಸಂಗತಿ ಎನಿಸುತ್ತದೆ.

ಮೂಲ ಹಿಂದಿಯಲ್ಲಿರುವ ಕೃತಿಯನ್ನು ಅನುವಾದ ಎನಿಸದಂತೆ ಡಾ॥ ಜಿ.ಎಸ್.ಕುಸುಮಗೀತ ಅಚ್ಚುಕಟ್ಟಾಗಿ ಕನ್ನಡಕ್ಕೆ ತಂದಿದ್ದಾರೆ.


ತನ್ನನ್ನು ತಾನೇ ಕಾಣಬಯಸಿದ ಸತ್ಯ ಕತೆ 'ನೋವು ತುಂಬಿದ ಬದುಕು'

"ನಿನ್ನ ಜೀವನದಲ್ಲಿ ಅಂಥದ್ದೇನಿದೆ? ಒಂದೆರಡು ಘಟನೆಗಳಷ್ಟೇ ಅಲ್ಲವೆ? ಬರೆಯ ತೊಡಗಿದರೆ ರಸೀದಿ ತಿಕೇಟಿನ ಬೆನ್ನಮೇಲೆ ಬರೆಯ ಬಹುದು" ಎಂದು ಅಮೃತಾ ಪ್ರೀತಮ್‌ಗೆ ಖುಶವಂತ್ ಸಿಂಗ್ ಹೇಳಿದ್ದರಂತೆ. ತಮ್ಮ ಆತ್ಮಕತೆಗೆ ಆಕೆ 'ರಸೀದಿ ತಿಕೇಟ್' ಎಂದೇ ಹೆಸರಿಟ್ಟರು. ಸಮಾಜದಲ್ಲಿ ಪ್ರತಿಷ್ಠಿತರೆನಿಸಿಕೊಂಡವರು, ಪ್ರಸಿದ್ಧರು ಮಾತ್ರ ಆತ್ಮಕತೆ ಬರೆಯುವುದರಲ್ಲಿ ಅರ್ಥವಿದೆ ಎನ್ನುವುದಾಗಿ ಒಂದು ಕಾಲಕ್ಕೆ ಭಾವಿಸಲಾಗಿತ್ತು. ಸಾಮಾನ್ಯ ಪುರುಷನೇ ಆತ್ಮಕತೆ ಬರೆಯುವುದು ತೀರ ವಿರಳವಾದ ಕಾಲದಲ್ಲಿ ಮಹಿಳೆ ಆತ್ಮಕತೆ ಬರೆಯಬಹುದೆನ್ನುವ ಕಲ್ಪನೆಯೇ ಅವಾಸ್ತವ, ಹಾಸ್ಯಾಸ್ಪದ ಎನ್ನುವುದನ್ನು ಖುಶವಂತಸಿಂಗರ ಈ ಮಾತು ಅನಾವರಣಗೊಳಿಸುತ್ತದೆ. ಮಹಿಳೆಯ ಬದುಕಿನಲ್ಲಿ ಏನಿರುತ್ತದೆ? ಎನ್ನುವ ಲಘುಧೋರಣೆ ಇದರ ಹಿಂದಿನದು. ಮಹಿಳಾ ಅಭಿವ್ಯಕ್ತಿಗೆ ಅವಕಾಶವೇ ಇಲ್ಲದಿರುವಾಗ ಆಕೆಗೆ ತನ್ನ ಬದುಕಿನ ನೋವು, ನಲಿವುಗಳನ್ನು ತೆರೆದಿಡಲು ಸಾಧ್ಯವೂ ಇರಲಿಲ್ಲ. ಮಹಿಳೆ ಹೆಚ್ಚು ಹೆಚ್ಚು ಅಭಿವ್ಯಕ್ತಿಗೆ ತೊಡಗಿಕೊಳ್ಳಲು ಪ್ರಾರಂಭವಾದ ಮೇಲೆ ಮಹಿಳಾ ಆತ್ಮಕತೆ ಕಾಣಿಸಿ ಕೊಳ್ಳತೊಡಗಿದೆ. ಓದು ಬರಹ ಬಲ್ಲ, ಸೃಜನಶೀಲ ಮಹಿಳೆಯರು ಮಾತ್ರ (ತೀರ ಕಡಿಮೆ ಪ್ರಮಾಣದಲ್ಲಿ) ಆತ್ಮಕತೆ ಬರೆಯಲು ಶುರುಮಾಡಿದರು. ಇತ್ತೀಚಿನ ದಿನಗಳಲ್ಲಿ ಬದುಕಿನ ಬೇಗೆಯಲ್ಲಿ ಬೆಂದವರ ಆತ್ಮಕತೆಗಳು ಪ್ರಕಟವಾಗ ತೊಡಗಿವೆ. ಬೇಬಿ ಹಾಲ್ದಾರರ **'ನೋವು ತುಂಬಿದ ಬದುಕು'** ಈ ಸಾಲಿಗೆ ಸೇರುವ ಆತ್ಮಕತೆ.

'ನೋವು ತುಂಬಿದ ಬದುಕು'ವಿನಲ್ಲಿ ಬೇಬಿ ಹಾಲ್ದಾರ್ ಚಿಕ್ಕ ಹುಡುಗಿಯಾಗಿದ್ದಾಗಿನಿಂದ ಆತ್ಮಕತೆ ಪ್ರಕಟಣೆಯವರೆಗಿನ ತಮ್ಮ ಬದುಕನ್ನು ತೆರೆದಿಟ್ಟಿದ್ದಾರೆ. ಕೆಳವರ್ಗದ ಬಡ ಕುಟುಂಬದಲ್ಲಿ ಹುಟ್ಟಿದ ಆಕೆಯ ಬದುಕಿನ ಕತೆ ಭಾರತದ ಕೋಟ್ಯಂತರ ಹೆಣ್ಣುಮಕ್ಕಳ ಕತೆಯೂ ಹೌದು. ಮಕ್ಕಳ ಬಗೆಗಿನ ತಂದೆಯ ಬೇಜವಾಬ್ದಾರಿಯ ನಡವಳಿಕೆ, ಹೆತ್ತವರ ನಡುವಿನ ಜಗಳ, ತಾಯಿಯ ನೋವು, ಎಲ್ಲ ಊರು-ಕೇರಿಗಳಲ್ಲಿ ಕಾಣುವ ಸಾಮಾನ್ಯ ದೃಶ್ಯ. ಗಂಡನ ಅನ್ಯ ಸಂಬಂಧವನ್ನು ಸಹಿಸಿ ಸಾಕಾಗಿ ತಾಯಿ ಮನೆಬಿಟ್ಟು ಹೋದದ್ದು ವಿಶಿಷ್ಟವಾದುದು. ಬೇಬಿಯ ತಾಯಿಯ ಈ ತೀರ್ಮಾನ ಪ್ರತಿಭಟನೆಯ ಒಂದು ಮಾದರಿಯೇ ಹೌದು. ತಾಯಿಯಿಲ್ಲದೆ ಮಕ್ಕಳು ಪಡುವ ಪಾಡನ್ನು ಆಕೆ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಅವ್ವನ ಬದಲು ಅಪ್ಪನೇ ಮನೆಬಿಟ್ಟು ಹೋಗಿದ್ದರೆ? ಎಂದು ಆಕೆಗೆ ಅನಿಸಿದ್ದಿದೆ. ಅಂಥ ಬಡತನದಲ್ಲಿಯೂ ಮಗಳನ್ನು ಓದಿಸಬೇಕೆಂದು ತಾಯಿ ಆಶಿಸಿದ್ದರು. ತಂದೆಗೆ ಮಕ್ಕಳ ಓದಿರಲಿ, ಅವರ ಹೊಟ್ಟೆ ಬಟ್ಟೆಯ ಬಗೆಗೂ ಕಾಳಜಿ ಇರಲಿಲ್ಲ. ಯಾವುದೇ ಮುಜುಗರವಿಲ್ಲದೆ ತಂದೆಯ ಅಲಾಲುಟೋಪಿತನವನ್ನು, ಹೆಣ್ಣಿನ ಖಯಾಲಿಯನ್ನು ಕೃತಿ ನೇರವಾಗಿ ಬಿಚ್ಚಿಡುತ್ತದೆ.

ಮಗಳು ಶಾಲೆಗೆ ಹೋಗಬೇಕೆಂದು ಎಷ್ಟೇ ಹಾತೊರೆದರೂ ತಂದೆಗೆ ಅದರ ಗಮನವಿರದೆ ಎರಡನೆಯ ಹೆಂಡತಿಯ ಕುಮ್ಮಕ್ಕೂ ಸೇರಿ ಹದಿಮೂರಕ್ಕೆ ಮಗಳ ಮದುವೆ ಮಾಡುತ್ತಾನೆ. ಅಲ್ಲಿಂದ ಬೇಬಿಯ ಕಷ್ಟಪರಂಪರೆಗೆ ಇನ್ನಷ್ಟು ಕೋಡು ಮೂಡುತ್ತದೆ. ತವರಿನಲ್ಲಿ ಬಡತನವಿತ್ತು; ತಂದೆಯ ನಿರ್ಲಕ್ಷ್ಯವಿತ್ತು. ಆದರೂ ಒಡಹುಟ್ಟಿದವರ ಪ್ರೀತಿ ಇತ್ತು. ತನಗೆ ಯಾರೂ ಇಲ್ಲವೆಂದು ಹೇಳಿ ಬೇಬಿಯನ್ನು ಮದುವೆಯಾಗುವ ಶಂಕರನಿಗೆ ಬೇಕಿದ್ದುದು ಪ್ರೀತಿಯಾಗಿರಲಿಲ್ಲ; ಕೇವಲ ದೈಹಿಕ ಕಾಮನೆಗಳನ್ನು ಪೂರೈಸುವ ಹೆಣ್ಣು. ಹಾಗಾಗಿ, ಹೆಂಡತಿಯ ಪ್ರತಿಯೊಂದು ನಡೆನುಡಿಗಳನ್ನೂ ಆತ ನಿಯಂತ್ರಿಸುತ್ತಿದ್ದ. ಹೆಂಡತಿಯ ಬೇಕುಬೇಡಗಳ ಬಗೆಗೆ ಆತ ಕುರುಡನಾಗಿದ್ದ. ಒಮ್ಮೊಮ್ಮೆ ಗಂಡನ ಬಗ್ಗೆ ಮಮತೆ ಅನಿಸುವುದಾಗಿ ಬರೆದಿದ್ದರೂ ಅವನ ನಡವಳಿಕೆಯಲ್ಲಿ ಹೆಂಡತಿಯ ಅನಿಸಿಕೆಗಳನ್ನು ಮಾನ್ಯ ಮಾಡುವ ಯಾವ ಸೂಚನೆಯೂ ಕಂಡುಬರುವುದಿಲ್ಲ. ಹದಿಮೂರಕ್ಕೆ ಮದುವೆಯಾಗುವ ಹೆಣ್ಣಿಗೆ ಗಂಡನ ಮನೆ, ದಾಂಪತ್ಯದ ಬಗ್ಗೆ ಯಾವ ಪರಿಕಲ್ಪನೆ ಇರಲು ಸಾಧ್ಯ? ಸಂಧ್ಯಾದೀದಿಯ ನಿರ್ದೇಶನದಲ್ಲಿ ಕೆಲಮಟ್ಟಿಗೆ ಬದುಕನ್ನು ಹಸನುಗೊಳಿಸಿ ಕೊಳ್ಳಲು ಪ್ರಯತ್ನಿಸಿದರೂ ಅದು ಒಮ್ಮುಖದ ಪ್ರಯತ್ನವಾಗಿ ಬದುಕು ಅಸಹನೀಯವೇ ಆಗುತ್ತಿತ್ತು. ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಎನ್ನುವಂತೆ ತಂದೆ ನಡೆದುಕೊಳ್ಳುತ್ತಿದ್ದ. ಪ್ರೀತಿಯಿಂದ ಕಾಣದೆ, ಎಲ್ಲವನ್ನೂ ಸಂಶಯದ ಕಣ್ಣಿನಿಂದ ನೋಡುವ ಗಂಡನ ಸ್ವಭಾವದಿಂದ ಬೇಸತ್ತು ಜಗಳವಾಗಿ, ಬೇಬಿ ತವರಿಗೆ ಹೋದರೆ ತಂದೆಯಿಂದ ಸಿಗುತ್ತಿದ್ದ ಸಾಂತ್ವನ ಅಷ್ಟಕ್ಕಷ್ಟೆ.

ನೋವು ತುಂಬಿದ ಬದುಕು
ಆತ್ಮಕಥಾನಕ ಕಾದಂಬರಿ (2009)
ಮೂಲ ಬಂಗಾಳಿ: ಬೇಬಿ ಹಾಲ್ದಾರ್
ಅನು : ಜಿ. ಕುಮಾರಪ್ಪ
ಪುಟ : 148
ಬೆಲೆ : ರೂ. 90/-
ಪ್ರ : ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿ., ಬೆಂಗಳೂರು



ಕೆಲವೊಮ್ಮೆ ಹೀಗೆ ಹೋದ ಮಗಳಿಗೆ ಪ್ರೀತಿ ತೋರಿಸುತ್ತಿದ್ದರೂ ಎರಡು ಮೂರು ದಿನಗಳಲ್ಲಿ ಮಗಳು ಅಲ್ಲಿಂದ ಮತ್ತೆ ಗಂಡನ ಮನೆಗೇ ವಾಪಸ್ ಹೋಗುವ ಪರಿಸರ ನಿರ್ಮಾಣವಾಗುತ್ತಿತ್ತು. ಅಪ್ರಾಪ್ತ ವಯಸ್ಸಿನ ಹುಡುಗಿಯನ್ನು ಗೊತ್ತುಗುರಿ ಇಲ್ಲದ ಗಂಡಿಗೆ ಮದುವೆ ಮಾಡುವುದರಿಂದ ಉಂಟಾಗುವ ಎಲ್ಲ ಸಮಸ್ಯೆಗಳೂ ಇಲ್ಲಿ ತಲೆದೋರುತ್ತವೆ. ಜಗಳ ವಾದಾಗಲೆಲ್ಲ ತಾನು ತವರಿಗೆ ಮತ್ತೆ ಮತ್ತೆ ಹೋಗುತ್ತಿದ್ದ ಸಂಗತಿಯನ್ನು ಲೇಖಕಿ ಮುಚ್ಚಿಡುವುದಿಲ್ಲ. ತನ್ನ ತಪ್ಪನ್ನು ಸಮರ್ಥಿಸುವುದು ಮನುಷ್ಯನ ಸಹಜ ಗುಣ. ಆದರೆ ಇಲ್ಲಿ ಆಕೆ ಎಲ್ಲವನ್ನು ನಿರಾಳವಾಗಿ ಬರೆದಿದ್ದಾರೆ.

ಅಜಿತ ಎನ್ನುವ ಹುಡುಗನ ಪ್ರಕರಣದಲ್ಲಿ ಹೆಂಡತಿಯ ಯಾವ ತಪ್ಪೂ ಇಲ್ಲದಿದ್ದರೂ ಗಂಡನಿಗೆ ಹೆಂಡತಿಯ ಬಗೆಗೆ ಸಂಶಯ. ಬೇಬಿ ಅಜಿತನಿಗೆ ಬುದ್ಧಿ ಹೇಳಿದರೂ ಅವನು ಅವಳ ಬೆನ್ನು ಬಿಡದಿರುವುದಕ್ಕೆ ಅವಳು ತುಸುವೂ ಕಾರಣಳಲ್ಲ. ಯಾರೋ ಗಂಡಸು ಮಾಡುವ ತಪ್ಪು ಹೆಣ್ಣಿಗೆ ಹೇಗೆ ಸುತ್ತಿಕೊಳ್ಳುತ್ತದೆ ಎನ್ನುವುದಕ್ಕೆ ಈ ಘಟನೆ ಸಾಕ್ಷಿ. ದುಲಾಲನ ಸ್ನೇಹದ ಬಗ್ಗೆ ಗಂಡ ಸಂಶಯಿಸಿದರೂ ದುಲಾಲನ ಸಹಾಯವನ್ನೇ ಆಕೆ ಪಡೆಯುವುದು ಬೇಬಿಯ ಗಟ್ಟಿತನಕ್ಕೆ ಉದಾಹರಣೆ. ಹೆರಿಗೆಯ ಸಂದರ್ಭದಲ್ಲಿನ ಶಂಕರನ ನಡವಳಿಕೆ ಅಮಾನವೀಯವಾದ್ದು. ಇದರಿಂದ ಬೇಸರಗೊಂಡರೂ, ಬೇಬಿ ಬದುಕನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಎರಡನೆಯ ಬಾರಿ ಗರ್ಭಿಣಿಯಾದಾಗ ಗಂಡನ ಹೊಡೆತದಿಂದ ಹೊಟ್ಟೆಯಲ್ಲಿರುವ ಮಗುವಿಗೆ ಪೆಟ್ಟಾಗಿ ಗರ್ಭ ಇಳಿದ ಮೇಲೂ ಗಂಡನೊಂದಿಗೆ ಬದುಕು ಮುಂದುವರಿಯುತ್ತದೆ. ಎಲ್ಲ ಕಷ್ಟಗಳ ನಡುವೆ ಒಮ್ಮೊಮ್ಮೆ ಸುಖದ ಮಿಂಚು ಆಕೆಯ ಬದುಕಿನಲ್ಲಿ ಕಾಣಿಸಿಕೊಳ್ಳುವುದೂ ಇದೆ. ಶಂಕರನ ತಂದೆ ಸೊಸೆಯನ್ನು ಮಗಳಂತೆ ನಡೆಸಿಕೊಳ್ಳುವ ರೀತಿ, ಅವರ ಮನೆಯಲ್ಲಿ ಮತ್ತು ಅತ್ತೆ ಮನೆಯಲ್ಲಿ ಕಳೆಯುವ ಸಮಯ ಬದುಕನ್ನು ಸಹ್ಯವಾಗಿಸುವ ಸಂಗತಿಗಳು.

ತಾಯಿ ಮನೆಬಿಟ್ಟು ಹೋದುದರಿಂದ ತನ್ನ ಬದುಕು ಹೀಗಾಯ್ತು ಎಂದು ಯೋಚಿಸುವ ಲೇಖಕಿ ತನ್ನ ಮಕ್ಕಳನ್ನು ಜೋಪಾನವಾಗಿ ನೋಡಿಕೊಳ್ಳುತ್ತಾರೆ. ತನಗೆ ದಕ್ಕದ ಶಿಕ್ಷಣ ತನ್ನ ಮಕ್ಕಳಿಗೆ ಸಿಗಬೇಕೆನ್ನುವ ಹಂಬಲ ಆಕೆಯದು. ಗಂಡ ಮನೆಗೆ ಸಾಲುವಷ್ಟು ಹಣವನ್ನು ಕೊಡುವುದಿಲ್ಲವೆಂದು ಆಕೆ ಹಳಹಳಿಸುತ್ತ ಕೂರದೆ ತನಗೆ ತಿಳಿದಂತೆ ಮಕ್ಕಳಿಗೆ ಪಾಠ ಹೇಳಿಕೊಟ್ಟು ಹಣ ಸಂಪಾದನೆ ಮಾಡಲು ಪ್ರಾರಂಭಿಸುವ ವಿಷಯ ಆಕೆಯ ಗಟ್ಟಿತನದ ಪ್ರತೀಕ. ಗಂಡನ ಹಿಂಸೆಯನ್ನು ತಾನು ಅನುಭವಿಸುತ್ತಿದ್ದರೂ ಬೇರೆ ಹೆಣ್ಣುಮಕ್ಕಳ ಕಷ್ಟ ಕುರಿತಂತೆ ಆಕೆಗೆ ಅನುಕಂಪ. ಕೆಳ ಮಧ್ಯಮವರ್ಗದ ಮಹಿಳೆಯರು ಕುಟುಂಬದೊಳಗಿನ ಹಿಂಸೆಯನ್ನು ಹೊರಜಗತ್ತಿಗೆ ತೋರಿಸದೆ ತಮ್ಮ ಬದುಕಿಗೇ ಇತಿಶ್ರೀ ಹಾಡಬೇಕಾಗಿ ಬಂದುದನ್ನು ಬೇಬಿಯ ಅಕ್ಕ ಸುಶೀಲಳ ಸಾವು ಮತ್ತು ಪನ್ನಾ ಹೆಂಡತಿಯ ಕೊಲೆ ಪ್ರಕರಣ ಅನಾವರಣಗೊಳಿಸುತ್ತವೆ. ಪನ್ನಾ ಎನ್ನುವ ವ್ಯಕ್ತಿ ಹೆಂಡತಿಗೆ ಆ್ಯಸಿಡ್ ಸುರಿದು ಬೆಂಕಿ ಹಚ್ಚಿದ. ಆ ಹೆಂಡತಿ ಪೊಲೀಸರಿಗೆ ತಿಳಿಸಿದ್ದು 'ನಾನೇ ಬೆಂಕಿ ಹಚ್ಚಿಕೊಂಡಿದ್ದೇನೆ. ಇದರಲ್ಲಿ ನನ್ನ ಗಂಡನ ತಪ್ಪೇನೂ ಇಲ್ಲ' ಎಂಬುದಾಗಿ! ಸಾಮಾನ್ಯ ಮಹಿಳೆಯರಂತೆ ಲೇಖಕಿ ಗಂಡನ ಹಿಂಸೆಯನ್ನು ಸಹಿಸುತ್ತ ಅಲ್ಲಿಯೇ ಬದುಕದೆ, ಗಂಡನ ಬೇಜವಾಬ್ದಾರಿತನದಿಂದ-ಅದಕ್ಕಿಂತ ಹೆಚ್ಚಾಗಿ, ಸಂಶಯದಿಂದ ಬೇಸತ್ತು ಮಕ್ಕಳನ್ನು ಕಟ್ಟಿಕೊಂಡು ಮನೆಯಿಂದ ಹೊರನಡೆಯುತ್ತಾರೆ. ಕೆಲಸಕ್ಕಾಗಿ ಅಲೆಯುವ ದುರ್ಭರ ಸನ್ನಿವೇಶ ಓದುಗರ ಕಣ್ಣನ್ನು ತೇವಗೊಳಿಸುತ್ತದೆ. ಆದರೆ ಆಕೆಯ ಛಲ ಬೆರಗುಗೊಳಿಸುತ್ತದೆ.

ಗಂಡಿನ ಆಶ್ರಯವಿಲ್ಲದೆ ಮಹಿಳೆ ಬದುಕನ್ನು ಕಟ್ಟಿಕೊಳ್ಳುವುದು ಎಷ್ಟು ತ್ರಾಸದಾಯಕ, ಸಮಾಜ ಅವಳನ್ನು ಹೇಗೆ ಕಾಣುತ್ತದೆ ಎನ್ನುವುದು ಇಲ್ಲಿ ಅನಾವರಣಗೊಂಡಿದೆ. ಕೆಟ್ಟವರಿರುವಂತೆ ಒಳ್ಳೆಯವರೂ ಇದ್ದಾರೆ ಎನ್ನುವುದು ಬೇಬಿಯ ಬದುಕನ್ನು ಸಹ್ಯಗೊಳಿಸುತ್ತದೆ. ತನ್ನ ಪ್ರಾಮಾಣಿಕತೆ, ನೇರ ನಡೆನುಡಿಗಳಿಂದ ತಾತುಷ್ ಎಂಬುವವರ ಪ್ರೀತಿ, ವಿಶ್ವಾಸ ಗಳಿಸುವ ಬೇಬಿ, ಮನೆಯವರಲ್ಲಿ ಒಬ್ಬಳಾಗಿ ನೆಮ್ಮದಿ ಕಂಡುಕೊಳ್ಳುವಲ್ಲಿಗೆ ಬದುಕು ನಿಲ್ಲುವುದಿಲ್ಲ. ಅವಳಿಗೆ ಆಶ್ರಯವಿತ್ತ ತಾತುಷ್ ಅವರಿಗೆ ಆಕೆಯ ಸಾಮರ್ಥ್ಯದ ಬಗೆಗೆ ತುಂಬು ಭರವಸೆ. ಆತ್ಮಕತೆ ಬರೆಯುವಂತೆ ಸಾಕಷ್ಟು ಒತ್ತಾಯಿಸುವ ಅವರ ಅಭಿಮಾನವೇ 'ನೋವು ತುಂಬಿದ ಬದುಕು' ಸೃಷ್ಟಿಗೆ ಕಾರಣ. ಮಹಿಳೆಯ ಜೀವನದಲ್ಲಿ ಏನಿದೆ? ಎನ್ನುವ ಇತರ ಪುರುಷರಿಗಿಂತ ತೀರ ಭಿನ್ನವಾಗುವ ತಾತುಷ್ ಅಂಥವರ ಪ್ರೋತ್ಸಾಹ ಮಹಿಳೆಗೆ ತನ್ನ ಸಾಮರ್ಥ್ಯದ ಬಗೆಗೆ ಭರವಸೆ ಮೂಡಲು ಸಹಾಯವಾಗಬಲ್ಲುದು.

Edited, Printed, Published and owned by Rajeshwari H.S., No. 114/5, 9th Cross, 2nd Main, Chamarajpet, Bangalore - 560 018.
Printed at ILA Mudrana, No. 36, 40 Ft. Road, Raghavanagara, New Timberyard Layout, Bangalore - 560 026.
Published at No. 114/5, 9th Cross, 2nd Main, Chamarajpet, Bangalore - 560 018. Editor : Rajeshwari H.S.

ಪಶ್ಚಿಮ ಬಂಗಾಲ ಬಹಳ ಮುಂದು ವರಿದ ರಾಜ್ಯ, ಜೊತೆಗೆ ಬಹಳ ಕಾಲದಿಂದ ಕಮ್ಯೂನಿಷ್ಟರು ಆಡಳಿತ ನಡೆಸುತ್ತಿರುವ ರಾಜ್ಯ. ಬೇರೆ ರಾಜ್ಯಗಳಲ್ಲಿ ಇರುವಷ್ಟು ಹಿಂಸೆ ಅಲ್ಲಿ ಇರಲಿಕ್ಕಿಲ್ಲವೆಂದು ಭಾವಿಸಿದ್ದರೆ ಅದು ಸುಳ್ಳು ಎನ್ನುವುದನ್ನು ಈ ಕೃತಿ ತೋರಿಸುತ್ತದೆ. ರಾಯರಿಗೆ ರಾಜ್ಯವಾದರೂ ರಾಗಿ ಬೀಸುವುದು ತಪ್ಪದು ಎನ್ನುವ ಗಾದೆ ನಿಜವೆನಿಸುತ್ತದೆ. ಕೃತಿಯನ್ನು ಓದುತ್ತಿದ್ದಂತೆ ತ್ರಿವೇಣಿಯವರ 'ಕೀಲುಗೊಂಬೆ' ಕಾದಂಬರಿಯ ನೆನಪಾಗುತ್ತದೆ. ತೀರ ಕಡಿಮೆ ಶಿಕ್ಷಣ ಪಡೆದಿರುವ ಮಹಿಳೆ ತನ್ನ ಬದುಕನ್ನು ದೂರ ನಿಂತು ನೋಡಲು ಸಾಧ್ಯವಾದುದು ಸಾಮಾನ್ಯ ಸಂಗತಿಯಲ್ಲ. ಲೇಖಕಿ ನೋವನ್ನು ಕಾಣಿಸುತ್ತಾರೆಯೇ ವಿನಾ ಗೊಳೋ ಎಂದು ಅಳುವುದಿಲ್ಲ. ಒಂದು ಸಾಹಿತ್ಯ ಕೃತಿಯ ರಚನೆಗೂ ಆತ್ಮಕತೆಯ ಬರವಣಿಗೆಗೂ ಬಹಳ ವ್ಯತ್ಯಾಸವಿದೆ. ಡಾ. ಸಬಿಹಾ ಭೂಮಿಗೌಡ ಅವರು ಹೇಳುವಂತೆ "ಆತ್ಮಕತೆಯಲ್ಲಿ ಏನನ್ನು ಬರೆಯಬೇಕು? ಎಷ್ಟನ್ನು ಬರೆಯಬೇಕು? ಎಲ್ಲಿಂದ ಆರಂಭ? ಎಲ್ಲಿಗೆ ನಿಲುಗಡೆ? – ಇದು ಪ್ರತಿಯೋರ್ವರನ್ನೂ ಕಾಡುವ ಸಂಗತಿ. ಆತ್ಮಪ್ರಶಂಸೆಯೂ ಆಗದೆ, ಆತ್ಮನಿಂದನೆಗೂ ಇಳಿಯದೆ, ಸಹಜೀವಿಗಳ ತೇಜೋವಧೆಗೂ ಎಳಸದೆ ನಮ್ಮ ಬದುಕನ್ನು ನಿರೂಪಿಸುವುದು ಹೇಗೆ? ಇದು ಒಂದು ಬಗೆಯ ಸವಾಲು." (ಮಹಿಳಾ ಆತ್ಮಕತೆಗಳು: ಅನುಸಂಧಾನ ಪು.5) ಇದನ್ನು ಬೇಬಿ ಹಾಲ್ದಾರ್ ಸಮರ್ಥವಾಗಿ ನಿಭಾಯಿಸಿದ್ದಾರೆ. ಅವರ ಈ ಕೃತಿ ನೋವಿನಲ್ಲಿ ನಲುಗುತ್ತಿರುವ ಅನೇಕ ಸೋದರಿಯರಿಗೆ ಧೈರ್ಯ ನೀಡಬಲ್ಲುದು.

ಸಾಮಾನ್ಯ ಮಹಿಳೆಯೊಬ್ಬಳು ಬರೆದ ಆತ್ಮಕತೆ ಇದಾದರೂ ಇದಕ್ಕೆ ಒಂದು ವಿಶೇಷ ವಾದ ಪ್ರಾಧಾನ್ಯ ದೊರೆತಿದೆ. ಈ ಪುಸ್ತಕ ಕುರಿತಂತೆ ಈ ಹಿಂದೆ ಪತ್ರಿಕೆಯಲ್ಲಿ ವರದಿ ಯಾಗಿತ್ತು. ಮೂಲ ಬಂಗಾಲಿಯಿಂದ ಕನ್ನಡಕ್ಕೆ ಅನುವಾದಿಸುವ ಮೂಲಕ ಜಿ. ಕುಮಾರಪ್ಪ ಅವರು ಕನ್ನಡದ ಓದುಗರಿಗೆ ಕೃತಿಯನ್ನು ಓದುವ ಅವಕಾಶವನ್ನು ಒದಗಿಸಿದ್ದಾರೆ. ಅನುವಾದದ ಭಾಷೆ ಅಷ್ಟೊಂದು ಹಿತವೆನಿಸು ವುದಿಲ್ಲ. ಶಿಷ್ಟಭಾಷೆಯ ನಡುವೆ ಇದ್ದಕ್ಕಿದ್ದಂತೆ ಚಿತ್ರದುರ್ಗದ ಕನ್ನಡ ನುಸುಳಿಬಿಡುತ್ತದೆ. ಇದೊಂದು ನ್ಯೂನತೆಯನ್ನು ಹೊರತು ಪಡಿಸಿದರೆ ಕೃತಿ ಚೆನ್ನಾಗಿ ಬಂದಿದೆ.

●



ನನ್ನ ಪ್ರೀತಿಯ ಗೆಳತಿಗೆ

– *ನೆದಾಲ್ ಅಬ್ಬಾಸ್*

ನಿನ್ನ ಸುದ್ದಿ ಮತ್ತೆ ತಿಳಿದು ಸಂತೋಷವಾಯಿತು
ನೀನು ಕ್ಷೇಮವೆಂದು ಭಾವಿಸಿದ್ದೇನೆ
ನಿನ್ನ ಅಣ್ಣನ ನೆನಪು?
ಖಂಡಿತ ನನಗಿದೆ
ಸಲಾಮ್

ನಾವಿಬ್ಬರೂ
ಬಾಗ್ದಾದ್‌ನ ನಮ್ಮ ಮನೆ
ಛಾವಣಿಯ ಮೇಲೆ
ಆಟವಾಡುತ್ತಿದ್ದೆವು
ಹೇಗಿದ್ದಾನೆ ಅವನು?

ಮಧ್ಯಾಹ್ನ
ಬಾಗ್ದಾದಿನ ಸುಡು ಸೂರ್ಯನಡಿಯಲ್ಲಿ
ಕಹ್ರಮಾನ ವೃತ್ತದಲ್ಲಿ
ಬಿಳಿಯ ದಿಶ್‌ದಶಾ ತೊಟ್ಟ
ಬಿಳಿಗಡ್ಡದವನು
ಮಣಭಾರದ ಕಲ್ಲಂಗಡಿ ಹೊತ್ತು
ಮನೆಯ ಕಡೆ
ನಿಧಾನ ಹೆಜ್ಜೆ ಹಾಕುತ್ತಿದ್ದ
ಕಾಲ ಬೆರಳುಗಳು
ಮಣ್ಣಬಣ್ಣದ ಮೋಆದ್ ಗೆ
ಅಂಟಿಕೊಂಡಂತೆ

ಮಧ್ಯಾಹ್ನ
ಕಹ್ರಮಾನ ವೃತ್ತದಲ್ಲಿ
ಬಾಗ್ದಾದಿನ ಸುಡು ಸೂರ್ಯನಡಿಯಲ್ಲಿ...
ಮೂರು ಮಿಲಿಟರಿ ವಾಹನಗಳು
ಭರ್ರೆಂದು ಹಾದು ಹೋದವು
ವಾಸಸ್ಥಳಗಳಲ್ಲಿ
ಸ್ಫೋಟ
ಬಿಳಿಗಡ್ಡದವ
ನೆಲದ ಮೇಲೀಗ ಅಂಗಾತ
ದಿಟ್ಟಿಸುತ್ತವೆ ಕಣ್ಣುಗಳು
ರಕ್ತ ಸುರಿವ
ಬಾಗ್ದಾದ್ ಸೂರ್ಯನ ಹೃದಯವನ್ನು
ಕೆಂಪಿನಿಂದ ಮುಚ್ಚಿವೆ
ಅವನ ದಿಶ್‌ದಶಾ, ಎದೆ, ತೋಳುಗಳು
ಮಣ್ಣ ಬಣ್ಣದ ಮೋಆದ್
ನೆತ್ತರಿನ ಕೊಳದಲ್ಲಿ ಮುಳುಗಿದೆ

ನಿನ್ನ ಅಣ್ಣನ ನೆನಪು?
ಸಲಾಮ್
ಖಂಡಿತ ನನಗಿದೆ
ತನ್ನದೇ ಕೆಟ್ಟ ಜೋಕುಗಳಿಗೆ
ಜೋರು ನಗುತ್ತಿದ್ದ
ಹೇಗಿದ್ದಾನೆ ಅವನು?
ಈಗಲೂ ಹಾಗೆ ನಗುತ್ತಾನಾ?
ಬಹುಶಃ

–(ಅಂದುಬ್ ಹೆಣ್ಣು ಮಗಳ ಕವಿತೆ)

ಅನು: ಎಂ.ಆರ್. ಕಮಲ

ದಿಶ್‌ದಶಾ : ಮುಸ್ಲಿಮರು ತೊಡುವ ನಿಲುವಂಗಿ, **ಮೋಆದ್** : ಮಣ್ಣ ಬಣ್ಣದ ಭಾರದ ಚಪ್ಪಲಿಗಳು

Registered with Registrar of Newspapers of India under No. KARKAN/2007/22289
'NAMMA MANASA', REGD. No. : MAG(3) NPP/399(A) / 2006-07 KA/BGS/2074/2007-09

ನಮ್ಮ ಮಾನಸ

- ಮಹಿಳೆಯರಿಗೆ ಸಂಬಂಧಿಸಿದ ಲೇಖನಗಳು, ವರದಿಗಳು ವಿಶ್ಲೇಷಣೆಗಳು, ವಿಮರ್ಶೆಗಳು, ಅನುಭವಗಳು, ಕತೆ-ಕವನಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.
- ಪತ್ರಿಕೆಯು ವಿಷಯಾಧರಿತವಾಗಿದ್ದು, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಮಹಿಳೆಯರ ಬದುಕಿನ ಮೇಲೆ ಪರಿಣಾಮ ಬೀರುವ ಸಾಮಾಜಿಕ, ರಾಜಕೀಯ, ಆರ್ಥಿಕ ವಿಚಾರಗಳನ್ನು ಚರ್ಚಿಸಲಾಗಿದೆ.
- ವಿವಾಹ, ಕುಟುಂಬದಂತಹ ಸಾಮಾಜಿಕ ಸಂಸ್ಥೆಗಳು, ಮನೆಗೆಲಸ, ಸಂಬಳರಹಿತ ದುಡಿಮೆ, ಆರ್ಥಿಕ ನೀತಿ, ಜಾತಿ, ವರ್ಗ, ಸೌಂದರ್ಯ, ಲಿಂಗ, ಹೆಣ್ತನ ಮುಂತಾದ ವಿಷಯಗಳನ್ನು ಚರ್ಚೆಗೊಳಪಡಿಸಿ ಪ್ರಕಟಿಸಲಾಗಿದೆ. ಗುತ್ತಿಗೆ ಪೌರಕಾರ್ಮಿಕರ ಹೋರಾಟಗಳಿಗೆ ಸ್ಪಂದಿಸಿ ಲೇಖನಗಳನ್ನು ಪ್ರಕಟಿಸಿದೆ.
- ಆರೋಗ್ಯ, ಲೈಂಗಿಕತೆ, ಅಪಾಯಕಾರೀ ಗರ್ಭ ನಿರೋಧಕ ಗಳು, ಆರ್ಥಿಕತೆ ಮತ್ತು ಅಭಿವೃದ್ಧಿ, ಅಭಿವೃದ್ಧಿ ಯೋಜನೆ ಗಳು ಮುಂತಾದ ವಿಚಾರಗಳನ್ನು ವಿಮರ್ಶೆಗೊಳ ಪಡಿಸಲಾಗಿದೆ.
- ಅಣ್ವಸ್ತ್ರೀಕರಣ, ಮಿಲಿಟರೀಕರಣ, ಜಾಗತೀಕರಣದಂಥ ಬೆಳವಣಿಗೆಗಳನ್ನು ಮಹಿಳಾ ದೃಷ್ಟಿಕೋನದಿಂದ ಪ್ರಶ್ನಿಸಲಾಗಿದೆ.
- ಇತರ ಪ್ರಜಾಸತ್ತಾತ್ಮಕವಾದ ಸಂಘಟನೆಗಳೊಡನೆ ಕೋಮುವಾದ, ಸಮಾನ ನಾಗರಿಕ ಸಂಹಿತೆ, ಮೀಸಲಾತಿ, ಲೈಂಗಿಕತೆ, ಪರಿಸರ, ಸ್ಥಳಾಂತರ ಮುಂತಾದ ವಿವಾದಗಳನ್ನು ಕುರಿತ ಚರ್ಚೆಗಳಲ್ಲಿ, ಆಂದೋಲನಗಳಲ್ಲಿ ಪಾಲ್ಗೊಳ್ಳಲಾಗಿದೆ.
- ಸ್ವಸಹಾಯ ಸಂಘಗಳನ್ನು ರಚಿಸುವ ಮೂಲಕ ಮಹಿಳೆಯರ ಸಬಲತೆಗೆ ಪ್ರೋತ್ಸಾಹ ನೀಡಲಾಗಿದೆ.
- ನಮ್ಮದೇ ಮಿತಿಯಲ್ಲಿ ತೊಂದರೆಗೊಳಗಾದ ಮಹಿಳೆಯರಿಗೆ ಸಲಹೆ, ನೈತಿಕ ಬೆಂಬಲಗಳಲ್ಲದೆ ಕಾನೂನಿನ ನೆರವನ್ನು ನೀಡುತ್ತಿದ್ದೇವೆ.
- ಮಹಿಳೆಯರು ತಾವಿದ್ದೆಡೆಯಲ್ಲಿ ಮಹಿಳಾ ಪತ್ರಿಕೆಗಳನ್ನು ಹೊರತರಲು ಪ್ರಯತ್ನಿಸಿದಲ್ಲಿ, ಗುಂಪುಗಳನ್ನು ರಚಿಸಬೇಕಾದಲ್ಲಿ ಸಹಕರಿಸಲು ಉದ್ದೇಶಿಸಿದ್ದೇವೆ.

Registered Magazine

Posted on 9th of every month at Chamarajpet Post Office

ವಿಳಾಸ :
ನಮ್ಮ ಮಾನಸ
114/5, 9ನೇ ತಿರುವು, 2ನೇ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು - 560 018